ಶನಿವಾರ, ಮಾರ್ಚ್ 1, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪುಸ್ತಕ ಮೇಳ

ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಸರ್ಕಾರ ಆಯೋಜಿಸಿದ್ದ ಪುಸ್ತಕ ಮೇಳದಲ್ಲಿ ಮಹಿಳೆಯೊಬ್ಬರು ಪುಸ್ತಕ ಖರೀದಿಸಿದರು



ಪುಸ್ತಕ ಮೇಳ: ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರ ಭೇಟಿ

ಶಕ್ತಿಸೌಧ ಕಣ್ತುಂಬಿಕೊಂಡ ಜನತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಸ್ತಕ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ವಿಧಾನಸಭೆ ಸಚಿವಾಲಯವು ಪ್ರಥಮ ಬಾರಿಗೆ ಆಯೋಜಿಸಿರುವ 'ಪುಸ್ತಕ ಮೇಳ'ಕ್ಕೆ ಭೇಟಿ ನೀಡಿದ ಸಾಮಾನ್ಯ ಜನರು, ನಾಡಿನ ಶಕ್ತಿ ಸೌಧವನ್ನು ಕಣ್ತುಂಬಿಕೊಂಡರು.

ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳಿಗೆ ಮಾತ್ರ ಪ್ರವೇಶ ಸೀಮಿತವಾಗಿದ್ದ ವಿಧಾನಸೌಧದ ಆವರಣಕ್ಕೆ, ಮೊದಲ ಬಾರಿಗೆ ಸಾರ್ವಜನಿಕರಿಗೂ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಕಾರಣದಿಂದ ಶಾಲಾ, ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಶುಕ್ರವಾರ ವಿಧಾನಸೌಧಕ್ಕೆ ಬಂದಿದ್ದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್, ಅಧಿವೇಶನ ನಡೆಯುವ ಸಭಾಂಗಣವನ್ನು ವೀಕ್ಷಿಸಿ, ಸಂತಸಪಟ್ಟರು. ಆವರಣದಲ್ಲಿ ಹೂವಿನಿಂದ ಕಂಗೊಳಿಸುತ್ತಿರುವ ಮರಗಳು, ಗಿಡಗಳು, ಹೋರಾಟಗಾರರು, ರಾಜಕೀಯ ನಾಯಕರ ಪ್ರತಿಮೆಗಳ ಎದುರು ವಿದ್ಯಾರ್ಥಿಗಳು, ಸಾರ್ವಜನಿಕರು ನಿಂತು ಮೊಬೈಲ್‌ನಲ್ಲಿ ಫೋಟೊ ತೆಗೆಸಿಕೊಂಡರು. ವೇದಿಕೆಯಲ್ಲಿ ನಡೆಯುತ್ತಿದ್ದ ವಿಚಾರಗೋಷ್ಠಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮಳಿಗೆಗಳಲ್ಲಿ ಪುಸ್ತಕ ವೀಕ್ಷಿಸಿದ ಪೊಲೀಸ್ ಸಿಬ್ಬಂದಿ ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ವಿಧಾನಸೌಧದ ಆವರಣದಲ್ಲಿ 151 ಪುಸ್ತಕ ಮಳಿಗೆಗಳನ್ನು ತೆರೆಯಲಾಗಿದೆ. ಪುಸ್ತಕ ಪ್ರಿಯರಿಗೆ ಇದೊಂದು ಹಬ್ಬವಾಗಿದ್ದು, ಮಳಿಗೆಗಳಿಗೆ ಭೇಟಿ ನೀಡಿ, ತಮ್ಮ ಇಷ್ಟದ ಲೇಖಕರ ಪುಸ್ತಕಗಳನ್ನು ಖರೀದಿಸಿದರು. ಕರ್ತವ್ಯಕ್ಕೆ ನಿಯೋಜಿಸಿರುವ ಪೊಲೀಸ್ ಸಿಬ್ಬಂದಿ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಸಹ ಮಳಿಗೆಗಳಲ್ಲಿ ಪುಸ್ತಕ ವೀಕ್ಷಿಸುತ್ತಿರುವ ದೃಶ್ಯ ಕಂಡುಬಂತು. ಬೇರೆ ಭಾಷೆಯಿಂದ ಭಾಷಾಂತರ ಆಗಿರುವ ಪುಸ್ತಕಗಳು ಸಹ ಲಭ್ಯವಿವೆ.

ಮಾರ್ಚ್ 2ರವರೆಗೂ ನಿತ್ಯ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ ಮೇಳ ನಡೆಯಲಿದೆ. ಪುಸ್ತಕ ಪ್ರದರ್ಶನ, ಸಂವಾದ, ಕವಿಗೋಷ್ಠಿ, ಪುಸ್ತಕ ಬಿಡುಗಡೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಹೊಸ ಪುಸ್ತಕಗಳ ಬಿಡುಗಡೆ ಮಾಡಲು ಮೇಳದಲ್ಲಿ ಒಂದು ಮಳಿಗೆ ಮೀಸಲಿಡಲಾಗಿದೆ.

'ಪುಸ್ತಕ ಮೇಳದ ಅಂಗವಾಗಿ ವಿಧಾನಸೌಧಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಪ್ರಸಕ್ತ ಸಾಲಿನ ಅನುದಾನದಲ್ಲಿ ₹2 ಲಕ್ಷ ಮಿತಿಯೊಳಗೆ ಶಾಸಕರು ಪುಸ್ತಕ ಖರೀದಿ ಮಾಡಲು ಅವಕಾಶ ನೀಡಲಾಗಿದೆ. ಶಾಸಕರು ಪುಸ್ತಕಗಳನ್ನು ಖರೀದಿಸಿ ಆಯಾ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲಾ-ಕಾಲೇಜುಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ' ಎಂದು ಸ್ಪೀಕರ್ ಯು.ಟಿ. ಖಾದರ್ ತಿಳಿಸಿದರು.

ಪುಸ್ತಕ ಮೇಳಕ್ಕೆ ಎಲ್ಲಾ ಗೇಟ್‌ಗಳಿಂದ ಮುಕ್ತ ಪ್ರವೇಶ ಎಂಬುದಾಗಿ ತಿಳಿಸಲಾಗಿತ್ತು. ಆದರೆ, ಭದ್ರತೆಯ ದೃಷ್ಟಿಯಿಂದ ಒಂದು ಗೇಟ್‌ನಲ್ಲಿ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಿದ್ದರಿಂದ ಜನರು ಬಿಸಿಲಿನಲ್ಲಿ ಸರದಿ ಸಾಲಿನಲ್ಲಿ ನಿಂತಿದ್ದರು. ಪೊಲೀಸರು ಪ್ರತಿಯೊಬ್ಬರನ್ನು ತಪಾಸಣೆ ಮಾಡಿ ಒಳಗೆ ಬಿಟ್ಟರು.

ತಂತ್ರಜ್ಞಾನವೋ, ಕೌಶಲವೋ...

ಪ್ರಜಾವಾಣಿ ವಾರ್ತೆ



ನಗರದಲ್ಲಿ ನಡೆಯುತ್ತಿರುವ ಗೆಫೆಕ್ಸ್ ಮೇಳದಲ್ಲಿ ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರವನ್ನು ಇರಿಸಿಕೊಂಡು ಕಲಾವಿದರೊಬ್ಬರು 3ಡಿ ಮಾದರಿ ರೂಪಿಸಿದರು. ಮತ್ತೊಬ್ಬ ಕಲಾವಿದ ಅದೇ ಭಾವಚಿತ್ರ ಬಳಸಿಕೊಂಡು ಮಣ್ಣಿನ ಕಲಾಕೃತಿ ರೂಪಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಒಂದೆಡೆ ಕಲಾವಿದನ ಕೈಚಳಕ ಮತ್ತು ಕೌಶಲ. ಮತ್ತೊಂದೆಡೆ ಅವನ್ನು ಸರಿಗಟ್ಟಿಸುವಂತಹ ತಂತ್ರಜ್ಞಾನ. ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರವನ್ನು ಮಾದರಿಯಾಗಿ ಇರಿಸಿಕೊಂಡು ಕಲಾವಿದರೊಬ್ಬರು ಮಣ್ಣಿನ ಕಲಾಕೃತಿ ರೂಪಿಸಿದರು. ಅದೇ ಕಲಾವಿದ ತಿಮ್ಮಕ್ಕ ಅವರ ಭಾವಚಿತ್ರವನ್ನು ಬಳಸಿಕೊಂಡು ತಂತ್ರಜ್ಞಾನದ ಮೂಲಕ 3 ಆಯಾಮದ (3ಡಿ) ಮಾದರಿ ರಚಿಸಿ, ಮುದ್ರಿಸಿದರು. ಎರಡರಲ್ಲಿ ಕಲಾವಿದನ ಕೃತಿ ಯಾವುದು..., ಯಂತ್ರ ಸೃಷ್ಟಿಸಿದ ಪ್ರತಿಮೆ ಯಾವುದು...

ಹೀಗೆ ಸೃಜನಶೀಲತೆಯ ಭಿನ್ನ ಆಯಾಮಗಳನ್ನು ಪರಸ್ಪರ ಮುಖಾಮುಖಿಯಾಗಿಸಲು ಅವಕಾಶ ಮಾಡಿಕೊಟ್ಟಿದ್ದು ಬೆಂಗಳೂರು ಗೆಫೆಕ್ಸ್-2025 ಮೇಳ. ತಿಮ್ಮಕ್ಕನ ಪ್ರತಿಮೆಯೊಂದು ಉದಾಹರಣೆಯಷ್ಟೆ. ಮೇಳದಲ್ಲಿ ಸೇರಿದ್ದ ಕಲಾವಿದರು ತಮ್ಮ ಕಲ್ಪನೆಗಳಿಗೆ ಮಣ್ಣಿನಲ್ಲಿ ಜೀವ ತುಂಬಿದರು. ಅದನ್ನೇ ಕಂಪ್ಯೂಟರ್‌ಗಳಲ್ಲೂ ರೂಪಿಸಿ, ಪರಸ್ಪರ ಹೋಲಿಸಿ ನೋಡಿದರು. ಗರುಡ, ಕಾಳಿಂಗಮರ್ದನ, ಷೇಕ್ಸ್‌ಪಿಯರ್... ಇವು ಅಲ್ಲಿ ರೂಪುತಳೆದ ಕಲಾಕೃತಿಗಳ ಉಲ್ಲೇಖಗಳಷ್ಟೆ.

ಹೀಗೆ ರೂಪಿಸಿದ ಕಲಾಕೃತಿಗಳನ್ನು ಸ್ಪರ್ಧೆಗೆ ಸಲ್ಲಿಸಲೂ ಮೇಳವು ಅವಕಾಶ ಒದಗಿಸಿತ್ತು. ಕಲಾವಿದರು ಮಾತ್ರವಲ್ಲ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಸ್ಥಳದಲ್ಲೇ ನೋಂದಾಯಿಸಿಕೊಂಡು ಈ ಸಾಧ್ಯತೆಗಳನ್ನು ಪರಿಶೀಲಿಸಬಹುದಾಗಿತ್ತು ಮತ್ತು ಅನುಭವಿಸಬಹುದಾಗಿತ್ತು. ಮೇಳದ ವೇದಿಕೆಗಳಲ್ಲಿ ನಡೆಯುತ್ತಿದ್ದ ಸಂವಾದಗಳಿಗೆ ಕಿವಿಯಾದವರು ಕೆಲವರಾದರೆ, ಕಾರ್ಯಾಗಾರಗಳಲ್ಲಿ ಪ್ರಯೋಗಕ್ಕೆ ಒಡ್ಡಿಕೊಂಡವರು ಹಲವರು.

'ಸ್ಕೆಚ್ ಅಲೇ' ಭಾಗವಾಗಿ ರೂಪಿಸಲಾಗಿದ್ದ ವೇದಿಕೆ ಮೇಲೆ ರೂಪದರ್ಶಿ ಒಬ್ಬರು ಹಾಜರಾಗಿ, ವಿವಿಧ ಭಂಗಿ ತೋರುತ್ತಾ ಹೋದರು. ವೇದಿಕೆ ಸುತ್ತು ವರೆದಿದ್ದ ಕಲಾವಿದರು ಆ ಭಂಗಿಗಳನ್ನು ಕಾಗದದ ಮೇಲೆ ಮೂಡಿಸಿದರು. ಬೆಳಿಗ್ಗೆಯಿಂದ ಸಂಜೆಯವರೆಗೂ ಹಲವು ರೂಪದರ್ಶಿಗಳು ವೇದಿಕೆಯನ್ನು ಕಂಗೊಳಿಸಿ ಹೋದರೆ, ಕಲಾವಿದರ ಕಾಗದದ ಮೇಲೆ ಹತ್ತಾರು ಕೃತಿಗಳು ಜೀವತಳೆದವು.

ಮೇಳದಲ್ಲಿ ಅಳವಡಿಸಲಾಗಿದ್ದ ಅತಿವೇಗದ-ಅತ್ಯಾಧುನಿಕ ಕಂಪ್ಯೂಟರ್‌ಗಳನ್ನು ಬಳಸಿಕೊಂಡು ಡಿಜಿಟಲ್ ಗೇಮ್‌ಗಳನ್ನು ರೂಪಿಸುವ ಕೆಲಸವನ್ನು ತಂತ್ರಜ್ಞರು ಮಾಡಿದರು. ಗೇಮಿಂಗ್ ಆಸಕ್ತರು, ಕಲಾವಿದರು ಹೇಳಿದ ವಿವರಣೆ-ಕಲ್ಪನೆಗಳನ್ನು ಗೇಮ್‌ಗೆ ಇಳಿಸುವ ಹೊಣೆ ತಂತ್ರಜ್ಞರದ್ದು. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಾಂಶಗಳನ್ನು ಬಳಸಿಕೊಂಡು ಸಾಮಾನ್ಯರೇ ಗೇಮಿಂಗ್ ಕೋಡ್ ಬರೆಯುವ ಪ್ರಯೋಗ ನಡೆಯಿತು. ಅದರ ಆಧಾರದಲ್ಲಿ ರೂಪುಗೊಂಡ ಗೇಮ್‌ಗಳನ್ನು ಪರದೆ ಮೇಲೆ ಪ್ರದರ್ಶಿಸಲಾಯಿತು.

ಮೇಳದ ಕೊನೆ ದಿನವಾದ ಶನಿವಾರವೂ ಇಂತಹ ಹಲವು ಪ್ರಯೋಗ ನಡೆಯಲಿವೆ. ದೇಶದ ಬೇರೆಡೆಗಳಿಂದ ಬಂದ ಕಲಾವಿದರು ತಮ್ಮ ಆ್ಯನಿಮೇಟೆಡ್ ಕಿರುಚಿತ್ರಗಳು, 3ಡಿ ವಿಡಿಯೊಗಳು, ಡಿಜಿಟಲ್ ಗೇಮ್‌ಗಳನ್ನು ಪ್ರದರ್ಶಿಸಲಿದ್ದಾರೆ.

'ನಾಯಕತ್ವ ಇಂದು ಮತ್ತು ನಾಳೆ' ಗೋಷ್ಠಿಯಲ್ಲಿ ಅನುಭವ ಹಂಚಿಕೊಂಡ ಉದ್ಯಮಿ ಕ್ಯಾಪ್ಟನ್ ಗೋಪಿನಾಥ್

'ವಿಮಾನಯಾನ ಸಂಸ್ಥೆ: 3 ವರ್ಷ ದೆಹಲಿಗೆ ಅಲೆದಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಮಾನಯಾನ ಸಂಸ್ಥೆ ಆರಂಭಿಸುವ ಸಲುವಾಗಿ ಪರವಾನಗಿ ಪಡೆಯಲು ದೆಹಲಿಗೆ ಮೂರು ವರ್ಷ ಅಲೆದಾಡಿದೆ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಿ ಒಂದು ರೂಪಾಯಿ ಲಂಚ ನೀಡದೆ ಪರವಾನಗಿ ಪಡೆದು ಸಂಸ್ಥೆ ಆರಂಭಿಸಿದೆ' ಎಂದು ಉದ್ಯಮಿ ಕ್ಯಾಪ್ಟನ್ ಗೋಪಿನಾಥ್ ಹೇಳಿದರು.

ವಿಧಾನಸೌಧದ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ನಾಯಕತ್ವ-ಇಂದು ಮತ್ತು ನಾಳೆ' ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಾವುದೇ ಕೆಲಸವಾಗಬೇಕಾದರೆ ಲಂಚ ನೀಡಬೇಕಿತ್ತು. ಭ್ರಷ್ಟಾಚಾರ ಇರುವುದು ಸಹಜ. ಆದರೆ ಎಲ್ಲ ಅಧಿಕಾರಿಗಳು ಭ್ರಷ್ಟರಾಗಿರುವುದಿಲ್ಲ. ಗುರಿ ಮುಟ್ಟುವ ತನಕ ಪ್ರಯತ್ನ ನಿಲ್ಲಿಸಬಾರದು. ಆಗ ಮಾತ್ರ ಯಶಸ್ಸು ಸಾಧ್ಯ' ಎಂದು ಕಿವಿ ಮಾತು ಹೇಳಿದರು.

'ಹಳ್ಳಿಯ ಸರ್ಕಾರಿ ಶಾಲೆ, ಬಳಿಕ ಮಿಲಿಟರಿ ಶಾಲೆಯಲ್ಲಿ ಶಿಕ್ಷಣ ಪಡೆದೆ.



ವಿಧಾನಸೌಧದ ಆವರಣದಲ್ಲಿ ಆಯೋಜಿಸಿದ್ದ ಗೋಷ್ಠಿಯಲ್ಲಿ ಬಡಗಲಪುರ ನಾಗೇಂದ್ರ, ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಮತ್ತು ಚಿದಾನಂದ ಪಟೇಲ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನನ್ನ ಆತ್ಮೀಯ ಸ್ನೇಹಿತನಾಗಿದ್ದ ಪೈಲಟ್‌ಗೆ ಕೆಲಸವಿರಲಿಲ್ಲ. ಆಗಲೇ ವಿಮಾನಯಾನ ಸಂಸ್ಥೆ ಆರಂಭಿಸುವ ಬಗ್ಗೆ ಯೋಚನೆ ಬಂತು. ಕೊಲಂಬಸ್ ಸಣ್ಣ ದೋಣಿಯಲ್ಲಿ ಅಮೆರಿಕ ಕಂಡು ಹಿಡಿದ. ಹೊಸದನ್ನು ಕಂಡು ಹಿಡಿಯಬೇಕೆಂದರೆ ಊರು, ಗಡಿ, ಕಾಡು ದಾಟಿ ಹೋಗಬೇಕು. ಕನಸು, ಸಾಹಸ, ಪರಿಶ್ರಮ ಹಾಗೂ ಸತತ ಪ್ರಯತ್ನವಿದ್ದರೆ ಯಶಸ್ಸು ಸಾಧ್ಯ ಎಂಬುದಕ್ಕೇ ನಾನೇ ಸಾಕ್ಷಿ. ನಾಯಕನಾದವನಿಗೆ ಅಹಂಕಾರ ಇರಬಾರದು, ಆತ್ಮವಿಶ್ವಾಸ ಇರಬೇಕು' ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ತಲೆಮಾರುಗಳ ಮಧ್ಯೆ ದೊಡ್ಡ ಅಂತರವಿದೆ. ದೇಶಕ್ಕೆ ಈಗ ಯುವ ನಾಯಕತ್ವದ ಅವಶ್ಯಕತೆ ಇದೆ. ನಾಯಕ ಆದವನು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದೆ ಸಾಗಬೇಕು. ಕೇವಲ ಭಾಷಣ, ಕಟೌಟ್ ಹಾಕಿಸಿಕೊಳ್ಳುವುದರಿಂದ ನಾಯಕನಾಗುವುದಿಲ್ಲ' ಎಂದು ಹೇಳಿದರು.

'ಚಳವಳಿಗಳಿಗೆ ದೊಡ್ಡ ಶಕ್ತಿಯೇ ಇದೆ. ಗಾಂಧೀಜಿ, ಪ್ರೊ. ನಂಜುಂಡಸ್ವಾಮಿ ಅವರಂತಹ ಹೋರಾಟಗಾರರು ಕರೆ ನೀಡಿದರೆ ಲಕ್ಷಾಂತರ ಜನರು ಸೇರುತ್ತಿದ್ದರು. ನಾಯಕನಾದವನಿಗೆ ಸಮಾಜದ ಸಮಸ್ಯೆಗಳು ಗೊತ್ತಿರಬೇಕು, ನುಡಿದಂತೆ ನಡೆಯಬೇಕು. ಇತ್ತೀಚಿನ ದಿನಗಳಲ್ಲಿ ನಿರುದ್ಯೋಗದ ಕಾರಣಕ್ಕೆ ಯುವಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರಿ ಉದ್ಯೋಗ ನೆಚ್ಚಿಕೊಳ್ಳದೇ, ಖಾಸಗಿ ಕ್ಷೇತ್ರಗಳಲ್ಲೂ ಉದ್ಯೋಗ ಅವಕಾಶ ಬಳಸಿಕೊಳ್ಳಬೇಕು. ಸಿನಿಮಾ ಹಾಗೂ ಕ್ರಿಕೆಟ್ ತಾರೆಯರನ್ನು ನೋಡಿ ಬದುಕು ರೂಪಿಸಿಕೊಳ್ಳಲು ಸಾಧ್ಯವಿಲ್ಲ. ವಾಸ್ತವ ಅರಿತು ಬದುಕು ಕಟ್ಟಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ನ್ಯೂಸ್ 18 ಸುದ್ದಿ ವಾಹಿನಿಯ ರಾಜಕೀಯ ವಿಭಾಗದ ಮುಖ್ಯಸ್ಥ ಚಿದಾನಂದ ಪಟೇಲ್ ಸಂವಾದ ನಿರ್ವಹಿಸಿದರು. ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಹಾಜರಿದ್ದರು.

> **ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದಿಂದ ದೃಶ್ಯ ಮತ್ತು ಮುದ್ರಣ ಮಾಧ್ಯಮಕ್ಕೆ ಯಾವುದೇ ಅಪಾಯವಿಲ್ಲ. ಎ.ಐ ಅನ್ನು ನಿತ್ಯದ ಕೆಲಸದಲ್ಲಿ ಬಳಸಿಕೊಳ್ಳಬಹುದು.**
> **ಹರಿಪ್ರಸಾದ್**
> ನ್ಯೂಸ್ 18 ಸುದ್ದಿವಾಹಿನಿ ಸಂಪಾದಕ

ಕಾರ್ಯಕ್ರಮದಲ್ಲಿ ಅವ್ಯವಸ್ಥೆ: ನಾಗತಿಹಳ್ಳಿ ಆಕ್ರೋಶ

ವೇದಿಕೆ ಒಂದರಲ್ಲಿ ಆಯೋಜಿಸಿದ್ದ ತಮ್ಮ ಸಂಪಾದಕತ್ವದ 'ಪುಟ್ಟಿಗೊಂದು ಪುಟ್ಟಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿನ ಅವ್ಯವಸ್ಥೆಗೆ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

ಧ್ವನಿವರ್ಧಕದ ವ್ಯವಸ್ಥೆ ಸರಿಯಾಗಿರಲಿಲ್ಲ. ವೇದಿಕೆ 2ರಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಕೊನೆ ಕ್ಷಣದಲ್ಲಿ ವೇದಿಕೆ 1ಕ್ಕೆ ಸ್ಥಳಾಂತರಿಸಲಾಯಿತು. ಗಣ್ಯರು, ಪ್ರೇಕ್ಷಕರು ಗೊಂದಲಕ್ಕೆ ಒಳಗಾದರು.

ರಾಜ್ಯಸಭೆಯ ಮಾಜಿ ಸದಸ್ಯೆ ಬಿ.ಜಯಶ್ರೀ ಪುಸ್ತಕ ಬಿಡುಗಡೆ ಮಾಡಿದರು. ಅಂಕಣಗಾರ್ತಿ ದೀಪಾ ಹಿರೇಗುತ್ತಿ ಅವರು ಪುಸ್ತಕ ಕುರಿತು ಮಾತನಾಡಿದರು. ಹತ್ತು ನಿಮಿಷದಲ್ಲಿ ಕಾರ್ಯಕ್ರಮ ಮುಕ್ತಾಯವಾಯಿತು.

ಬಳಿಕ ಮಾತನಾಡಿದ ನಾಗತಿಹಳ್ಳಿ ಚಂದ್ರಶೇಖರ್, 'ಯಾವುದೇ ಕಾರ್ಯಕ್ರಮ ಆಯೋಜನೆಗೆ ಪೂರ್ವಸಿದ್ಧತೆ ಇರಬೇಕು. ಇಲ್ಲಿ ಅವ್ಯವಸ್ಥೆ ಇದೆ. ಮುಂದಿನ ಬಾರಿ ಸಾಹಿತಿಗಳ ಸಮಿತಿ ರಚಿಸಿ, ಸಲಹೆ ಪಡೆಯಬೇಕು. ಇಲ್ಲವಾದರೆ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕ್ರಮಕ್ಕೂ ಇದಕ್ಕೂ ಯಾವುದೇ ವ್ಯತ್ಯಾಸ ಇರುವುದಿಲ್ಲ' ಎಂದರು.

'ಲೋಪವಾಗಿದ್ದರೆ ಕ್ಷಮೆ ಯಾಚಿಸುತ್ತೇವೆ' ಎಂದು ವಿಧಾನಸಭೆ ಕಾರ್ಯದರ್ಶಿ ವಿಶಾಲಾಕ್ಷಿ ಹೇಳಿದರು.

ಯೋಜನೆ ಹಣ ದುರುಪಯೋಗ ಪ್ರತಿಭಟನಕಾರರ ಆಕ್ರೋಶ



ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರು, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ (ಟಿಎಸ್‌ಪಿ) ಮೀಸಲಿಟ್ಟ ಹಣವು ದುರುಪಯೋಗ ಆಗುತ್ತಿದೆ ಎಂದು ಆರೋಪಿಸಿ, ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯ ಸಮಿತಿ (ಮಾದಿಗ, ಛಲವಾದಿ, ತ್ರಿಮತಸ್ಥ ಹಾಗೂ ಅಲೆಮಾರಿ ಸಮುದಾಯಗಳ ಮಹಾಮೈತ್ರಿ) ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

ಎಸ್‌ಸಿಎಸ್‌ಪಿ-ಟಿಎಸ್‌ಪಿ ಕಾಯ್ದೆಯ ಕಲಂ 7 'ಡಿ' ಅನ್ನು ರದ್ದುಪಡಿಸಿದಂತೆ ಕಲಂ 7 'ಬಿ' ಮತ್ತು 7 'ಸಿ' ಅನ್ನೂ ರದ್ದುಪಡಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು. ಮುಖಂಡರಾದ ಬಸವರಾಜ್ ಕೌತಾಳ್, ಎಂ.ಮಂಜುನಾಥ್, ನರಸಿಂಹಮೂರ್ತಿ,ಡಿ.ಟಿ. ವೆಂಕಟೇಶ್, ಶಿವಣ್ಣ ಉಪಸ್ಥಿತರಿದ್ದರು.

ಶನಿವಾರ, ಮಾರ್ಚ್ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 60 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ

ಬದುಕು ಕುಸಿದಾಗ ಭರವಸೆಯ ದೀವಿಗೆ ಮುಡಿಸುತ್ತ...

ಪತ್ನಿ ವಿರುದ್ಧ ವಿಡಿಯೊ ಮಾಡಿಟ್ಟು ಟಿಸಿಎಸ್ ಉದ್ಯೋಗಿ ಆತ್ಮಹತ್ಯೆ 10

ಬೇಡಿಕೆ ಹೆಚ್ಚಿದ್ದರೂ ಲೋಡ್ ಶೆಡ್ಡಿಂಗ್ ಇಲ್ಲ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,198 ▼	22,124 ▼	₹89,610 (ಬೆಂಗಳೂರು) ▼	₹99,200 (ಬೆಂಗಳೂರು) ▼	87.37 ▲

ಡಿಸೆಂಬರ್ ತ್ರೈಮಾಸಿಕದಲ್ಲಿ ಹಿಂದಿನ ಆರ್ಥಿಕ ವರ್ಷಕ್ಕಿಂತ ಕುಸಿತ | ಜಿಡಿಪಿ ಶೇ 6.2ರಷ್ಟು ಪ್ರಗತಿ ದಾಖಲು | ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಬೆಳವಣಿಗೆ ದರದಲ್ಲಿ ಅಲ್ಪ ಪ್ರಗತಿ

ಆರ್ಥಿಕ ಬೆಳವಣಿಗೆ ಇನ್ನೂ ಕುಂಠಿತ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 6.2ರಷ್ಟು ಪ್ರಗತಿ ಕಂಡಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 9.5ರಷ್ಟು ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 3.3ರಷ್ಟು ಇಳಿಕೆಯಾಗಿದೆ. ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿದ್ದ ಶೇ 6.8ಕ್ಕಿಂತಲೂ ಕಡಿಮೆಯಾಗಿದೆ.

ಕೃಷಿ ವಲಯ ಹೊರತುಪಡಿಸಿ ಗಣಿಗಾರಿಕೆ, ತಯಾರಿಕೆ ಸೇರಿ ಇತರೆ ವಲಯಗಳಲ್ಲಿ ಬೆಳವಣಿಗೆ ಕುಸಿತವೇ ಇದಕ್ಕೆ ಕಾರಣ ಎಂದು ಶುಕ್ರವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ತಿಳಿಸಿದೆ.



ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯು ಎರಡು ವರ್ಷಗಳ ಕನಿಷ್ಠ ಮಟ್ಟವಾದ ಶೇ 5.6ರಷ್ಟು ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಅಲ್ಪಮಟ್ಟಿಗೆ ಚೇತರಿಕೆ ಕಂಡಿದೆ. ಸರ್ಕಾರದ ವೆಚ್ಚದ ಪ್ರಮಾಣದಲ್ಲಿ ಏರಿಕೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸರಕು ಮತ್ತು ಸೇವೆಗೆ ಬೇಡಿಕೆ ಹೆಚ್ಚಳವಾಗಿದೆ. ಸೇವಾ ವಲಯದ ರಫ್ತು ಸದೃಢವಾಗಿರುವುದು ಇದಕ್ಕೆ ಕಾರಣ ಎಂದು ತಿಳಿಸಿದೆ.

ನಾಲ್ಕು ವರ್ಷದ ನಿಧಾನಗತಿ: 2024–25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.4ರಷ್ಟು ಪ್ರಗತಿ ಕಾಣಲಿದೆ ಎಂದು ಸಾಂಖ್ಯಿಕ ಕಚೇರಿಯು ಜನವರಿಯಲ್ಲಿ ಪ್ರಕಟಿಸಿದ್ದ ಮೊದಲ ಅಂದಾಜು ವರದಿಯಲ್ಲಿ ಹೇಳಿತ್ತು. ಸದ್ಯ ಇದನ್ನು ಶೇ 6.5ಕ್ಕೆ ಪರಿಷ್ಕರಿಸಲಾಗಿದೆ. ಇದು ನಾಲ್ಕು ವರ್ಷಗಳಲ್ಲಿನ ಅತ್ಯಂತ ನಿಧಾನಗತಿಯ ಬೆಳವಣಿಗೆ ದರವಾಗಿದೆ.

ತಯಾರಿಕೆ, ಗಣಿಗಾರಿಕೆ ಇಳಿಕೆ: ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ತಯಾರಿಕಾ ವಲಯವು ಶೇ 14ರಷ್ಟು ಪ್ರಗತಿ ಕಂಡಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದೇ ಅವಧಿಯಲ್ಲಿ ಶೇ 3.5ಕ್ಕೆ ಕುಗ್ಗಿದೆ. ಗಣಿಗಾರಿಕೆ ಮತ್ತು ಕ್ವಾರಿ ವಲಯವು ಶೇ 4.7ರಿಂದ ಶೇ 1.4ಕ್ಕೆ ಕುಸಿದಿದೆ.

ನಿರ್ಮಾಣ ವಲಯದ ಬೆಳವಣಿಗೆಯು ಶೇ 10ರಿಂದ ಶೇ 7ಕ್ಕೆ ತಗ್ಗಿದೆ. ವಿದ್ಯುತ್, ಅನಿಲ, ನೀರು ಪೂರೈಕೆ ವಲಯವು ಶೇ 10.1ರಿಂದ ಶೇ 5.1ಕ್ಕೆ ಇಳಿದಿದೆ.

ವ್ಯಾಪಾರ, ಹೋಟೆಲ್, ಸಾರಿಗೆ, ಸಂವಹನ ಮತ್ತು ಪ್ರಸಾರ ವಲಯದ ಬೆಳವಣಿಗೆಯು ಶೇ 8ರಿಂದ ಶೇ 6.7ಕ್ಕೆ ಕಡಿಮೆಯಾಗಿದೆ. ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವಾ ವಲಯವು ಶೇ 8.4ರಿಂದ ಶೇ 7.2ಕ್ಕೆ ಇಳಿದಿದೆ.

ಸಾರ್ವಜನಿಕ ಆಡಳಿತ, ರಕ್ಷಣೆ ಸೇರಿ ಇತರೆ ಸೇವಾ ವಲಯವು ಶೇ 8.4ರಿಂದ ಶೇ 8.8ಕ್ಕೆ ಏರಿಕೆಯಾಗಿದೆ.

12ನೇ ಪುಟ ನೋಡಿ

ಇಳಿಕೆಗೆ ಕಾರಣ ಏನು?

- ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕುಸಿತ ಕಂಡಿದ್ದ ತಯಾರಿಕಾ ಮತ್ತು ಗಣಿಗಾರಿಕೆ ವಲಯದ ಪ್ರಗತಿಯು ಡಿಸೆಂಬರ್ ತ್ರೈಮಾಸಿಕದಲ್ಲೂ ಸುಧಾರಣೆ ಕಂಡಿಲ್ಲ
- ಉದ್ಯೋಗ ಸೃಷ್ಟಿಯಲ್ಲಿ ನಿರ್ಮಾಣ ವಲಯದ ಪಾತ್ರ ಕೂಡ ಹಿರಿದು. ಈ ವಲಯದ ಬೆಳವಣಿಗೆಯು ಕುಂಠಿತಗೊಂಡಿದೆ
- ಆರ್ಥಿಕತೆ ಬೆಳವಣಿಗೆಗೆ ಕೊಡುಗೆ ನೀಡುವ ವ್ಯಾಪಾರ, ಹೋಟೆಲ್, ಸಾರಿಗೆ, ಸಂವಹನ ಮತ್ತು ಪ್ರಸಾರ ವಲಯದ ಪ್ರಗತಿ ತಗ್ಗಿದೆ
- ಸರಕು ಮತ್ತು ಸೇವೆಗೆ ಸಂಬಂಧಿಸಿದಂತೆ ನಗರ ಪ್ರದೇಶದಲ್ಲಿ ಬೇಡಿಕೆ ಕಡಿಮೆಯಾಗಿದೆ. ಹಬ್ಬ ಮತ್ತು ಮದುವೆ ಋತುವಿನ ಹೊರತಾಗಿಯೂ ಹದಕ್ಕೆ ಮರಳಿಲ್ಲ

ಕೃಷಿ ವಲಯ ಸುಧಾರಣೆ

ಇತರೆ ವಲಯಗಳಿಗೆ ಹೋಲಿಸಿದರೆ ಕೃಷಿ ವಲಯದ ಬೆಳವಣಿಗೆಯು ಸುಧಾರಣೆ ಕಂಡಿದೆ. ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 1.5ರಷ್ಟಿದ್ದ ಈ ವಲಯದ ಪ್ರಗತಿಯು, ಶೇ 5.6ಕ್ಕೆ ಏರಿಕೆಯಾಗಿದೆ.

ಮುಂಗಾರು ಅವಧಿಯಲ್ಲಿ ಉತ್ತಮ ಮಳೆಯಾಗಿತ್ತು. ಹಿಂಗಾರು ಅವಧಿಯಲ್ಲೂ ಬಿತ್ತನೆ ಪ್ರದೇಶದ ವಿಸ್ತೀರ್ಣ ಹೆಚ್ಚಿತ್ತು. ಇದರಿಂದ ಈ ವಲಯದ ಪ್ರಗತಿಯು ಸುಧಾರಣೆಯಾಗಿದೆ.

ವಿಕಸಿತ ಭಾರತದ ಗುರಿಗೆ ಧಕ್ಕೆ?

ಕೇಂದ್ರ ಸರ್ಕಾರವು 2047ರ ವೇಳೆಗೆ 'ವಿಕಸಿತ ಭಾರತ'ದ ಗುರಿ ಹೊಂದಿದೆ. ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಗೊಳಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ಈ ಗುರಿ ಸಾಧನೆಗೆ ಜಿಡಿಪಿಯ ಸರಾಸರಿ ಬೆಳವಣಿಗೆಯು ಶೇ 7.8ರಷ್ಟಿರಬೇಕಿದೆ ಎಂದು ವಿಶ್ವಬ್ಯಾಂಕ್ ವರದಿ ಹೇಳಿದೆ. ಇದಕ್ಕೆ ಪೂರಕವಾಗಿ ಹಣಕಾಸು ವಲಯದಲ್ಲಿ ಸುಧಾರಣೆಯಾಗಬೇಕಿದೆ. ಆದರೆ, 2000ರಿಂದ 2024ರವರೆಗೆ ಭಾರತದ ಆರ್ಥಿಕತೆಯ ಸರಾಸರಿ ಬೆಳವಣಿಗೆಯು ಶೇ 6.3ರಷ್ಟಿದೆ ಎಂದು ವಿವರಿಸಿದೆ. 'ಭಾರತವು ಅತಿಹೆಚ್ಚು ಆದಾಯ ಹೊಂದಿದ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಗೊಳ್ಳುವ ಗುರಿ ಹೊಂದಿದೆ' ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.



ಉತ್ಸವ ಹಂಪಿ ಉತ್ಸವ ಶುಕ್ರವಾರ ಆರಂಭಗೊಂಡಿದ್ದು, ಉದ್ಘಾಟನಾ ಸಮಾರಂಭದಲ್ಲಿ ಡಾ.ಸಂಜಯ್ ಮತ್ತು ಶಾಂತಾರಾವ್ ತಂಡ ಪ್ರದರ್ಶಿಸಿದ ಕರಾವಳಿ ಶೈಲಿಯ ನೃತ್ಯ ಜನಮನ ರಂಜಿಸಿತು ಚಿತ್ರ: ಲವ ಕೆ.

ಔಷಧ ಮಾದರಿಗಳ ವಿಶ್ಲೇಷಣೆ • ಜಾಗೃತಿಗೆ ಆ್ಯಪ್ ಅಭಿವೃದ್ಧಿ

'ಕಳಪೆ ಔಷಧ ಕಡಿವಾಣಕ್ಕೆ ನೀತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳು ಜನರಿಗೆ ದೊರೆಯದಂತೆ ತಡೆಯಲು, ದಾಸ್ತಾನುಗಳನ್ನು ಹಿಂಪಡೆಯಲು ಪ್ರತ್ಯೇಕ ನೀತಿ ರೂಪಿಸಲಾಗುವುದು. ಔಷಧಗಳ ಬಗ್ಗೆ ಜಾಗೃತಿ ಮೂಡಿಸಲು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ದಿನೇಶ್ ಗುಂಡೂರಾವ್

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಜನರ ಆರೋಗ್ಯದ ದೃಷ್ಟಿಯಿಂದ ನಿಯಮಿತವಾಗಿ ಔಷಧಗಳ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಿದ್ದಾರೆ' ಎಂದು ತಿಳಿಸಿದರು.

10ನೇ ಪುಟ ನೋಡಿ

ಅಂಕಿ ಅಂಶಗಳು

- ₹17 ಲಕ್ಷ ಮೌಲ್ಯದ ಔಷಧ ಮಾರುಕಟ್ಟೆಯಿಂದ ವಾಪಸ್
- 488 ಮಳಿಗೆಗಳ ಪರಿಶೀಲನೆ
- 400 ಮಳಿಗೆ ನಿಯಮ ಉಲ್ಲಂಘನೆ ಕಾರಣಕ್ಕೆ ನೋಟಿಸ್
- 213 ಮಳಿಗೆಗಳ ಪರವಾನಗಿ ಅಮಾನತು
- 03 ಮಳಿಗೆಗಳ ಪರವಾನಗಿ ರದ್ದು

'ಹಚ್ಚೆ ಶಾಯಿಯಲ್ಲಿ 22 ಬಗೆ ಭಾರ ಲೋಹ'

'ಆಹಾರ ಸುರಕ್ಷತೆ ಮತ್ತು ಔಷಧ ಗುಣಮಟ್ಟ ಇಲಾಖೆ ಅಧಿಕಾರಿಗಳು ಮಾರುಕಟ್ಟೆಯಲ್ಲಿರುವ ಹಚ್ಚೆಯ (ಟ್ಯಾಟೂ) ಶಾಯಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅವುಗಳಲ್ಲಿ 22 ಬಗೆಯ ಭಾರ ಲೋಹಗಳು ಕಂಡುಬಂದಿವೆ. ಹಚ್ಚೆಗೆ ಬಳಸುವ ಶಾಯಿಗೆ ಯಾವುದೇ ಪ್ರಮಾಣಿತ ಗುಣಮಟ್ಟವಿಲ್ಲ. ಔಷಧ ಮತ್ತು ಕಾಂತಿವರ್ಧಕ ಕಾಯ್ದೆ ವ್ಯಾಪ್ತಿಗೆ ಇದು ಒಳಪಟ್ಟಿಲ್ಲ. ಇದರಲ್ಲಿನ ಭಾರ ಲೋಹಗಳು ಚರ್ಮದ ಮೂಲಕ ದೇಹ ಪ್ರವೇಶಿಸುವ ಸಾಧ್ಯತೆ ಇರುತ್ತದೆ. ಅನೇಕ ಚರ್ಮ ರೋಗಗಳು, ಸೋಂಕು ರೋಗಗಳಿಗೆ ತುತ್ತಾಗುವ ಸಂಭವವೂ ಇರುತ್ತದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

'ಈ ಬಗ್ಗೆ ನಿಯಮ ರೂಪಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಆದ್ದರಿಂದ ಹಚ್ಚೆಗೆ ಬಳಸುವ ಶಾಯಿಯನ್ನು ಕಾಂತಿವರ್ಧಕಗಳ ಕಾಯ್ದೆಯಡಿ ಅಡಿಗೆ ತರಲು ಕೇಂದ್ರ ಔಷಧ ನಿಯಂತ್ರಕರಿಗೆ ಪತ್ರ ಬರೆಯಲಾಗಿದೆ. ಬಿಐಎಸ್ (ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್) ಪ್ರಕಾರ ಮಾನದಂಡ ರೂಪಿಸಲು ಕೇಂದ್ರ ಸರ್ಕಾರ ಕ್ರಮ ವಹಿಸಬೇಕು' ಎಂದರು.

ಪೋಕ್ಸೊ: ಬಿಎಸ್‌ವೈಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಾಯ್ದೆ ಅಡಿಯ ದೂರನ್ನು 'ತನಿಖೆಗೆ ಪರಿಗಣಿಸಬಹುದಾದ ಅಪರಾಧ' ಎಂದು ನಿರ್ಧರಿಸಿರುವ ಬೆಂಗಳೂರಿನ ವಿಶೇಷ ನ್ಯಾಯಾಲಯ, ಯಡಿಯೂರಪ್ಪ ಅವರಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿದೆ.



ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ವಿಶೇಷ ನ್ಯಾಯಾಲಯ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದ್ದನ್ನು ಹೈಕೋರ್ಟ್ ಬದಿಗೆ ಸರಿಸಿತ್ತು. ದೂರನ್ನು ಹೊಸದಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲು ಆದೇಶಿಸಿತ್ತು. ಈ ನಿರ್ದೇಶನದ ಅನುಸಾರ ದೂರಿನ ವಿಚಾರಣೆ ನಡೆಸಿದ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ (ಮೊದಲನೇ ತ್ವರಿತ ವಿಚಾರಣೆಯ ಪೋಕ್ಸೊ ಪ್ರಕರಣಗಳ ವಿಶೇಷ ನ್ಯಾಯಾಲಯ) ನ್ಯಾಯಾಧೀಶ ಎನ್.ಎಂ.ರಮೇಶ್ ಅವರು ಹೊಸದಾಗಿ ಸಂಜ್ಞೇಯ ಅಪರಾಧದಡಿ ದೂರನ್ನು ಪರಿಗಣಿಸಿದ್ದಾರೆ.

ಪ್ರಾಸಿಕ್ಯೂಷನ್ ಪರ ವಕೀಲರಾದ ಅಶೋಕ್ ಎನ್.ನಾಯಕ್ ಅವರ ಮನವಿಯನ್ನು ಮಾನ್ಯ ಮಾಡಿರುವ ನ್ಯಾಯಾಧೀಶರು, ಯಡಿಯೂರಪ್ಪ ಸೇರಿದಂತೆ ಇತರ ನಾಲ್ವರು ಆರೋಪಿಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಪೋಕ್ಸೊ ಕಾಯ್ದೆಯ ಕಲಂ 8, ಭಾರತೀಯ ದಂಡ ಸಂಹಿತೆ–1860ರ ಕಲಂ 354(ಎ), 204, 214 ಜೊತೆಗೆ 34ರ ಅಡಿ ವಿಶೇಷ ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸಿದ್ದಾರೆ.

10ನೇ ಪುಟ ನೋಡಿ

ಹಿಮಪಾತದಲ್ಲಿ ಸಿಲುಕಿದ 25 ಬಿಆರ್‌ಒ ಕಾರ್ಮಿಕರು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾಣಾ ಗ್ರಾಮದಲ್ಲಿ ಸಂಭವಿಸಿದ ಹಿಮಪಾತದಲ್ಲಿ ಗಡಿ ರಸ್ತೆಗಳ ಸಂಸ್ಥೆಗೆ (ಬಿಆರ್‌ಒ) ಕೆಲಸ ಮಾಡುತ್ತಿದ್ದ 25 ಮಂದಿ ಕಾರ್ಮಿಕರು ಅಪಾಯದಲ್ಲಿ ಸಿಲುಕಿಕೊಂಡಿದ್ದಾರೆ.

ಮೊದಲಿಗೆ 57 ಮಂದಿ ಹಿಮದಲ್ಲಿ ಸಿಲುಕಿದ್ದರು. ಈ ಪೈಕಿ 32 ಮಂದಿಯನ್ನು ರಕ್ಷಿಸಲಾಗಿದೆ. ಕತ್ತಲು ಆವರಿಸಿದ್ದರಿಂದ, ರಕ್ಷಣಾ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

'ಬದರೀನಾಥ ಹಾಗೂ ಮಾಣಾ ಗ್ರಾಮದ ಮಧ್ಯಭಾಗದಲ್ಲಿರುವ ಬಿಆರ್‌ಒ ಶಿಬಿರದ ಸಮೀಪ ಹಿಮಪಾತ ಸಂಭವಿಸಿದೆ' ಎಂದು ಚಮೋಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸಂದೀಪ್ ತಿವಾರಿ ತಿಳಿಸಿದ್ದಾರೆ.

ಮಾಣಾ ಗ್ರಾಮವು ಬದರೀನಾಥದಿಂದ ಮೂರು ಕಿ.ಮೀ. ದೂರದಲ್ಲಿದೆ. ಭಾರತ ಹಾಗೂ ಟಿಬೆಟ್ ಗಡಿಭಾಗದಲ್ಲಿರುವ ಕೊನೆಯ ಗ್ರಾಮ ಇದಾಗಿದ್ದು, ಸಮುದ್ರಮಟ್ಟದಿಂದ 3,200 ಮೀಟರ್ ಎತ್ತರದಲ್ಲಿದೆ.

'ಕಾರ್ಮಿಕರನ್ನು ರಕ್ಷಿಸುವ ಕಾರ್ಯವು ಮುಂದುವರಿದಿದೆ. ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಪಡೆಯ ಯೋಧರು ಹಾಗೂ ಇತರೆ ಇಲಾಖೆಗಳವರು ಕೂಡ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ಪಡೆ ನಿಗಾ ವಹಿಸುತ್ತಿದೆ' ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದರು.

'ಎಲ್ಲರನ್ನೂ ಆದಷ್ಟು ಬೇಗ ಸುರಕ್ಷಿತವಾಗಿ ಹೊರತರಲು ಪ್ರಯತ್ನಿಸಲಾಗುತ್ತಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ಹಾಗೂ ರಾಜ್ಯ ವಿಪತ್ತು ನಿರ್ವಹಣಾ ತಂಡ (ಎಸ್‌ಡಿಆರ್‌ಎಫ್) ಸ್ಥಳಕ್ಕೆ ಭೇಟಿ ನೀಡಿದ್ದು, ನಿರಂತರ ಹಿಮಪಾತ–ಮಳೆಯಿಂದ ರಕ್ಷಣಾ ಕಾರ್ಯಾಚರಣೆಗೆ ತೊಡಕುಂಟಾಗಿದೆ' ಎಂದು ಅವರು ವಿವರಿಸಿದರು.

13ನೇ ಪುಟ ನೋಡಿ

8.25% ಪಿಎಫ್ ಮೇಲೆ ಬಡ್ಡಿ ದರ ನಿಗದಿ


ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು 2024–25ನೇ ಸಾಲಿಗೆ ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳಿಗೆ ಶೇ 8.25ರಷ್ಟು ಬಡ್ಡಿದರ ನಿಗದಿಪಡಿಸಿದೆ.

12

ದ್ವಿತೀಯ ಪಿಯು ಪರೀಕ್ಷೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಶನಿವಾರ (ಮಾರ್ಚ್ 1) ಆರಂಭವಾಗುತ್ತಿದ್ದು, ರಾಜ್ಯದ 5,050 ಪದವಿ ಪೂರ್ವ ಕಾಲೇಜುಗಳ 7.13 ಲಕ್ಷ ವಿದ್ಯಾರ್ಥಿಗಳು ಬರೆಯಲಿದ್ದಾರೆ.



ಮೊದಲ ದಿನ ಪ್ರಥಮ ಭಾಷೆ ಕನ್ನಡ ಹಾಗೂ ಅರೇಬಿಕ್ ವಿಷಯದ ಪರೀಕ್ಷೆ ನಡೆಯಲಿದೆ. ಪ್ರತಿ ದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಸಮಯ ನಿಗದಿ ಮಾಡಲಾಗಿದೆ. ಮಾರ್ಚ್ 20ಕ್ಕೆ ಮುಕ್ತಾಯವಾಗಲಿದೆ.

ನಕಲು ತಡೆ ಹಾಗೂ ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಹಾಕಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ವಿಚಕ್ಷಣ ದಳ ನಿಯೋಜಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧ್ಯಕ್ಷ ಎಚ್. ಬಸವರಾಜೇಂದ್ರ ಮಾಹಿತಿ ನೀಡಿದ್ದಾರೆ.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ತೋಟಗಾರಿಕೆ ಮೇಳ: ಆಸಕ್ತಿಯಿಂದ ಪಾಲ್ಗೊಂಡ ರೈತರು, ವಿದ್ಯಾರ್ಥಿಗಳು

ಎರಡನೇ ದಿನ ಹೆಚ್ಚಿದ ಜನರ ಆಸಕ್ತಿ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ನಡೆಯುತ್ತಿರುವ ತೋಟಗಾರಿಕಾ ಮೇಳಕ್ಕೆ ಶುಕ್ರವಾರ ಹೆಚ್ಚಿನ ಸಂಖ್ಯೆಯಲ್ಲಿ ರೈತರು, ವಿದ್ಯಾರ್ಥಿಗಳು ಭೇಟಿ ನೀಡಿದರು.

ನೆರೆಯ ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಿಂದಲೂ ರೈತರು ಮೇಳಕ್ಕೆ ಭೇಟಿ ನೀಡಿದ್ದರು. ಹಣ್ಣು, ತರಕಾರಿಗಳ ಪ್ರಾತ್ಯಕ್ಷಿಕೆಗಳು, ಆಧುನಿಕ ಬೇಸಾಯದ ಯಂತ್ರೋಪಕರಣಗಳು, ಮೌಲ್ಯ ವರ್ಧಿತ ಉತ್ಪನ್ನಗಳು ಹಾಗೂ ವಿವಿಧ ಬಗೆಯ ತರಕಾರಿ ತಾಕುಗಳನ್ನು ವೀಕ್ಷಿಸಿದ ಸಾರ್ವಜನಿಕರು, ಅವುಗಳ ಬಗ್ಗೆ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

‘ನಮ್ಮದು ನಾಲ್ಕು ಎಕರೆ ಕೃಷಿ ಭೂಮಿ ಇದ್ದು, ಅದರಲ್ಲಿ ಆಧುನಿಕ ಬೇಸಾಯ ಮಾಡುವ ಉದ್ದೇಶವಿದೆ. ಈ ಮೇಳದಲ್ಲಿ ಕೃಷಿ ಬಗೆಗಿನ ನೂತನ ಆವಿಷ್ಕಾರಗಳನ್ನು ನೋಡಿ, ತಿಳಿದು ಅಳವಡಿಸಿಕೊಳ್ಳಬೇಕೆಂದು ಮೇಳಕ್ಕೆ ಬಂದಿದ್ದೇನೆ’ ಎಂದು ರಾಮನಗರದ ಮಂಜುನಾಥ್ ಹೇಳಿದರು.

ಮೇಳದಲ್ಲಿ ಹೂವಿನ ತಾಕುಗಳು ಜನರನ್ನು ಹೆಚ್ಚು ಆಕರ್ಷಿಸುತ್ತಿದ್ದವು. ಹೂವಿನ ತಾಕುಗಳಲ್ಲಿ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ತರಕಾರಿ ತಾಕುಗಳು ಹಚ್ಚ ಹಸಿರಿನಿಂದ ಕೂಡಿದ್ದು ಸಾರ್ವಜನಿಕರ ಗಮನ ಸೆಳೆದವು.

ಗಮನ ಸೆಳೆದ ನಕ್ಷತ್ರ ಕುಂಬಳ: ನಕ್ಷತ್ರ ಆಕಾರದ ಕಿರುಕುಂಬಳ ಎಲ್ಲರ ಗಮನ ಸೆಳೆಯಿತು. ಇದು ಹಬ್ಬುವುದಿಲ್ಲ. ಬಹಳ ಸುಲಭವಾಗಿ ನಿರ್ವಹಣೆ ಮಾಡಬಹುದು. ಬೀಜ ನಾಟಿ ಮಾಡಿದ ದಿನದಿಂದ 30ರಿಂದ 40 ದಿನಗಳಲ್ಲಿ ಹೂವು ಬಿಡುತ್ತದೆ. 40ರಿಂದ 50 ದಿನಗಳ ಅವಧಿಯಲ್ಲಿ ಇಳುವರಿ ಬರಲಿದ್ದು, ಒಂದು ಕುಂಬಳ 750 ಗ್ರಾಂ ತೂಕದ ಕಾಯಿಗಳನ್ನು ಬಿಡುತ್ತದೆ. ಎಕರೆಗೆ 75 ಟನ್ ಇಳುವರಿ ಬರಲಿದೆ. ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದ್ದು, ಪ್ರತಿ ಕೆಜಿಗೆ ₹90 ಗಳಿಸಬಹುದಾಗಿದೆ. ಅಲ್ಲದೆ ಇದರ ಬೀಜದಲ್ಲಿ ಎಣ್ಣೆಯನ್ನು ಸಹ ಉತ್ಪಾದಿಸಬಹುದಾಗಿದೆ. ಇದು ರೈತರಿಗೆ ಲಾಭದಾಯಕ ಕೃಷಿ. ಈ ಗಿಡಕ್ಕೆ ರೋಗ ತಗಲುವುದು ಕಡಿಮೆ. ನಿರ್ವಹಣೆಯು ಸುಲಭ ಇದ್ದು ಎಲ್ಲಾ ಹವಾಗುಣದಲ್ಲಿ ಕೂಡ ಬೆಳೆಯಬಹುದಾಗಿದೆ. ಒಂದು ಗಿಡದಲ್ಲಿ 9 ಕಾಯಿಯವರೆಗೂ ಬಿಡುತ್ತದೆ ಎಂದು ವಿಜ್ಞಾನಿ ಡಾ. ರಾಜಶಂಕರ್ ತಿಳಿಸಿದರು.



ಆಧುನಿಕ ಕೃಷಿ ಉಪಕರಣಗಳ ಬಗ್ಗೆ ವಿಜ್ಞಾನಿಗಳಿಂದ ಮಾಹಿತಿ ಪಡೆದ ರೈತರು

ರೋಗ ನಿರೋಧಕ ಬೆಂಡೆಕಾಯಿ

ಕಡು ಹಸಿರು ಬಣ್ಣದಿಂದ ಕೂಡಿರುವ ಅರ್ಕ ನಿಕಿತಾ ಬೆಂಡೆಕಾಯಿಯಲ್ಲಿ ಅಯೋಡಿನ್ ಫೈಬರ್ ಅಂಶ ಹೇರಳವಾಗಿದ್ದು ಮೂಳೆ ಗಟ್ಟಿಯಾಗಲು ಸಹಕಾರಿಯಾಗುವಂತಹ ಕ್ಯಾಲ್ಸಿಯಂ ಅಂಶವನ್ನು ಹೊಂದಿದೆ. ಸಕ್ಕರೆ ಕಾಯಿಲೆಗೆ ಇದು ರಾಮಬಾಣ. ಬಿಡಿ ಬಿಡಿಯಾಗಿ ಕತ್ತರಿಸಿ ಒಂದು ಲೋಟ ನೀರಿನಲ್ಲಿ ಇಟ್ಟು ಮರುದಿನ ಅದರ ಲೋಳೆ ಸಹಿತ ನೀರು ಸೇವಿಸಿದರೆ ಸಕ್ಕರೆ ಕಾಯಿಲೆಯನ್ನು ಹತೋಟಿಯಲ್ಲಿ ಇಡಬಹುದು. ಈ ಬೆಂಡೆಕಾಯಿ ಗಿಡಕ್ಕೆ 80ರಿಂದ 90 ದಿನಗಳವರೆಗೆ ನಂಜುರೋಗ ಸುಳಿಯುವುದಿಲ್ಲ ಸುಲಭವಾಗಿ ಬೀಜ ಉತ್ಪಾದನೆ ಮಾಡಬಹುದಾಗಿದೆ. ಮೂರರಿಂದ ನಾಲ್ಕು ತಿಂಗಳ ಬೆಳೆಯಾಗಿದ್ದು 43 ದಿನಗಳಿಗೆ ಇಳುವರಿ ಪ್ರಾರಂಭವಾಗುತ್ತದೆ. ಪ್ರತಿ ಎಕರೆಗೆ 8 ರಿಂದ 9 ಟನ್ ಇಳುವರಿ ಬರುತ್ತದೆ ಎಂದು ಬೆಂಡೆ ವಿಭಾಗದ ವಿಜ್ಞಾನಿ ಡಾ. ಪಿಚ್ಚೆ ಮುತ್ತು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಕಾರು ಬೆಂಕಿಗಾಹುತಿ: ನಾಲ್ವರು ಪಾರು

ಬೆಂಗಳೂರು: ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮತ್ತಿಕೆರೆಯ ಜಂಕ್ಷನ್‌ನಲ್ಲಿ ಚಲಿಸುತ್ತಿದ್ದ ಕಾರಿನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಿದ್ದು, ನಾಲ್ವರು ವಿದ್ಯಾರ್ಥಿಗಳು ಪಾರಾಗಿದ್ದಾರೆ.

ಬಿಇಎಲ್ ವೃತ್ತದ ಕಡೆಯಿಂದ ಮತ್ತಿಕೆರೆ ಕಡೆಗೆ ಶುಕ್ರವಾರ ಮಧ್ಯಾಹ್ನ ಕಾರು ಚಲಿಸುತ್ತಿತ್ತು. ಕಾರಿನಲ್ಲಿ ನಾಲ್ವರು ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದರು. ರಸ್ತೆ ಬದಿಯಲ್ಲಿ ನಿಂತಿದ್ದವರು ಬೆಂಕಿ ಕಾಣಿಸಿಕೊಂಡಿದ್ದನ್ನು ನೋಡಿ ಕಾರಿನಲ್ಲಿದ್ದವರ ಗಮನಕ್ಕೆ ತಂದರು. ಎಚ್ಚೆತ್ತ ಚಾಲಕ ಕಾರನ್ನು ರಸ್ತೆಯ ಬದಿಗೆ ಕೊಂಡೊಯ್ದು ನಿಲುಗಡೆ ಮಾಡಿದರು. ತಕ್ಷಣವೇ ಎಲ್ಲರೂ ಕಾರಿನಿಂದ ಕೆಳಕ್ಕೆ ಇಳಿದು ಪಾರಾಗಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಯಶಸ್ವಿ ಆಗಿದ್ದಾರೆ. ಯಶವಂತಪುರ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



‘ಟಾಟಾ ಕಂಪನಿಯ ಝೆಸ್ಟ್ ಕಾರು ಬೆಂಕಿಗೆ ಆಹುತಿಯಾಗಿದೆ. ಪೆಟ್ರೋಲ್ ಸೋರಿಕೆಯಿಂದ ಬೆಂಕಿ ಕಾಣಿಸಿಕೊಂಡಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಘಟನೆಗೆ ನಿಖರ ಕಾರಣ ಏನು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಲಂಚ: ಪಿಎಸ್‌ಐ ಅಮಾನತು

ಬೆಂಗಳೂರು: ಲಂಚ ಪಡೆದ ಆರೋಪದಡಿ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯ ಪಿಎಸ್‌ಐ ಬಸವರಾಜ್ ಹಾಗೂ ಕಾನ್‌ಸ್ಟೆಬಲ್ ಒಬ್ಬರನ್ನು ಅಮಾನತು ಮಾಡಲಾಗಿದೆ.

ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದರ ಸಂಬಂಧ ಲ್ಯಾಪ್‌ಟಾಪ್ ಹಾಗೂ ₹1 ಲಕ್ಷ ಹಣ ಪಡೆದುಕೊಂಡಿರುವ ಆರೋಪವು ಸಾಬೀತಾದ ಕಾರಣದಿಂದ ಇಲಾಖಾ ವಿಚಾರಣೆ ಕಾಯ್ದಿರಿಸಿ ಇಬ್ಬರನ್ನೂ ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

₹11 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಏಳು ಮಂದಿಯನ್ನು ವಿವಿಧ ಠಾಣೆಗಳ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ₹11.22 ಲಕ್ಷ ಮೌಲ್ಯದ 50 ಕೆ.ಜಿ ಗಾಂಜಾ ಜಪ್ತಿ ಮಾಡಿಕೊಂಡಿದ್ದಾರೆ.

ಉಪ್ಪಾರಪೇಟೆ ಠಾಣೆ ಪೊಲೀಸರು ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸಿ ₹7 ಲಕ್ಷ ಮೌಲ್ಯದ 14 ಕೆ.ಜಿ. ಗಾಂಜಾ ಮತ್ತು ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಇಬ್ಬರು ಇನ್‌ಸ್ಪೆಕ್ಟರ್‌ಗೆ ತಲಾ ₹1 ಲಕ್ಷ ದಂಡ

ಬೆಂಗಳೂರು: ಎರಡು ಪ್ರತ್ಯೇಕ ದೂರುಗಳಿಗೆ ಸಂಬಂಧಿಸಿದಂತೆ ಇಬ್ಬರು ಇನ್‌ಸ್ಪೆಕ್ಟರ್‌ಗಳಿಂದ ತಲಾ ₹1 ಲಕ್ಷ ದಂಡ ವಸೂಲಿ ಮಾಡುವಂತೆ ಮಾನವ ಹಕ್ಕುಗಳ ಆಯೋಗ ಶಿಫಾರಸು ಮಾಡಿದೆ.

ಪ್ರಕರಣ ದಾಖಲಾಗುವುದಕ್ಕೂ ಮೊದಲೇ ಶಂಕಿತ ಆರೋಪಿಗಳನ್ನು ಠಾಣೆಗೆ ಕರೆತಂದು ನಿಂದಿಸಿ ಹಲ್ಲೆ ನಡೆಸಿದ್ದ ಸಿಸಿಬಿ ಇನ್‌ಸ್ಪೆಕ್ಟರ್ ಜಿ.ಟಿ. ಶ್ರೀನಿವಾಸ್ ಅವರ ವೇತನದಿಂದ ದಂಡ ವಸೂಲಿ ಮಾಡಿ ಸಂತ್ರಸ್ತರಿಗೆ ಕೊಡುವಂತೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಆಯೋಗ ಶಿಫಾರಸು ಮಾಡಿದೆ. 2022ರ ಫೆ.11ರಂದು ಶಾಂತಿ ಕೋಕೊತ್ ಎಂಬವರು ಮಾಗಡಿ ರಸ್ತೆ ಠಾಣೆಗೆ ದೂರು ಸಲ್ಲಿಸಿದ್ದರು.

ಅಂದು ಇನ್‌ಸ್ಪೆಕ್ಟರ್ ಆಗಿದ್ದ ಜಿ.ಟಿ. ಶ್ರೀನಿವಾಸ್, ಪ್ರಕರಣ ದಾಖಲು ಮಾಡುವ ಮೊದಲೇ ಶಂಕರ ಗಣೇಶ್ ಸೇರಿ ಕೆಲವರನ್ನು ಠಾಣೆಗೆ ಕರೆಸಿದ್ದರು. ಅವರು ಆಯೋಗಕ್ಕೆ ದೂರು ನೀಡಿದ್ದರು. ಶ್ರೀನಿವಾಸ್ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ಕ್ರಮ ತೆಗೆದುಕೊಳ್ಳಬೇಕು ಎಂದು ಆಯೋಗದ ಅಧ್ಯಕ್ಷ ಟಿ. ಶಾಮ ಭಟ್ ಆದೇಶಿಸಿದ್ದಾರೆ.

ಹಲ್ಲೆ ಪ್ರಕರಣವೊಂದು ಸಾಬೀತಾದ ಕಾರಣದಿಂದ ಬಿಡದಿ ಇನ್‌ಸ್ಪೆಕ್ಟರ್ ಶಂಕರ ನಾಯಕ್ ಅವರಿಗೆ ₹ 1 ಲಕ್ಷ ದಂಡ ವಿಧಿಸಲಾಗಿದೆ. ಈ ಹಿಂದೆ ಬ್ಯಾಟರಾಯನಪುರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಶಂಕರ ನಾಯಕ್, 2022ರ ಆಗಸ್ಟ್‌ನಲ್ಲಿ ಸುಮಿತ್(20) ಎಂಬಾತನನ್ನು ಅಕ್ರಮವಾಗಿ ಠಾಣೆಯಲ್ಲಿ ಇಟ್ಟುಕೊಂಡು ಹಲ್ಲೆ ನಡೆಸಿದ್ದರು.

₹77 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಮಾದಕ ವಸ್ತುಗಳ ಮಾರಾಟ ಮಾಡುತ್ತಿದ್ದ ಇಬ್ಬರು ವಿದೇಶಿ ಪ್ರಜೆಗಳೂ ಸೇರಿದಂತೆ ಮೂವರನ್ನು ಬಂಧಿಸಿರುವ ಆಡುಗೋಡಿ ಠಾಣೆಯ ಪೊಲೀಸರು ಅಂದಾಜು ₹ 77 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಹಾಸನ ಜಿಲ್ಲೆಯ ಅರಸೀಕೆರೆ ಬಾಲಾಜಿನಗರದ ಅಮಿತ್ (27), ನೈಜೀರಿಯಾದ ಪ್ರಜೆಗಳಾದ ಸಾಮ್ಸನ್ (25) ಹಾಗೂ ಇಸಾಕ್ ಜಾಯ್ (45) ಬಂಧಿತರು. ವಿದೇಶಿ ಡ್ರಗ್ಸ್ ಪೆಡ್ಲರ್‌ಗಳಾದ ಸಾಮ್ಸನ್ ಹಾಗೂ ಇಸಾಕ್ ಬಾಲಾಜಿನಗರದ ಬಾಡಿಗೆ ಮನೆಯಲ್ಲಿ ನೆಲಸಿದ್ದರು.

FORM-IV
PRAJAVANI
STATEMENT about ownership and other particulars about newspaper **"PRAJAVANI" Bangalore** as required to be published under Section 19-D(b) of the Press and Registration of Books Act, read with Rule-8 of the Registration of Newspapers (Central) Rules, 1956

1. Place of Publication: Bangalore
2. Periodicity of Publication: Daily
3. Printer : Mr B A Ravi, Citizen of India # 6606, 6th Floor, Trendz apartment, Bhogadi Gaddige Road, Mysore-570026.
4. Publisher : Mr B A Ravi Citizen of India # 6606, 6th Floor, Trendz apartment, Bhogadi Gaddige Road, Mysore-570026.
5. Editor : Praveen Kulkarni, Citizen of India, B103, Adarsh Astria Apartments, Kadirenahalli First Main Road, Banashankari 2nd Stage, Bangalore - 560070.
6. Names and addresses of individuals who own the newspaper and partners or shareholders holding more than one percent of the total capital.
Proprietors: The Printers (Mysore) Pvt. Ltd. CIN. No. U22110KA 1948PTC000521 Plot No. 7-12, Kumbalgodu Industrial Area II Phase, Mysore Road, Bangalore-560 074.
Shareholders holding more than one percent of the total capital:
1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.
2. Mr. K. N. Tilak Kumar, No. 173, Subbaramachetty Road, Basavanagudi, Bangalore-560 004.
3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.
4. K. N. Guruswamy & Co. Pvt. Ltd. No. 75, M. G. Road, Bangalore-560 001. 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S.N. Shiva Shankar, No. 10, VI Main, II Cross, Gandhinagar, Bangalore-560 009. 7. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 8. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswarnagar, Bangalore-560 079. 9. Mr M P Manjunath, No.172, Ground Floor, Moksha Marga, Siddartha Layout, Mysore -570011 10. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560 009 11. Mrs Prema B Moola, Mr Ananda Ranga Moola, Mr Ved Manu Moola, Ms Dev Siri Moola, Mr M Bhakatvatsala, No.9, "Rangapuri", Lalbagh Road, Bangalore 560027 12. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 13. Mrs. Anuradha R. Moola, Ms. Sharuna R. Moola, Ms. Bhavana R. Moola, Mr. M. Ramesh, Mr. Vivesh R. Moola, Centropolis, No.21, Langford Road, Richmond Town, Bangalore-560025. 14. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi hereby declare that the particulars given above are true to the best of my knowledge and belief.

Sd/- (B.A. Ravi) Publisher
Place : Bangalore
Date : 28-02-2025

ಹೆಚ್ಚು ಅನುದಾನ ನೀಡಲು ಶಾಸಕರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮೊರೆ

ಬೆಂಗಳೂರಿಗೆ ಅತ್ಯಲ್ಪ ಅನುದಾನ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬೊಕ್ಕಸಕ್ಕೆ ಬೆಂಗಳೂರು ನಗರವೊಂದೇ ಶೇ 60 ಕ್ಕೂ ಹೆಚ್ಚು ಆದಾಯವನ್ನು ತೆರಿಗೆ ರೂಪದಲ್ಲಿ ನೀಡುತ್ತಿದೆ. ಆದರೆ, ಸರ್ಕಾರವು ರಾಜಧಾನಿಯ ಅಭಿವೃದ್ಧಿ ನೀಡುತ್ತಿರುವ ಮೊತ್ತ ಅತ್ಯಲ್ಪ ಎಂದು ಬಿಜೆಪಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಬಿಜೆಪಿಯ ಬೆಂಗಳೂರು ನಗರದ ಶಾಸಕರು ಮತ್ತು ಸಂಸದರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ ಸಲ್ಲಿಸಿರುವ ಮನವಿಯಲ್ಲಿ ಈ ಅಂಶವನ್ನು ಪ್ರಸ್ತಾಪಿಸಿದೆ. ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧಪಕ್ಷದ ನಾಯಕ ಆರ್.ಅಶೋಕ ನಿಯೋಗದ ನೇತೃತ್ವ ವಹಿಸಿದ್ದರು.



ಎಸ್‌ಆರ್‌ ವಿಶ್ವನಾಥ್, ಆರ್‌ಅಶೋಕ, ಸಿ.ಕೆ.ರಾಮಮೂರ್ತಿ, ಬಿ.ವೈ.ವಿಜಯೇಂದ್ರ, ಪಿ.ಸಿ.ಮೋಹನ್, ತೇಜಸ್ವಿಸೂರ್ಯ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಬೆಂಗಳೂರು ನಗರದ ಬೆಳವಣಿಗೆಯ ವೇಗಕ್ಕೆ ಸಮನಾಗಿ ನಗರದ ಅಭಿವೃದ್ಧಿಗೆ ಅನುದಾನ ಸಿಗುತ್ತಿಲ್ಲ. ಕಳೆದ ಎರಡು ವರ್ಷಗಳಿಂದ ವಿಧಾನಸಭಾ ಕ್ಷೇತ್ರಗಳ ಅಗತ್ಯಕ್ಕೆ ತಕ್ಕಂತೆ ಅನುದಾನ ಸಿಗದ ಕಾರಣ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಮೂರು ತಿಂಗಳ ಹಿಂದೆ ಪ್ರತಿಯೊಂದು ಕ್ಷೇತ್ರಕ್ಕೆ ತಲಾ ₹10 ಕೋಟಿ ಅನುದಾನ ನೀಡಲಾಗಿದೆ. ಇದು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂದು ಬಿಜೆಪಿ ನಿಯೋಗ ಹೇಳಿದೆ.

ನಗರದ ಅಭಿವೃದ್ಧಿಯ ಹಿತದೃಷ್ಟಿಯಿಂದ ಈ ಬಾರಿಯ ಮುಂಗಡ ಪತ್ರದಲ್ಲಿ ವಿವಿಧ ಮೂಲಸೌಕರ್ಯ ಯೋಜನೆಗಳನ್ನು ಕೈಗೊಳ್ಳಲು ₹15,000 ಕೋಟಿ ವಿಶೇಷ ಅನುದಾನ ನೀಡಬೇಕು. ಪಕ್ಷಾತೀತವಾಗಿ ಪ್ರತಿಯೊಂದು ಕ್ಷೇತ್ರಕ್ಕೂ ಕನಿಷ್ಠ ₹150 ಕೋಟಿ ಅನುದಾನ ನೀಡಬೇಕು ಎಂದು ಒತ್ತಾಯಿಸಿದೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ರಸ್ತೆಯಾಗಿರುವ ಬಳ್ಳಾರಿ ರಸ್ತೆ ಸದಾ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಆದ್ದರಿಂದ ಪರ್ಯಾಯ ರಸ್ತೆ ನಿರ್ಮಾಣ ತುರ್ತಾಗಿ ಆಗಬೇಕಿದೆ. ಈ ನಿಟ್ಟಿನಲ್ಲಿ ಬಾಗಲೂರು ಮತ್ತು ಬೇಗೂರು ಮಾರ್ಗವನ್ನು ಎರಡನೇ ಮಾರ್ಗವಾಗಿ ಪರಿಗಣಿಸಿ ಕಾಮಗಾರಿ ಕೂಡಲೇ ಆರಂಭಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

> **ಬೆಂಗಳೂರಿನ ಅಭಿವೃದ್ಧಿ ಕುಂಠಿತವಾಗಿದೆ. ಬೆಂಗಳೂರು ಶಾಸಕರಿಗೆ ಅನುದಾನ ನೀಡುವಂತೆ ಒತ್ತಾಯಿಸಿದ್ದೇವೆ**
> **ಆರ್. ಅಶೋಕ,** ವಿಪಕ್ಷ ನಾಯಕ

> **ಬೆಂಗಳೂರು ಅಭಿವೃದ್ಧಿಗೆ ಅನುದಾನ ನೀಡಿ, ಬೇಗ ಬಿಬಿಎಂಪಿಗೆ ಚುನಾವಣೆ ನಡೆಸಿ ಎಂದು ಒತ್ತಾಯಿಸಿದ್ದೇವೆ**
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

> **ಯಾರಿಗೆ ಎಷ್ಟು ಅನುದಾನ ಕೊಡಬೇಕು ಎಂಬುದು ಮುಖ್ಯಮಂತ್ರಿ ಅವರಿಗೆ ಗೊತ್ತಿದೆ. ಬಿಜೆಪಿ ನಾಯಕರಿಗೆ ಬೆಂಗಳೂರು ಈಗ ನೆನಪಾಗಿದೆಯೇ..?**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಐಐಎಸ್‌ಸಿ ‘ಓಪನ್ ಡೇ’ ಇಂದು


ಬೆಂಗಳೂರು: ಐಐಎಸ್‌ಸಿ ತಾನು ನಡೆಸುವ ಪ್ರಯೋಗಗಳು ಮತ್ತು ಸಂಶೋಧನೆಗಳನ್ನು ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರಿಗೆ ಪರಿಚಯಿಸಿ ಕೊಡುವ ‘ಪ್ರತ್ಯಕ್ಷ ವಿಜ್ಞಾನ ದಿನ’ವನ್ನು (ಓಪನ್ ಡೇ) ಶನಿವಾರ ಆಯೋಜಿಸಿದೆ.

ನಗರದ ಐಐಎಸ್‌ಸಿ ಕ್ಯಾಂಪಸ್‌ನಲ್ಲಿ ಇರುವ ವಿವಿಧ ವಿಭಾಗಗಳ ಪ್ರಯೋಗಾಲಯಗಳಿಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಒದಗಿಸಿದೆ. ಮಾಹಿತಿಗೆ: openday.iisc.ac.in ನೋಡಬಹುದು. ವಾಹನಗಳಿಗೆ ಕೇಂದ್ರೀಯ ವಿದ್ಯಾಲಯ ಮೈದಾನ ಮತ್ತು ಜಿಮ್ಖಾನಾ ಮೈದಾನಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಬಲಿಜ ವಧು–ವರರ ಸಮಾವೇಶ

ಬೆಂಗಳೂರು: ಶ್ರೀನಿವಾಸ ಬಲಿಜ ಸಂಘ, ಐಟಿಐ ವತಿಯಿಂದ 18ನೇ ವಧು–ವರರ ಸಮಾವೇಶ ಮತ್ತು ಸಂಘದ 45ನೇ ವಾರ್ಷಿಕೋತ್ಸವವನ್ನು ಮಾರ್ಚ್ 9ರಂದು 9ಗಂಟೆಗೆ ಪುರಭವನದಲ್ಲಿ ಆಯೋಜಿಸಲಾಗಿದೆ.

ವಧು–ವರರ ನೋಂದಣಿಯನ್ನು ಶ್ರೀನಿವಾಸ ಬಲಿಜ ಸಂಘ ವಧು–ವರಾನ್ವೇಷಣಾ ಕೇಂದ್ರ, ಎರಡನೇ ಮಹಡಿ, ಮಹಾಲಕ್ಷ್ಮೀ ಕಾಂಪ್ಲೆಕ್ಸ್, ಶಂಕರ ಮಠ ರಸ್ತೆ, ಉಮಾ ಚಿತ್ರ ಮಂದಿರ ಎದುರು ಇಲ್ಲಿ ಮಾಡಿಕೊಳ್ಳಬಹುದು ಎಂದು ಸಂಘದ ಅಧ್ಯಕ್ಷ ಡಿ.ತುಳಸೀದಾಸ್ ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ ಸಂಖ್ಯೆ– 9886403408 ಸಂಪರ್ಕಿಸಬಹುದು.



ಯುಎಸ್‌ಎ ಅಧ್ಯಕ್ಷರು $5 ಮಿಲಿಯನ್‌ನ ಗೋಲ್ಡ್ ಕಾರ್ಡ್ ಅನ್ನು ಪರಿಚಯಿಸುತ್ತಿದ್ದಾರೆ!

ತೇಜಸ್ವಿ ಸೂರ್ಯ-ಡಿಕೆಶಿ ಭೇಟಿ



ಡಿ.ಕೆ. ಶಿವಕುಮಾರ್ ಅವರನ್ನು ತೇಜಸ್ವಿ ಸೂರ್ಯ ಶುಕ್ರವಾರ ಭೇಟಿ ಮಾಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ಅವರು ವಿಧಾನಸೌಧದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಪ್ರಯಾಗರಾಜ್‌ನ ಕುಂಭಮೇಳದಲ್ಲಿ ಭಾಗವಹಿಸಿ, ಈಶಾ ಯೋಗ ಕೇಂದ್ರದ ಶಿವರಾತ್ರಿ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಜತೆ ವೇದಿಕೆ ಹಂಚಿಕೊಂಡ ನಂತರ ಕಾಂಗ್ರೆಸ್ ವಲಯದಲ್ಲೇ ಶಿವಕುಮಾರ್ ವಿರುದ್ಧ ಟೀಕೆ ಕೇಳಿ ಬಂದಿದ್ದವು. ಈ ನಡುವೆಯೇ ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷರೂ ಆದ ತೇಜಸ್ವಿ ಸೂರ್ಯ ಭೇಟಿ ಮಾಡಿದರು.

‘ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭಿವೃದ್ಧಿ ಕುರಿತು ಚರ್ಚಿಸಲು ತೇಜಸ್ವಿ ಸೂರ್ಯ ಭೇಟಿ ನೀಡಿದ್ದರು. ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ’ ಎಂದು ಮೂಲಗಳು ಹೇಳಿವೆ.

ಸೌರಜ್ವಾಲೆ ಸೆರೆ ಹಿಡಿದ ‘ಆದಿತ್ಯ’

ಪ್ರಜಾವಾಣಿ ವಾರ್ತೆ


ಬೆಂಗಳೂರು: ಸೂರ್ಯನ ಅಧ್ಯಯನಕ್ಕಾಗಿ ಇಸ್ರೊ ಉಡಾವಣೆ ಮಾಡಿದ್ದ ‘ಆದಿತ್ಯ ಎಲ್–1’ ಅಂತರಿಕ್ಷ ವೀಕ್ಷಣಾಲಯದ ಟೆಲಿಸ್ಕೋಪ್, ಸೂರ್ಯನಿಂದ ಹೊರ ಹೊಮ್ಮುವ ಸೌರಜ್ವಾಲೆಯ ದೃಶ್ಯಗಳನ್ನು ಇದೇ ಮೊದಲ ಬಾರಿಗೆ ಸೆರೆ ಹಿಡಿದಿದೆ.

ಸೋಲಾರ್ ಅಲ್ಟ್ರಾವಯೋಲೆಟ್ ಇಮೇಜಿಂಗ್ ಟೆಲಿಸ್ಕೋಪ್ ಭಾರಿ ಪ್ರಮಾಣದ ಸೌರ ಜ್ವಾಲೆಯ ದೃಶ್ಯಗಳನ್ನು ಸೆರೆ ಹಿಡಿದಿದೆ. ಇದರ ಚಿತ್ರಗಳನ್ನು ಇಸ್ರೊ ಶುಕ್ರವಾರ ಬಿಡುಗಡೆ ಮಾಡಿದೆ.

ಸೂರ್ಯನ ಕೆಳಗಿನ ಭಾಗದಲ್ಲಿ ಸಣ್ಣದಾದ ಮತ್ತು ಅತ್ಯಧಿಕ ತಾಪಮಾನ ಹೊಂದಿರುವ ಪ್ರದೇಶದಲ್ಲಿ ಸೌರ ಜ್ವಾಲೆ ಚಿಮ್ಮುವ ವೇಳೆ ಅಧಿಕ ಶಕ್ತಿ ಬಿಡುಗಡೆಯಾಗುತ್ತದೆ. ಈ ಪ್ರದೇಶವನ್ನು ‘ಕರ್ನಲ್’ ಎಂದು ಕರೆಯಲಾಗುತ್ತದೆ. ಇದನ್ನು ದ್ಯುತಿಗೋಳ ಮತ್ತು ವರ್ಣಗೋಳ ಎಂದೂ ಕರೆಯಲಾಗುತ್ತದೆ. ಈ ಪ್ರದೇಶದ ಚಟುವಟಿಕೆಗಳನ್ನು ಅಲ್ಟ್ರಾ ವಯೋಲೆಟ್ ಬ್ಯಾಂಡ್ ಕೂಡ ದಾಖಲಿಸಿದೆ ಎಂದು ಇಸ್ರೊ ಪ್ರಕಟಣೆಯಲ್ಲಿ ವಿವರಿಸಿದೆ.

ಸೂರ್ಯನಲ್ಲಿ ನಡೆಯುವ ಸ್ಫೋಟದ ಚಟುವಟಿಕೆಗಳು ಮತ್ತು ಅದು ಭೂಮಿಯ ಮೇಲೆ ಬೀರಬಹುದಾದ ಪರಿಣಾಮಗಳನ್ನು ಅರಿಯಲು ಸೌರಜ್ವಾಲೆಯ ವೀಕ್ಷಣೆ ಮತ್ತು ಅದಕ್ಕೆ ಸಂಬಂಧಿಸಿದ ವೈಜ್ಞಾನಿಕ ಫಲಿತಾಂಶ ಮಹತ್ವದ ಹೆಜ್ಜೆ ಎನಿಸಲಿದೆ. ಇದು ಭಾರತದ ಬಾಹ್ಯಾಕಾಶ ವಿಜ್ಞಾನದ ಇತಿಹಾಸದಲ್ಲಿ ಮಹತ್ವದ ವಿದ್ಯಮಾನ ಎಂದು ಇಸ್ರೊ ಬಣ್ಣಿಸಿದೆ.

2023 ರ ಸೆಪ್ಟೆಂಬರ್ 2 ರಂದು ಪಿಎಸ್‌ಎಲ್‌ವಿ ಸಿ–57 ರಾಕೆಟ್ ಮೂಲಕ ಆದಿತ್ಯ ಎಲ್–1 ಅನ್ನು ಉಡಾವಣೆ ಮಾಡಲಾಗಿತ್ತು. 2024 ರ ಜನವರಿ 6 ರಂದು ಭೂಮಿಯಿಂದ 15 ಲಕ್ಷ ಕಿ.ಮೀ ದೂರದಲ್ಲಿರುವ ಲೆಂಗ್ರಾಜ್ ಎಲ್ ಒನ್ ಬಿಂದುವಿನಲ್ಲಿ ನೆಲೆಗೊಳಿಸಲಾಗಿತ್ತು. ಈ ಬಿಂದುವಿನಲ್ಲಿ ನೆಲೆಗೊಂಡ ವೀಕ್ಷಣಾಲಯ ನಿರಂತರವಾಗಿ ಸೌರ ಚಟುವಟಿಕೆಯ ಮೇಲೆ ನಿಗಾ ಇಟ್ಟಿದೆ.



ಸೌರಜ್ವಾಲೆಯ ಚಿತ್ರಗಳು

ಆದಿತ್ಯ ಎಲ್–1 ರಲ್ಲಿ ಒಟ್ಟು ಏಳು ಉಪಕರಣಗಳಿದ್ದು, ನಾಲ್ಕು ಉಪಕರಣಗಳು ಸೂರ್ಯನ ಪ್ರಭಾಗೋಳ, ವರ್ಣಗೋಳ ಮತ್ತು ಕಿರೀಟದ (ಕರೋನಾ) ಅಧ್ಯಯನವನ್ನು ನಡೆಸುತ್ತಿವೆ. ಉಳಿದ ಮೂರು ಉಪಕರಣಗಳು ಆಯಸ್ಕಾಂತ ಕ್ಷೇತ್ರ ಮತ್ತು ಕಣ ಪ್ರವಾಹದ ವೀಕ್ಷಣೆ ನಡೆಸುತ್ತಿವೆ. ಇದರಲ್ಲಿ ಖಭೌತ ವಿಜ್ಞಾನಕ್ಕೆ ಸಂಬಂಧಿಸಿದ ದೇಶದ ಏಳು ಪ್ರಮುಖ ಸಂಸ್ಥೆಗಳು ಕೈಜೋಡಿಸಿವೆ.

ಅಕ್ಟೋಬರ್ 29 ರಂದು ಆದಿತ್ಯ ಎಲ್–1 ನ ಎಕ್ಸ್‌ರೇ ಸ್ಪೆಕ್ಟ್ರೊಮೀಟರ್ ಮೊದಲ ಬಾರಿಗೆ ಸೂರ್ಯನ ಸೌರಜ್ವಾಲೆಗಳ ಪ್ರಚಂಡ ಶಕ್ತಿಯ ಕ್ಷ-ಕಿರಣವನ್ನು ದಾಖಲಿಸಿತ್ತು. ಸತತ ಸುಮಾರು 10 ತಾಸುಗಳ ಕಾಲ ವೀಕ್ಷಿಸಿತ್ತು. ಆಗ ಹಠಾತ್ ಆಗಿ ಹೊಮ್ಮಿದ ಸೌರಜ್ವಾಲೆಯ ಚಟುವಟಿಕೆಯನ್ನು ಎಕ್ಸ್‌ರೇ ಸ್ಪೆಕ್ಟ್ರೊಮೀಟರ್ ದಾಖಲಿಸಿಕೊಂಡಿತು. ಜ್ವಾಲೆಯ ಶಕ್ತಿಯ ಏರಿಳಿತಗಳೂ ದಾಖಲಾಗಿತ್ತು.

ಹಠಾತ್ ಸೌರ ಜ್ವಾಲೆ ಹೊಮ್ಮಿದ ಸಂದರ್ಭದಲ್ಲಿ ಸ್ಫೋಟಕ ಸ್ವರೂಪದ ಶಕ್ತಿ ಬಿಡುಗಡೆ, ಎಲೆಕ್ಟ್ರಾನ್‌ಗಳ ವೇಗ ವರ್ಧನೆ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧಕರ ಅಧ್ಯಯನಕ್ಕೆ ಈ ದತ್ತಾಂಶ ಉಪಯುಕ್ತವಾಗುತ್ತವೆ. ಎಕ್ಸ್‌ರೇ ಸ್ಪೆಕ್ಟ್ರೊಮೀಟರ್ ಅನ್ನು ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರ ಸ್ಪೇಸ್ ಆಸ್ಟ್ರೊನಮಿ ಗ್ರೂಪ್ ಅಭಿವೃದ್ಧಿಪಡಿಸಿತ್ತು.



ಬೆಂಗಳೂರಿನ ಹೆಣ್ಣೂರಿನಲ್ಲಿ ಮಲಬಾರ್ ಗೋಲ್ಡ್‌ನ 20ನೇ ಮತ್ತು ಕರ್ನಾಟಕದಲ್ಲಿ 38ನೇ ಶೋರೂಂ ಅನ್ನು ಶಾಸಕ ಬೈರತಿ ಬಸವರಾಜ ಅವರು ಉದ್ಘಾಟಿಸಿದರು. ನಟಿ ಶ್ರೀನಿಧಿ ಶೆಟ್ಟಿ, ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್‌ನ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಉಪಸ್ಥಿತರಿದ್ದರು



ಪ್ರತಿಯೊಬ್ಬರ ಬದುಕಿನಲ್ಲಿಯೂ ಕುಸಿದ ಕ್ಷಣಗಳು ಇದ್ದೇ ಇರುತ್ತವೆ. ಬದುಕಿನ ಕಹಿಗಳಿಗೆಗಳನ್ನು ತದುಕುತ್ತ ಪುಟಿದೇಳಲು ಬೇಕಾಗುವ ಚೇತನದ ದೀಪ ಬೆಳಗುವುದು ಹೇಗೆ ಎಂಬುದನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಮಾಸದಲ್ಲಿ ವಿವಿಧ ಕ್ಷೇತ್ರಗಳ 'ತಾರೆ'ಯರು ಮಾತನಾಡಿದ್ದಾರೆ.

ಭರವಸೆಯ ದೀವಿಗೆ ಮುಡಿಸುತ್ತ...

ನಿರೂಪಣೆ: ರೂಪಾ ಕೆ.ಎಂ.

ಹೋರಾಟವೇ ಆತ್ಮಸ್ಥೈರ್ಯ

ನನ್ನ ಬದುಕು ಒಂದು ಹೋರಾಟವೇ ಆಗಿದೆ. ಒಂದೊತ್ತಿನ ಊಟಕ್ಕೆ, ಬಟ್ಟೆಗೆ, ಓದುವುದಕ್ಕೆ ಕೊನೆಗೆ ಬದುಕಿಗಾಗಿ ಹೋರಾಟ ಮಾಡುತ್ತಲೇ ಬಂದಿದ್ದೇನೆ. ಆಗಾಗ್ಗೆ ಕುಸಿಯುವ ಪ್ರಸಂಗಗಳು ಬಂದಾಗೆಲ್ಲ ನಾನು ನನ್ನ ಹೋರಾಟ ಹಾದಿಯನ್ನೊಮ್ಮೆ ಕಣ್ಮುಚ್ಚಿ ನೆನೆಸಿಕೊಳ್ಳುತ್ತೇನೆ. ಅದೇ ನನಗೆ ನಿಜವಾದ ಸ್ಫೂರ್ತಿ. ನಾನು ಬಂದ ದಾರಿ ಎಷ್ಟು ಸವಾಲಿನಿಂದ ಕೂಡಿತ್ತು. ಅದನ್ನೆಲ್ಲ ನೆನೆಸಿಕೊಂಡಾಗ ಚೆಂಡಿನಂತೆ ಪುಟಿದೇಳುತ್ತೇನೆ.

ಹೋರಾಟ ಎನ್ನುವುದು ಬದುಕು ಕೊಟ್ಟ ಆತ್ಮಸ್ಥೈರ್ಯ. ಏನನ್ನೂ ಬೇಕಾದರೂ ಸಾಧಿಸಬಲ್ಲೆ ಎನ್ನುವ ಗರ್ವ ಬಂದಿರುವುದು ಹೋರಾಟದಿಂದಲೇ. ಈ ವ್ಯವಸ್ಥೆಯಲ್ಲಿ ಒಳ್ಳೆಯದನ್ನು ಪಡೆಯಬೇಕಾದರೂ ಮುನ್ನುಗ್ಗಿ ಧುಮುಕಬೇಕು. ಹಾಗೆ ಧುಮುಕುವಾಗ ಒಂದಷ್ಟು ಕಷ್ಟಗಳು ಎದುರಾಗಬಹುದು. ಆಮೇಲೆ ಎಲ್ಲವನ್ನು ಸಾಧಿಸಿಕೊಳ್ಳಲು ಸಾಧ್ಯವಿದೆ. ವ್ಯವಸ್ಥೆಯನ್ನೇ ಬದಲಾಯಿಸಲು ಸಾಧ್ಯವಿದೆ. ಅದಕ್ಕೆ ಒಳಗಿನಿಂದ ಅದಮ್ಯ ಒತ್ತಡ ಇರಬೇಕು. ಆ ಒತ್ತಡಕ್ಕೆ ಸ್ಫೂರ್ತಿಯೂ ನನ್ನ ಹೋರಾಟದ ಬದುಕೇ ಆಗಿದೆ. ನನ್ನ ಮದುವೆಯ ನೋಂದಣಿ, ದತ್ತು ಸ್ವೀಕಾರ, ವಿಚ್ಛೇದನ, ಅವಿನ್‌ಗೆ ಪಾಸ್‌ಪೋರ್ಟ್ ಕೊಡಿಸುವ ಪ್ರಕ್ರಿಯೆ, ನನ್ನನ್ನು ಒಪ್ಪಿಕೊಂಡ ಪ್ರಕ್ರಿಯೆ ಈ ಎಲ್ಲದರಲ್ಲಿಯೂ ಹೋರಾಟವೇ ಗೆದ್ದಿರುವುದು. ಮುಂದೆ ಕೂಡ ಒಳ್ಳೆತನಕ್ಕಾಗಿ ಮಾಡುವ ಹೋರಾಟವೇ ಗೆಲ್ಲುವುದು. ಹಾಗೆಂದು ನನಗೆ ಭಯ, ಅಂಜಿಕೆಗಳು ಇಲ್ಲ ಅಂತಲ್ಲ. ಭಯ ಎನ್ನುವುದಕ್ಕಿಂತಲೂ ಉಳಿದ ಎಲ್ಲದರ ಬಗ್ಗೆಯೂ ಅಪಾರವಾದ ಗೌರವ ಇದೆ. ಕೆಲವೊಂದು ಮಡಿವಂತ ಸ್ಥಳಗಳಲ್ಲಿ ಅಕ್ಕೈ ಆಗಿ ಉಳಿಯಲು ಸಾಧ್ಯವಾಗದೇ ಇದ್ದಾಗ ಸ್ವಲ್ಪ ಅಂಜಿಕೆ ಅನಿಸುತ್ತದೆ. ಅಂಥ ಸಂದರ್ಭಗಳು ಎದುರಾದಾಗ ಆದಷ್ಟು ಬೇಗ ಅಲ್ಲಿಂದ ಹೊರ ಬರಲು ಇಚ್ಛಿಸುತ್ತೇನೆ.



ಅಕ್ಕೈ ಪದ್ಮಸಾಲಿ, ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಕಾರ್ಯಕರ್ತೆ



ಮಹತ್ವಾಕಾಂಕ್ಷೆಯ ಇಂಧನ

ಬಾಸ್ ಅಂಥ ಯಾರೂ ಇಲ್ಲದೇ ಇದ್ದಾಗ, ಫ್ರೀಲ್ಯಾನ್ಸಿಂಗ್ ಅಂತೆಲ್ಲ ಇದ್ದಾಗ ಆಗಾಗ್ಗೆ ನನ್ನ ಕೈಲಿ ಇದು ಆಗಲ್ಲ, ಅದು ಆಗಲ್ಲ ಅಂತೆಲ್ಲ ಅನಿಸುತ್ತಿರುತ್ತೆ. ಹಾಗೆ ಅನಿಸಿದಾಗೆಲ್ಲ ನಾನು 'ಅಯ್ಯೊ ಆಗ್ತಿಲ್ವಲ್ಲ ಅಂತ' ಗೋಗರೆದುಕೊಂಡು ಕುಳಿತುಕೊಳ್ಳಲ್ಲ. ಇವತ್ತು ಆಗುವುದಿಲ್ಲ ಅಂದರೆ ನಾಳೆ ಮಾಡಿಯೇ ತೀರುತ್ತೇನೆ ಅಂಥ ನನಗೆ ನಾನೇ ಡೆಡ್‌ಲೈನ್ ಹಾಕಿಕೊಳ್ತೀನಿ. ಅದು ಯಾವ ವಿಚಾರವಾದರೂ ಅಷ್ಟೆ. ಇವತ್ತು ಆಗಲ್ವ, ಮತ್ತೆ ಎರಡು ದಿನಗಳನ್ನು ನನಗೆ ನಾನೇ ಕೊಟ್ಟು ಕೊಳ್ತೀನಿ.

ಸೋತಂತ ಭಾವ ಬರಲು ಹಲವಾರು ಕಾರಣಗಳಿರುತ್ತವೆ. ದೈಹಿಕ, ಮಾನಸಿಕ ಒತ್ತಡಗಳು ಕಾರಣವಾಗಿರುತ್ತವೆ. ಕುಳಿತುಕೊಂಡು ಎಷ್ಟು ಹೊತ್ತು ಬೇಕಾದರೂ ಕೆಲಸ ಮಾಡಿಬಿಡಬಲ್ಲೆ. ನಗೆಬರಹ, ಸ್ಕ್ರಿಪ್ಟ್ ಹೀಗೆ ಎಲ್ಲ ಕೆಲಸವನ್ನು ಯಾವುದೇ ಬೇಜಾರಿಲ್ಲದೇ ಮಾಡಿಬಿಡಬಲ್ಲೆ. ಆದರೆ, ಜಿಮ್‌ಗೆ ಹೋಗಬೇಕಾದರೆ ಮಾತ್ರ ನನಗೆ ಹೆಚ್ಚಿನ ಪ್ರೇರಣೆ ಬೇಕಾಗುತ್ತದೆ. ಆಗ ತರಬೇತುದಾರರ ಆಸಕ್ತಿ ಕಂಡು, ಅರೆ ಇವರೇ ಆಸಕ್ತಿ ತೋರುತ್ತಿದ್ದಾರೆ ಎಂದ ಮೇಲೆ ನಾನ್ಯಾಕೆ ಹೀಗಿರಬೇಕು ಅಂದುಕೊಂಡು ಖುಷಿಯಲ್ಲಿ ತೊಡಗಿಕೊಳ್ತೀನಿ.

ಒಳಗಿನಿಂದ ಪ್ರೇರಣೆ ಹುಟ್ಟದೇ ಹೋದರೆ ನಾವು ಮಾಡಿದ ಯಾವ ಕೆಲಸದಲ್ಲಿಯೂ ತೃಪ್ತಿ ಸಿಗುವುದಿಲ್ಲ. ಮಾಡಿದ ಅಡುಗೆ ರುಚಿಸುವುದಿಲ್ಲ, ಶಾಪಿಂಗ್ ಬೇಡ ಅನಿಸುತ್ತೆ. ಕೊನೆಗೆ ಹೊರಗೆ ತಿಂದ ಪಾನಿಪೂರಿಯಲ್ಲಿಯೂ ರುಚಿ ಕಾಣಿಸುವುದಿಲ್ಲ. ಹಾಗಾಗಿ ಒಳಗಿನ ಪ್ರೇರಣೆಗಾಗಿ ಆದಷ್ಟು ರೋಮ್ಯಾಂಟಿಕ್ ಕಾಮಿಡಿ ಪ್ರಕಾರದ ಹಳೆಯ ಸಿನಿಮಾಗಳನ್ನು ಹೆಚ್ಚು ನೋಡ್ತಿನಿ. ಅದರಲ್ಲಿಯೂ 'ಗಣೇಶನ ಮದುವೆ' ನನ್ನಿಷ್ಟದ ಸಿನಿಮಾ.

ನನಗೆ ಬೇಸರ ಆಯಿತೆಂದು ಸುಮ್ಮನೆ ಕೂರಲು ಆಗುವುದಿಲ್ಲ. ನನ್ನೊಳಗಿರುವ ಮಹತ್ವಾಕಾಂಕ್ಷೆಯೇ ಮುಂದಡಿ ಇಡಲು ಇರುವ ಇಂಧನ. ಇದಾಯ್ತಾ, ಇನ್ನಾ ಮಾಡಬಹುದು ಅಂತಾನೇ ಮುಂದೆ ಹೋಗ್ತೀನಿ. ಹೊಸತನ್ನು ಕಲಿಯುವುದಕ್ಕೆ ಇಷ್ಟಪಡ್ತೀನಿ. ಮೊದಲಿಗೆ ನನಗೆ ಪೇಂಟಿಂಗ್‌ನಲ್ಲಿ ಆಸಕ್ತಿ ಇರಲಿಲ್ಲ. ಕ್ರಮೇಣ ನಿತ್ಯ ಅದನ್ನೇ ಅಭ್ಯಾಸ ಮಾಡ್ತಾ ಮಾಡ್ತಾ ಆಸಕ್ತಿ ಬಂತು. ಹಾಗೆ ನನಗೆ ಒಗ್ಗದ ಕೆಲವು ಸಂಗತಿಗಳನ್ನೇ ಕಲಿಯಲು ಇಷ್ಟಪಡ್ತೀನಿ. ಹಾಗೆ ನನಗೆ ನಾನೇ ಸವಾಲು ಹಾಕಿಕೊಳ್ಳುತ್ತ ಮಿದುಳನ್ನು ಕ್ರಿಯಾಶೀಲವಾಗಿ ಇಡಲು ಪ್ರಯತ್ನಿಸ್ತೀನಿ.

ಸೋನು ವೇಣುಗೋಪಾಲ್, ಸ್ಟ್ಯಾಂಡ್‌ಅಪ್ ಕಾಮಿಡಿಯನ್

ರಚನಾತ್ಮಕ ಯೋಚನೆಯೇ ಪರಿಹಾರ

'ಈ ಗಳಿಗೆಯೂ ಕಳೆಯುತ್ತದೆ' ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟಿದ್ದೇನೆ. ಹಾಗಾಗಿ ಯಾವುದು ಕುಸಿಯುವಂತೆ ಮಾಡುತ್ತದೋ ಅದು ನನ್ನೊಳಗೆ ಹೆಚ್ಚು ಕಾಲ ಉಳಿಯಲಾರದು. ಇದು ಆಗಾಗ್ಗೆ ಅನುಭವಕ್ಕೆ ಬರುವ ವಿಚಾರವೇ ಹೌದು. ನನಗೆ ಸಂಜೆಯಾಗುತ್ತಿದ್ದಂತೆ ಬೇಸರ, ಹತಾಶೆ ಜಾಸ್ತಿಯಾಗುತ್ತದೆ. ಸಾಯಂಕಾಲದಿಂದ ರಾತ್ರಿಯವರೆಗೆ ಆ ಬೇಸರ ದೊಡ್ಡಮಟ್ಟದಲ್ಲಿ ಇರುತ್ತದೆ. ದೊಡ್ಡದು ಏನೋ ಆಗಿಯೇ ಹೋಯ್ತು ಎನ್ನುವಷ್ಟು ಬೇಸರ ತುಂಬಿಕೊಳ್ಳುತ್ತೇನೆ. ಆದರೆ, ಬೆಳಿಗ್ಗೆಯಾಗುವ ಹೊತ್ತಿಗೆ ಅದು ಕರಗಿ ನೀರಾಗಿರುತ್ತದೆ. ಆ ಭಾವಗಳಿಗೆ ಅಷ್ಟು ತೀವ್ರತೆ ಇರುವುದಿಲ್ಲ. ಸಂಜೆ ಇದ್ದ ನೋವು ಮರುದಿನ ಬೆಳಿಗ್ಗೆ ಆಗುವ ಹೊತ್ತಿಗೆ ಇಲ್ಲವಾಯಿತಲ್ಲ ಇದನ್ನೇ ನಾನು ನೆನಪು ಮಾಡಿಕೊಳ್ಳುತ್ತ ನನ್ನ ಆಲೋಚನೆಗಳಿಗೆ ಹುರುಪು ತುಂಬಿಕೊಳ್ಳುತ್ತೇನೆ. ಬೆಳಿಗ್ಗೆ ಎದ್ದ ತಕ್ಷಣ ಪ್ರತಿ ದಿನವೂ ನನಗೆ ಹೊಸತೇ. ಯಾವುದಾದರೂ ಕೆಲಸ, ಸಂದರ್ಭ ನನ್ನ ಕೈಲಿ ನಿರ್ವಹಿಸಲು ಆಗುತ್ತಿಲ್ಲ ಅನಿಸಿದಾಗೆಲ್ಲ ನಾನು ಅದನ್ನು ಬಿಡಿ ಬಿಡಿಯಾಗಿ ನೋಡಲು ಇಚ್ಛಿಸುತ್ತೇನೆ. ಉದಾಹರಣೆಗೆ ಐದು ವರ್ಷದೊಳಗೆ ಪಿಎಚ್‌.ಡಿ ಮಾಡುತ್ತೀನಿ ಅಂದರೆ ಆಗುವುದಿಲ್ಲ. ಮೊದಲಿಗೆ ಪ್ರವೇಶ ಪರೀಕ್ಷೆಗೆ ಶ್ರದ್ಧೆಯಿಂದ ತಯಾರಾಗುವುದರ ಬಗ್ಗೆ ಮಾತ್ರ ಯೋಚನೆ ಮಾಡುವೆ. ಚಿಕ್ಕ ಚಿಕ್ಕ ಹೆಜ್ಜೆ ಇಡುವುದಕ್ಕೆ ಪ್ರಯತ್ನ ಮಾಡ್ತೀನಿ. ಏನು ಆಗಲ್ಲ ಅಂಥ ಅನಿಸಿದಾಗೆಲ್ಲ ಏನು ಮಾಡಬಹುದು? ಎಂಬುದರ ಬಗ್ಗೆ ಮಾತ್ರ ರಚನಾತ್ಮಕವಾಗಿ ಯೋಚನೆ ಮಾಡ್ತೀನಿ. ಚಿಕ್ಕ ಚಿಕ್ಕ ಹೆಜ್ಜೆಗಳೇ ನಮ್ಮನ್ನು ದೊಡ್ಡ ಬೆಟ್ಟದ ಸಮೀಪ ತಲುಪಿಸಬಲ್ಲದು. ಏನೂ ಮಾಡದೇ ಇದ್ದರೂ ಸಮಯ ಕಳೆದು ಹೋಗಿಬಿಡುತ್ತದೆ. ಆದರೆ, ಏನಾದರೂ ಉಪಯೋಗವಾಗುವಂಥದ್ದು ಮಾಡಿ ಸಮಯ ಕಳೆಯುವ ಬಗ್ಗೆ ಯೋಚಿಸೋಣ. ಬೇಸರ ಅನಿಸಿದಾಗಲೂ ನೋವಾಗುತ್ತೆ. ಆದರೆ, ಆ ಬೇಸರವನ್ನು ಮೀರುವ ಬಗೆಯಲ್ಲಿ ನಾವು ಮಾಡುವ ಕೆಲಸ ಹಾಗೂ ಅದಕ್ಕೆ ವಹಿಸುವ ಶ್ರಮದಿಂದಲೂ ನಮಗೆ ಸಹಜವಾಗಿ ನೋವಾಗುತ್ತೆ. ಶ್ರಮದಲ್ಲಿ ನೋವು ಕಂಡರೆ ಅದಕ್ಕೊಂದು ಅರ್ಥವಿದೆ. ಈ ಆಲೋಚನೆಯೇ ನನ್ನನ್ನು ಸದಾ ಮುಂದಡಿ ಇಡುವಂತೆ ಪ್ರೇರೇಪಿಸುತ್ತದೆ.

ರಂಜನಿ ರಾಘವನ್, ನಟಿ

ಹೊರಬಾಂಧವ್ಯಕ್ಕೆ ಮನ ಹಾತೊರೆಯುವುದೇಕೆ?




ಅಂತರಂಗ

ಅಕ್ಷರ ದಾಮ್ಲೆ

- **ನನ್ನ ಗಂಡ ಬೇರೊಬ್ಬಳೊಂದಿಗೆ ದೈಹಿಕ ಹಾಗೂ ಮಾನಸಿಕವಾಗಿ ಸಂಬಂಧ ಹೊಂದಿದ್ದಾನೆ ಎನ್ನುವ ಗುಮಾನಿ ಇದೆ. ಅದೂ ಗುಮಾನಿಯಷ್ಟೆ ಎಂದೂ ಮನಸ್ಸು ಸಮಾಧಾನಿಸಿಕೊಂಡರೂ, ದಿನೇ ದಿನೇ ನಡೆಯುತ್ತಿರುವ ಘಟನೆಗಳು ಈ ಗುಮಾನಿಯನ್ನು ಪುಷ್ಟೀಕರಿಸುತ್ತಿವೆ. ಹಾಗಾಗಿ ಬೇರೆ ದಾರಿಯಲ್ಲಿ ನಡೆಯುತ್ತಿರುವ ಗಂಡನನ್ನು ಸರಿ ದಾರಿಗೆ ತರುವುದು ಹೇಗೆ?. ನನ್ನ ಮತ್ತು ಅವನ ಸಂಬಂಧ ಚೆನ್ನಾಗಿಯೇ ಇದೆ. ಅವನ ಸಣ್ಣ ಕದಲಿಕೆಯೂ ಬಹುಬೇಗ ಅರ್ಥವಾಗುತ್ತದೆ. ಪತ್ನಿಯೊಂದಿಗೆ ಉತ್ತಮ ಸಂಬಂಧ ಇದ್ದರೂ ಬೇರೆ ಸಂಬಂಧ ಇಟ್ಟುಕೊಳ್ಳಬೇಕು ಎಂದು ಗಂಡಸರಿಗೆ ಯಾಕೆ ಅನಿಸುತ್ತದೆ? ಮತ್ತು ಇದಕ್ಕೆ ಪರಿಹಾರವೇನು?**

ನಮ್ಮ ಸಮಾಜದಲ್ಲಿ ದಾಂಪತ್ಯಕ್ಕೆ ವಿಶೇಷವಾದ ಪ್ರಾಮುಖ್ಯ ಇದೆ. ಹಿಂದಿನ ಕಾಲದಿಂದಲೂ ಬಂದಿರುವಂತಹ ಜೀವನದ ನಾಲ್ಕು ಮಜಲುಗಳ ವ್ಯಾಖ್ಯಾನದಲ್ಲೂ ಗೃಹಸ್ಥಾಶ್ರಮಕ್ಕೆ ಹೆಚ್ಚಿನ ಮಹತ್ವ ಇದೆ. ಯಾಕೆಂದರೆ, ಈ ಹಂತದಲ್ಲಿ ವ್ಯಕ್ತಿ ತನ್ನ ಬಾಳಸಂಗಾತಿಯೊಂದಿಗೆ ತನ್ನ ಜೀವನವನ್ನು ಕಟ್ಟಿಕೊಳ್ಳುವ ಒಂದು ಹೊಸ ಆಯಾಮ ದೊರಕುತ್ತದೆ. ಅಲ್ಲಿಯವರೆಗಿನ ವಿದ್ಯಾರ್ಥಿ ದೆಸೆಯ ಜೀವನಕ್ಕಿಂತ ಇದು ಭಿನ್ನವಾಗಿರುತ್ತದೆ. ಕಾರಣವೇನೆಂದರೆ, ಇಲ್ಲಿ ಜವಾಬ್ದಾರಿಗಳು ಜಾಸ್ತಿ ಮತ್ತು ಧರ್ಮ (ಸರಿಯಾದ ಮಾರ್ಗ) ಮತ್ತು ಅರ್ಥವನ್ನು (ಆರ್ಥಿಕತೆ) ಸರಿದೂಗಿಸಿಕೊಂಡು ಹೋಗುವುದರ ಜೊತೆಗೆ, ಮನೋಕಾಮನೆಗಳನ್ನೂ ಪೂರೈಸಿಕೊಳ್ಳುವ ಸಂಕೀರ್ಣ ಸ್ಥಿತಿ ಇದಾಗಿರುತ್ತದೆ. ಮದುವೆಯಾಗುವಾಗ 'ನೀ ನನಗಿದ್ದರೆ ನಾ ನಿನಗೆ' ಎನ್ನುವ ಬದಲು ತಾವು ಜೊತೆಯಾಗಿ ಬಾಳನೌಕೆಯನ್ನು ಸಾಗಿಸೋಣ ಎನ್ನುವಂತಹ ಒಂದು ಪ್ರಮಾಣವನ್ನು ಸತಿ-ಪತಿಗಳು ತಮ್ಮೊಳಗೆ ಮಾಡಿಕೊಳ್ಳುತ್ತಾರೆ. ಮತ್ತು ಆ ಸಂಬಂಧಕ್ಕೆ ಇಬ್ಬರೂ ಬದ್ಧರಾಗಿರಬೇಕು ಎಂಬ ಅಪೇಕ್ಷೆಯನ್ನೂ ಇಟ್ಟುಕೊಳ್ಳುತ್ತಾರೆ. ಅದು ಹಾಗೆಯೇ ಇದ್ದಾಗ ಜೀವನದಲ್ಲಿ ಬರುವಂತಹ ಎಂಥ ಕಷ್ಟಗಳೇ ಆದರೂ ಅವುಗಳನ್ನು ಎದುರಿಸುವ ಶಕ್ತಿ ಬರುತ್ತದೆ. ಮಾತ್ರವಲ್ಲ, ಅಲ್ಲಿ ನೈತಿಕ ಬಲ, ಸಾಮಾಜಿಕ ಬಲ ಮತ್ತು ಭಾವನಾತ್ಮಕ ಬಲ ಇವೆಲ್ಲವೂ ಇರುತ್ತವೆ. ಆದರೆ, ದುರದೃಷ್ಟವಶಾತ್ ಅನೇಕರು ದಾಂಪತ್ಯದ ನಿಷ್ಠೆಯ ಬದಲು ದಾಂಪತ್ಯ ದ್ರೋಹವನ್ನು ಎದುರಿಸುತ್ತಾರೆ. ಇದು ಕೇವಲ ಗಂಡಸರು ತಮ್ಮ ಹೆಂಡತಿಯರಿಗೆ ಮೋಸ ಮಾಡುತ್ತಿರುವುದಷ್ಟೇ ಅಲ್ಲ, ಅನೇಕ ಹೆಂಡತಿಯರು ತಮ್ಮ ಗಂಡಂದಿರಿಗೆ ಮೋಸ ಮಾಡುತ್ತಿದ್ದಾರೆ. 2014ರ ಆಶ್ಲೇ ಮ್ಯಾಡಿಸನ್ ಸಮೀಕ್ಷೆಯ ಪ್ರಕಾರ ಶೇ 76ರಷ್ಟು ಹೆಂಗಸರು ಮತ್ತು ಶೇ 61ರಷ್ಟು ಗಂಡಸರು ದಾಂಪತ್ಯ ದ್ರೋಹವನ್ನು ಅಥವಾ ಅನೈತಿಕ ಸಂಬಂಧವನ್ನು ಪುಷ್ಟೀಕರಿಸಿದ್ದಾರೆ. ಅಂದರೆ ಒಂದಲ್ಲಾ ಒಂದು ಸಂದರ್ಭದಲ್ಲಿ ಅವರುಗಳೂ ಅನೈತಿಕ ಸಂಬಂಧದಲ್ಲಿ ಭಾಗಿಯಾಗಿರಬಹುದು ಎಂಬುವುದನ್ನು ಊಹಿಸಬಹುದು. ಯಾಕೆ ಈ ದಿಕ್ಕಿನಲ್ಲಿ ಸಮಾಜ ಚಲಿಸುತ್ತಿದೆ ಎನ್ನುವುದಕ್ಕೆ ಜನರು ವಿವಿಧ ಕಾರಣಗಳನ್ನು ಕೊಡುತ್ತಾರೆ. ಅವುಗಳಲ್ಲಿ ಕೆಲವನ್ನು ಹೇಳುವುದಾದರೆ, ಸುಲಭವಾಗಿ ಲಭ್ಯವಿರುವ ಡೇಟಿಂಗ್ ಆ್ಯಪ್‌ಗಳು, ಜಾಗತಿಕ ಸಂಸ್ಕೃತಿಗೆ ನಮ್ಮನ್ನು ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಂಡಿರುವುದು, ವರ್ಕಿಂಗ್ ಸ್ಪೌಸ್ (ಉದ್ಯೋಗದ ಸಂಗಾತಿ) ಎಂಬಂತಹ ಪರಿಕಲ್ಪನೆಗಳು, ನಗರದಲ್ಲಿರುವಂತಹ ಅನಾಮಧೇಯತೆ ಮತ್ತು ಅದರಿಂದಾಗಿ ಬೆಳೆದಿರುವ ಗೌಪ್ಯತೆ ಹೀಗೆ ಬೇರೆ ಬೇರೆ ಕಾರಣಗಳಿಂದಾಗಿ ಇಂದು ಅನೇಕರು ಮದುವೆಯಾಚೆಗಿನ ಸಂಬಂಧದಲ್ಲಿ ತೊಡಗಿಸಿಕೊಂಡಿದ್ದಾರೆ. ಇದಕ್ಕೆ ಕೆಲವೊಂದು ಮಾನಸಿಕ ಸ್ಥಿತಿಗಳೂ ಕಾರಣಗಳಾಗಿರಬಹುದು. ಹೈಪರ್ ಸೆಕ್ಸುವಾಲಿಟಿ ಎನ್ನುವುದು ಬೇರೆ ಬೇರೆ ರೀತಿಯ ಮಾನಸಿಕ ಆರೋಗ್ಯದ ಸಮಸ್ಯೆಗಳಿಂದಾಗಿ ಬರಬಹುದು. ಉದಾಹರಣೆಗೆ, ಸೆಕ್ಸುವಲ್ ಅಡಿಕ್ಟ್ (ಲೈಂಗಿಕತೆಯ ಚಟ), ಪ್ಯಾರಾಫಿಲಿಯ, ಫೆಟಿಷಿಸಂ ಅಥವಾ ಬೈಪೋಲಾರ್ ಡಿಸಾರ್ಡರ್ ಮುಂತಾದ ಸಮಸ್ಯೆಗಳ ಕಾರಣಗಳಿಂದಲೂ ಒಬ್ಬ ವ್ಯಕ್ತಿ ಮತ್ತೆ ಮತ್ತೆ ಲೈಂಗಿಕ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸುತ್ತಾನೆ ಅಥವಾ ವಹಿಸುತ್ತಾಳೆ. ಜೊತೆಗೆ ಇನ್ನೂ ಕೆಲವರಿಗೆ ಒಬ್ಬರೊಂದಿಗೇ ಲೈಂಗಿಕ ಸಂಪರ್ಕವನ್ನು ಹೊಂದಿರುವುದು ಬಂಧನದಂತೆ ಭಾಸವಾಗುತ್ತದೆ. ಮತ್ತು ಅವರಿಗೆ ಅನೇಕರೊಂದಿಗಿನ ಲೈಂಗಿಕ ಚಟುವಟಿಕೆಯೇ ಹೆಚ್ಚು ಖುಷಿ ಕೊಡುತ್ತದೆ.



ಅನೇಕ ಕಾರಣಗಳಿಂದಾಗಿ ವ್ಯಕ್ತಿಗಳು ಮದುವೆಯಾಚೆಗಿನ ಸಂಬಂಧದಲ್ಲಿ ತೊಡಗುತ್ತಾರೆ. ನಿಮ್ಮ ಗುಮಾನಿ ಏನಿದೆಯೋ ಅದಕ್ಕೇನಾದರೂ ಸಾಕ್ಷ್ಯ ಸಿಕ್ಕಲ್ಲಿ, ನಿಮಗೆ ಮಾತನಾಡುವುದಕ್ಕೆ ಸುಲಭ. ಇಲ್ಲದಿದ್ದರೆ, ನೀವು ಈ ವಿಚಾರವಾಗಿ ಮುಕ್ತವಾಗಿ ಮಾತನಾಡತೊಡಗಿದರೆ, ಎರಡು ಋಣಾತ್ಮಕ ಪ್ರತಿಫಲಗಳಾಗಬಹುದು. ಒಂದು ವೇಳೆ ಅವರು ಅಂತಹ ಯಾವುದೇ ಕೆಲಸ ಮಾಡದೇ ನೀವು ಸಂಶಯ ಪಟ್ಟದ್ದರಿಂದಾಗಿ ತಮ್ಮ ಆತ್ಮಾಭಿಮಾನಕ್ಕೆ ಧಕ್ಕೆ ಆಯಿತೆಂದು ವಿರಸ ಉಂಟಾಗಬಹುದು. ಅಥವಾ ಒಂದು ವೇಳೆ ಅವರು ತಪ್ಪಿತಸ್ಥರಾದರೆ, ಅದನ್ನು ಅಡಗಿಸುವ, ಅಥವಾ ನಿಮ್ಮ ಮೇಲೆಯೇ ತಪ್ಪಿನ ಗೂಬೆ ಕೂರಿಸುವ ಪ್ರಯತ್ನವನ್ನೂ ಮಾಡಬಹುದು. ಅವರು ಬಹಳ ಉತ್ತಮ ವ್ಯಕ್ತಿಯಾಗಿದ್ದು ನಿಮ್ಮ ತೊಳಲಾಟವನ್ನು ಅರ್ಥಮಾಡಿಕೊಳ್ಳುವವರಾದರೆ, ನಿಮ್ಮ ನಡುವೆ ಇರುವ ಈ ಗುಮಾನಿ ದೂರವಾಗಲೂಬಹುದು. ಹಾಗಾಗಿ ನೀವು ಜಾಗರೂಕರಾಗಿ ಮುಂದಿನ ಹೆಜ್ಜೆಯ ಕುರಿತು ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಒಂದು ವೇಳೆ ನಿಮಗೆ ನೇರವಾಗಿ ಮಾತನಾಡುವುದಕ್ಕೆ ಕಷ್ಟವಾದರೆ ಹಿರಿಯರ ಸಹಾಯ ಪಡೆದುಕೊಳ್ಳಿ. ಇಲ್ಲದಿದ್ದರೆ, ನಿಮ್ಮ ಹತ್ತಿರವಿರುವ ಕೌಟುಂಬಿಕ ಚಿಕಿತ್ಸೆಯನ್ನು ಮಾಡುವ ಸೈಕೊಥೆರಪಿಸ್ಟ್ ಭೇಟಿ ಮಾಡಿ. ಅವರಿಗೆ ಸುಧಾರಣೆಯಾಗುವ ಮನಸ್ಸಿದ್ದರೆ, ಸೈಕೊಥೆರಪಿಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬಹುದು. ಮತ್ತು ಆ ಮೂಲಕ ಸಂಸಾರವನ್ನು ಇನ್ನೂ ಭದ್ರವಾಗಿಸಬಹುದು. ಆನಂದದ ಜೀವನವನ್ನು ನಡೆಸಬಹುದು.

ಬೇಸಿಗೆಗೆ ತಂಬುಳಿ ಸವಿ

ಬೇಸಿಗೆ ಸಮಯದಲ್ಲಿ ಉಣ್ಣುವ ಅಡುಗೆಯೂ ಶರೀರಕ್ಕೆ ತಂಪು ನೀಡುವಂತಿದ್ದರೆ ಒಳ್ಳೆಯದು. ಮಲೆನಾಡಿನ 'ತಂಬುಳಿ' ವೈವಿಧ್ಯದ ರೆಸಿಪಿ ನೀಡಿದ್ದಾರೆ ಅರ್ಚನಾ ಜಿ.ಬೊಮ್ನಳ್ಳಿ

ರಸಾಸ್ವಾದ

ಮಜ್ಜಿಗೆ ಹುಲ್ಲು (ಲೆಮನ್ ಗ್ರಾಸ್)

ಬೇಕಾಗುವ ಸಾಮಗ್ರಿಗಳು: ಚಿಕ್ಕದಾಗಿ ಕಟ್ ಮಾಡಿಕೊಂಡ ಮಜ್ಜಿಗೆಹುಲ್ಲು ಒಂದು ಕಪ್, ತೆಂಗಿನ ಕಾಯಿ ತುರಿ ಮುಕ್ಕಾಲು ಕಪ್,ರುಚಿಗೆ ಉಪ್ಪು,ಒಗ್ಗರಣೆಗೆ ಎಣ್ಣೆ ಒಂದು ಚಮಚ, ಸಾಸಿವೆ ಕಾಳು ಅರ್ಧ ಚಮಚ, ಖಾರ ಬೇಕೆನಿಸಿದರೆ ಒಂದು ಸಣ್ಣ ಮೆಣಸು, ಲಿಂಬೆ ಹುಳಿ ಒಂದು ಚಮಚ.

ಮಾಡುವ ವಿಧಾನ: ಮೊದಲು ಮಜ್ಜಿಗೆಹುಲ್ಲನ್ನು ಸ್ವಲ್ಪವೆ ನೀರು ಸೇರಿಸಿ ಮಿಕ್ಸಿಗೆ ಹಾಕಿ ರುಬ್ಬಿಕೊಂಡು, ಅದರ ರಸವನ್ನು ಸೋಯಿಸಿ ಇಟ್ಟುಕೊಳ್ಳಿ. ನಂತರ ಸೋಸಿಕೊಂಡ ನೀರಿನಲ್ಲಿ ತೆಂಗಿನ ಕಾಯಿ(ಬೇಕಿದ್ದರೆ ಸಣ್ಣ ಮೆಣಸು) ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ನಂತರ ಇದಕ್ಕೆ ಎರಡು ಕಪ್ ಆಗುವಷ್ಟು ನೀರು ಹಾಕಿ, ಉಪ್ಪು,ಲಿಂಬೆ ಹುಳಿ ಬೆರೆಸಿ, ಸಾಸಿವೆಕಾಳಿನ ಒಗ್ಗರಣೆ ಕೊಡಿ. ಕಡಿಮೆ ಸಾಮಗ್ರಿಯಲ್ಲಿ ಸುಲಭವಾಗಿ ಲೆಮನ್ ಗ್ರಾಸ್ ನ ತಂಬುಳಿ ರೆಡಿ.





ಬಿಲ್ವಪತ್ರೆ

ಬೇಕಾಗುವ ಸಾಮಗ್ರಿಗಳು; ಎಳೆಯದಾಗಿರುವ ಬಿಲ್ವ ಪತ್ರೆ ಆರು ಎಸಳು, ಬೋಳ್ಕಾಳು ಎಂಟು, ಜೀರಿಗೆ ಅರ್ಧ ಚಮಚ, ತೆಂಗಿನಕಾಯಿ ತುರಿ ಅರ್ಧ ಕಪ್, ರುಚಿಗೆ ಉಪ್ಪು, ಕಡೆದ ಮಜ್ಜಿಗೆ ಕಾಲು ಕಪ್. ಒಗ್ಗರಣೆಗೆ ಎಣ್ಣೆ ಒಂದು ಚಮಚ, ಜೀರಿಗೆ ಅರ್ಧ ಚಮಚ.

ಮಾಡುವ ವಿಧಾನ; ಜೀರಿಗೆ ಮತ್ತು ಬೋಳ್ಕಾಳು ಎರಡನ್ನು ಸ್ವಲ್ಪ ಎಣ್ಣೆ ಹಾಕಿ ಕಮ್ಮಗೆ ಹುರಿದುಕೊಳ್ಳಿ. ಪತ್ರೆ ತುಂಬ ಎಳೆಯತಾಗಿದ್ದರೆ ಹುರಿಯುವುದು ಬೇಡ, ಸ್ವಲ್ಪ ಬೆಳೆದ ಎಲೆಗಳಾದರೆ ಒಮ್ಮೆ ಹುರಿದುಕೊಂಡು, ತೆಂಗಿನ ಕಾಯಿತುರಿ ಜೊತೆ ಉಳಿದ ಸಾಮಗ್ರಿಗಳನ್ನು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ನಂತರ ಇದಕ್ಕೆ ಎರಡು ಕಪ್ ಆಗುವಷ್ಟು ನೀರು ಬೆರೆಸಿ, ಕಡೆದ ಮಜ್ಜಿಗೆ, ಉಪ್ಪು ಹಾಕಿರಿ. ನಂತರ ಜೀರಿಗೆಯ ಒಗ್ಗರಣೆ ಹಾಕಿದರೆ ಬಿಲ್ವ ಪತ್ರೆ ತಂಬುಳಿ ರೆಡಿ.

ಚಕ್ರಮನಿ



ಬೇಕಾಗುವ ಸಾಮಗ್ರಿಗಳು: ಚಕ್ರಮನಿ ಸೊಪ್ಪು ಐದರಿಂದ ಆರು ಎಸಳು(ಇದಕ್ಕೆ ಬೀಪಿ ಸೊಪ್ಪು ಎಂತಲೂ ಹೇಳುತ್ತಾರೆ) ಅರ್ಧ ಚಮಚ ಜೀರಿಗೆ, ಎಂಟು ಬೋಳ್ಕಾಳು, ಕಾಲು ಚಮಚ ಬಿಳಿ ಎಳ್ಳು, ತೆಂಗಿನಕಾಯಿ ತುರಿ ಅರ್ಧ ಕಪ್, ರುಚಿಗೆ ಉಪ್ಪು, ಕಡೆದ ಮಜ್ಜಿಗೆ ಕಾಲು ಕಪ್, ಒಗ್ಗರಣೆಗೆ ಎಣ್ಣೆ ಒಂದು ಚಮಚ, ಜೀರಿಗೆ, ಸಾಸಿವೆ ಕಾಳು ತಲಾ ಕಾಲು ಚಮಚ.

ಮಾಡುವ ವಿಧಾನ: ಸೊಪ್ಪನ್ನು ಸ್ವಚ್ಛಗೊಳಿಸಿ ಎಸಳಿನಿಂದ ಎಲೆಗಳನ್ನು ಮಾತ್ರ ತೆಗೆದು,ಜೀರಿಗೆ, ಬೋಳ್ಕಾಳು, ಎಳ್ಳು, ಸೇರಿಸಿ ಸ್ವಲ್ಪ ಎಣ್ಣೆ ಹಾಕಿ ಸೊಪ್ಪು ಬಾಡುವವರೆಗೆ ಹುರಿದುಕೊಳ್ಳಿ. ನಂತರ ಕಾಯಿ ಹಾಕಿ ನುಣ್ಣಗೆ ರುಬ್ಬಿಕೊಂಡು ಬೇಕಷ್ಟೆ ನೀರು ಹಾಕಿ, ಉಪ್ಪು,ಕಡೆದ ಮಜ್ಜಿಗೆ ಬೆರೆಸಿಕೊಂಡು ಹದ ಮಾಡಿಕೊಳ್ಳಿ. ಆಮೇಲೆ ಜೀರಿಗೆ, ಸಾಸಿವೆಕಾಳಿನ ಒಗ್ಗರಣೆ ಕೊಡಿರಿ.

ಕರಿಬೇವು



ಬೇಕಾಗುವ ಸಾಮಗ್ರಿಗಳು: ಎಳೆಯದಾಗಿರುವ ಕರಿಬೇವಿನ ಸೊಪ್ಪು ನಾಲ್ಕು ಎಸಳು, ಉದ್ದಿನ ಬೇಳೆ ಅರ್ಧ ಚಮಚ, ಸಣ್ಣ ಮೆಣಸು ಎರಡು, ಬಿಳಿ ಎಳ್ಳು ಕಾಲು ಚಮಚ, ತೆಂಗಿನ ಕಾಯಿ ತುರಿ ಅರ್ಧ ಕಪ್, ಲಿಂಬೆ ಹುಳಿ ಒಂದು ಚಮಚ, ರುಚಿಗೆ ಉಪ್ಪು, ಒಗ್ಗರಣೆಗೆ ಎಣ್ಣೆ ಒಂದು ಚಮಚ, ಸಾಸಿವೆ ಕಾಳು ಅರ್ಧ ಚಮಚ.

ಮಾಡುವ ವಿಧಾನ: ಮೊದಲು ಉದ್ದಿನಬೇಳೆಯನ್ನು ಸ್ವಲ್ಪ ಎಣ್ಣೆ ಹಾಕಿ ಹೊಂಬಣ್ಣ ಬರುವವರೆಗೆ ಹುರಿದು, ಇದಕ್ಕೆ ಮೆಣಸು,ಎಳ್ಳು, ಕರಿಬೇವಿನ ಸೊಪ್ಪು ಸೇರಿಸಿ ಮತ್ತೊಮ್ಮೆ ಸಣ್ಣ ಉರಿಯಲ್ಲಿ ಹುರಿದುಕೊಳ್ಳಿ. ನಂತರ ತೆಂಗಿನಕಾಯಿ ತುರಿ ಸೇರಿಸಿ ನುಣ್ಣಗೆ ರುಬ್ಬಿಕೊಂಡು, ಬೇಕಷ್ಟೆ ನೀರು ಹಾಕಿ, ಲಿಂಬೆ ಹುಳಿ, ಉಪ್ಪು ಬೆರೆಸಿ ಹದ ಮಾಡಿಕೊಳ್ಳಿ. ಆಮೇಲೆ ಸಾಸಿವೆ ಕಾಳಿನ ಒಗ್ಗರಣೆ ಕೊಟ್ಟರೆ ರುಚಿಯಾದ ಕರಿಬೇವಿನ ಸೊಪ್ಪಿನ ತಂಬುಳಿ ಸಿದ್ಧ.



ಒಂದೆಲಗ

ಬೇಕಾಗುವ ಸಾಮಗ್ರಿಗಳು; ಬೇರು ಸಹಿತ ಇರುವ ಒಂದೆಲಗ ಒಂದು ಮುಷ್ಟಿ, ಜೀರಿಗೆ ಅರ್ಧ ಚಮಚ, ಬೋಳ್ಕಾಳು ಎಂಟು, ತೆಂಗಿನಕಾಯಿ ತುರಿ ಅರ್ಧ ಕಪ್, ಬೆಲ್ಲ ಎರಡು ದೊಡ್ಡ ಚಮಚ, ರುಚಿಗೆ ಉಪ್ಪು, ಕಡೆದ ಮಜ್ಜಿಗೆ ಕಾಲು ಕಪ್, ಒಗ್ಗರಣೆಗೆ ಎಣ್ಣೆ ಒಂದು ಚಮಚ, ಜೀರಿಗೆ ಅರ್ಧ ಚಮಚ.

ಮಾಡುವ ವಿಧಾನ; ಮೊದಲು ಒಂದೆಲಗವನ್ನು ಸ್ವಚ್ಛಗೊಳಿಸಿ ಚಿಕ್ಕದಾಗಿ ಕೊಚ್ಚಿಕೊಂಡು ಸ್ವಲ್ಪವೆ ನೀರು ಸೇರಿಸಿ ಮಿಕ್ಸಿಗೆ ಹಾಕಿ ರುಬ್ಬಿಕೊಂಡು ಇದರ ರಸವನ್ನು ಸೋಯಿಸಿ ತೆಗೆದಿಟ್ಟುಕೊಳ್ಳಿ. ನಂತರ ಜೀರಿಗೆ, ಬೋಳ್ಕಾಳನ್ನು ಎಣ್ಣೆ ಹಾಕಿ ಕಮ್ಮಗೆ ಹುರಿದು, ತೆಂಗಿನಕಾಯಿ ತುರಿ ಸೇರಿಸಿ, ಸೋಸಿಕೊಂಡ ಒಂದೆಲಗದ ನೀರಿನಲ್ಲಿ ನುಣ್ಣಗೆ ರುಬ್ಬಿರಿ. ಇದಕ್ಕೆ ಬೇಕಷ್ಟೆ ನೀರು ಹಾಕಿ ಉಪ್ಪು, ಬೆಲ್ಲ ಬೆರೆಸಿಕೊಳ್ಳಿ. (ಬೆಲ್ಲ ಬೇಡವೆಂದರೆ ಹಾಕದೆ ಇದ್ದರೂ ನಡೆಯುತ್ತದೆ) ಆಮೇಲೆ ಕಡೆದ ಮಜ್ಜಿಗೆ ಹಾಕಿ ಜೀರಿಗೆಯ ಒಗ್ಗರಣೆ ಕೊಟ್ಟರೆ ತಂಪಾದ ತಂಬುಳಿ ಸಿದ್ಧ.

ಬೇಡಿಕೆ ಹೆಚ್ಚಿದ್ದರೂ ಲೋಡ್ ಶೆಡ್ಡಿಂಗ್ ಇಲ್ಲ

ಕಳೆದ ವರ್ಷಕ್ಕಿಂತ 2000 ಮೆಗಾವಾಟ್ ಅಧಿಕ ಬೇಡಿಕೆ • ಪಂಜಾಬ್, ಉತ್ತರಪ್ರದೇಶದಿಂದ ವಿದ್ಯುತ್ ಪಡೆಯಲು ಕ್ರಮ—ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಬೇಡಿಕೆಯು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ 2,000 ಮೆಗಾ ವಾಟ್ ಅಧಿಕ ಇದೆ. ವಿದ್ಯುತ್ ಕೊರತೆ ಆಗದಂತೆ ಉತ್ತರ ಪ್ರದೇಶ, ಪಂಜಾಬ್‌ನಿಂದ ವಿನಿಮಯ ಆಧಾರದಲ್ಲಿ ವಿದ್ಯುತ್ ಪಡೆಯಲು ಒಪ್ಪಂದ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ ವಿದ್ಯುತ್ ಕಡಿತ(ಲೋಡ್ ಶೆಡ್ಡಿಂಗ್) ಇರುವುದಿಲ್ಲ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟಪಡಿಸಿದರು.

ಬೇಸಿಗೆಯಲ್ಲಿ ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಇಂಧನ ಇಲಾಖೆಯ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಪಂಜಾಬ್‌ನಿಂದ 300 ಮೆ.ವಾ. ಹಾಗೂ ಉತ್ತರ ಪ್ರದೇಶದಿಂದ 100 ಮೆ.ವಾ.ದಿಂದ 1,200ವರೆಗೆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪಡೆಯಲಾಗುವುದು. ಇದು ಬೇಸಿಗೆಯ ಮೂರು ತಿಂಗಳಿಗೆ ಅಷ್ಟೇ ಇರಲಿದ್ದು, ಒಪ್ಪಂದದಂತೆ ಬೇಸಿಗೆ ಮುಗಿದ ಬಳಿಕ ನಾವು ಆ ರಾಜ್ಯಗಳಿಗೆ ವಿದ್ಯುತ್ ಪೂರೈಕೆ ಮಾಡಬೇಕಾಗುತ್ತದೆ. ಇದಲ್ಲದೇ ಜೂನ್ ಮೊದಲ ವಾರದವರೆಗೆ ನಿತ್ಯ 1,000 ಮೆ.ವಾ. ವಿದ್ಯುತ್ ಖರೀದಿಸಲಾಗುವುದು’ ಎಂದು ಹೇಳಿದರು.

> **ಕಳೆದ ವರ್ಷ ಫೆ. 27ರಂದು 16,214 ಮೆ.ವಾ. ಬೇಡಿಕೆ ಇತ್ತು ಈ ವರ್ಷ ಅದೇ ದಿನ 17,874 ಮೆ.ವಾ. ಬೇಡಿಕೆ ಬಂದಿತ್ತು. ಜೂನ್‌ವರೆಗೆ ಸಮಸ್ಯೆ ಇರುವುದಿಲ್ಲ**
> **ಗೌರವ್ ಗುಪ್ತ,** ಹೆಚ್ಚುವರಿ ಮುಖ್ಯಕಾರ್ಯದರ್ಶಿ , ಇಂಧನ ಇಲಾಖೆ

ಬೇಸಿಗೆಯಲ್ಲಿ ರೈತರ ಕೃಷಿ ನೀರಾವರಿ ಪಂಪ್ ಸೆಟ್‌ಗಳಿಗೆ ದಿನಕ್ಕೆ 7 ಗಂಟೆ ಮತ್ತು ಇತರ ಉದ್ದೇಶಗಳಿಗೆ ದಿನದ 24 ಗಂಟೆ ವಿದ್ಯುತ್ ಪೂರೈಕೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಬೇಡಿಕೆ ಇರುವಷ್ಟು ವಿದ್ಯುತ್ ಇದೆ ಎಂದು ವಿವರ ನೀಡಿದರು.

ಸಂಗ್ರಹ: ರಾಜ್ಯದಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಆದರೂ ಸಂಗ್ರಹ ಮಾಡಿ ಇಟ್ಟುಕೊಳ್ಳುವ ಅವಕಾಶ ಇಲ್ಲ. ಹೀಗಾಗಿ, ಶರಾವತಿ ಪಂಪ್ಡ್ ಸ್ಟೋರೇಜ್ ಮೂಲಕ 2,000 ಮೆಗಾ ವಾಟ್, ವಾರಾಹಿ ಪಂಪ್ಡ್ ಸ್ಟೋರೇಜ್ ಮೂಲಕ 1,600 ಮೆಗಾ ವಾಟ್, ಪಾವಗಡದಲ್ಲಿ 1,000 ಮೆಗಾ ವಾಟ್ ಸಾಮರ್ಥ್ಯ ಹಾಗೂ ರ‍್ಯಾಪ್ಟೆಯಲ್ಲಿ 2,000 ಮೆ.ವ್ಯಾ. ಸಾಮರ್ಥ್ಯದ ಬ್ಯಾಟರಿ ಸ್ಟೋರೇಜ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ ಎಂದರು.

ರಾಜ್ಯದ ಕೆಲವು ಸಬ್ ಸ್ಟೇಷನ್‌ಗಳ ವ್ಯಾಪ್ತಿಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿ ಅತಿ ಹೊರೆ (ಓವರ್ ಲೋಡ್) ಆಗುತ್ತಿದೆ. ಕೆಲವು ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ ಬೇಡಿಕೆಗಿಂತ ಹೆಚ್ಚು ವಿದ್ಯುತ್ ಲಭ್ಯವಿದೆ. ಕಡಿಮೆ ಹೊರೆ ಇರುವ ಉಪ ಕೇಂದ್ರಗಳಿಂದ ಅತಿ ಹೊರೆ ಇರುವ ಉಪ ಕೇಂದ್ರಗಳಿಗೆ ವಿದ್ಯುತ್ ಒದಗಿಸಲು ಜಾಲ ವ್ಯವಸ್ಥೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ವಿದ್ಯುತ್ ಲಭ್ಯವಿದ್ದರೂ ವಿತರಣೆಯೇ ಸಮಸ್ಯೆಯಾಗಿದೆ. ಇದನ್ನು ತಪ್ಪಿಸಲು ಉಪ ಕೇಂದ್ರಗಳ ಸಂಖ್ಯೆ ಹೆಚ್ಚಿಸಲಾಗುತ್ತಿದೆ. ಈ ವರ್ಷ 100 ಹೊಸ ಉಪ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದರು.

‘ದುರುಪಯೋಗ ಬೇಡ’


ಕೆ.ಜೆ.ಜಾರ್ಜ್

ಗೃಹ ಬಳಕೆಗೆ ದಿನದ 24 ಗಂಟೆಯೂ ವಿದ್ಯುತ್ ಪೂರೈಸಬೇಕು ಎಂಬ ಉದ್ದೇಶದಿಂದ ಸಿಂಗಲ್ ಫೇಸ್ ವಿದ್ಯುತ್ ಒದಗಿಸಲು ರಾಜ್ಯ ಸರ್ಕಾರ ನಿರಂತರ ಜ್ಯೋತಿ ಯೋಜನೆ ಜಾರಿಗೆ ತಂದಿದೆ. ರೈತರು ಕನ್ವರ್ಟರ್‌ಗಳನ್ನು ಅಳವಡಿಸಿ ಕೃಷಿ ಪಂಪ್‌ಸೆಟ್ ಬಳಸಿದರೆ, ‘ಟ್ರಿಪ್’ ಆಗಿ ಇಡೀ ಪ್ರದೇಶದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತವಾಗಲಿದೆ. ಈ ರೀತಿ ದುರ್ಬಳಕೆ ಮಾಡಬಾರದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಮನವಿ ಮಾಡಿದರು.

ಫೆ.27ರ ವಿದ್ಯುತ್ ಉತ್ಪಾದನೆ: ಎಲ್ಲಿ, ಎಷ್ಟು?

- **3,300** ಮೆ.ವಾ — ಕೆಪಿಸಿಎಲ್‌ನ ಉಷ್ಣ ವಿದ್ಯುತ್ ಸ್ಥಾವರ
- **2,000** ಮೆ.ವಾ — ಜಲವಿದ್ಯುತ್ ಘಟಕಗಳಲ್ಲಿ ಉತ್ಪಾದನೆ
- **1,126** ಮೆ.ವಾ — ಯುಪಿಸಿಎಲ್
- **6,655** ಮೆ.ವಾ — ಸೌರವಿದ್ಯುತ್
- **1,940** ಮೆ.ವಾ — ಪವನ ಯಂತ್ರಗಳಿಂದ

ವಿವಿಧೆಡೆಯಿಂದ ವಿದ್ಯುತ್ ಪೂರೈಕೆ/ಖರೀದಿ

- **6,183** ಮೆ.ವಾ — ಸೆಂಟ್ರಲ್ ಜನರೇಟಿಂಗ್ ಸ್ಟೇಷನ್ಸ್ (ಸಿಜಿಎಸ್) ನಿಂದ ಪೂರೈಕೆ
- **700** ಮೆ.ವಾ — ಪಂಜಾಬ್– ಉತ್ತರ ಪ್ರದೇಶದಿಂದ ವಿನಿಮಯ ಆಧಾರದಲ್ಲಿ ಪೂರೈಕೆ
- **600** ಮೆ.ವಾ — ಕೇಂದ್ರ ಗ್ರಿಡ್‌ನಿಂದ ಖರೀದಿ
- **310** ಮೆ.ವಾ — ಮಾ.1ರಿಂದ ಕೂಡಗಿಯಿಂದ ಪೂರೈಕೆ

ಸುದ್ದಿ 2 ನಿಮಿಷ

‘ಮಾನವ ಹಕ್ಕು’ ಹೆಸರು ದುರ್ಬಳಕೆ ನೋಂದಣಿ ತಡೆಗೆ ಚಿಂತನೆ’

ಮಂಡ್ಯ: ‘ಮಾನವ ಹಕ್ಕು’ ಹೆಸರಿನಲ್ಲಿ ಸಂಘ, ಜಾಗೃತಿ ಸಮಿತಿ, ಹೋರಾಟ ಸಮಿತಿ ಮಾಡಿಕೊಂಡು, ‘ಮಾನವ ಹಕ್ಕುಗಳ ಆಯೋಗ’ದವರ ಸೋಗಿನಲ್ಲಿ ಸರ್ಕಾರಿ ಕಚೇರಿಗಳಲ್ಲಿ ಹಣಕ್ಕೆ ಬೇಡಿಕೆ ಇಡುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿಬಂದಿವೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟನಲ್ಲಿ ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಜೊತೆ ಚರ್ಚಿಸಲಾಗಿದೆ’ ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಹಂಗಾಮಿ ಅಧ್ಯಕ್ಷ ಟಿ.ಶ್ಯಾಂಭಟ್ ತಿಳಿಸಿದರು.

ಇಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಮಾನವ ಹಕ್ಕು’ ಹೆಸರು ದುರ್ಬಳಕೆ ಮಾಡಿಕೊಂಡು, ಕಾರುಗಳಿಗೆ ನಾಮಫಲಕ ಹಾಕಿಕೊಳ್ಳುವುದು, ವಿಸಿಟಿಂಗ್ ಕಾರ್ಡ್ ಮಾಡಿಸಿಕೊಳ್ಳುವುದು, ಸರ್ಕಾರಿ ಅಧಿಕಾರಿಗಳನ್ನು ಬೆದರಿಸುತ್ತಿರುವುದು ಆಯೋಗದ ಗಮನಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ‘ಮಾನವ ಹಕ್ಕುಗಳು’ ಹೆಸರು ಬಳಸಿ ನೋಂದಣಿ ಮಾಡಿಸದಂತೆ ಕ್ರಮ ಕೈಗೊಳ್ಳಲು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಕೂಡ ಪ್ರಯತ್ನಿಸುತ್ತಿದೆ’ ಎಂದರು.



‘ಕೆಲವು ಸಂಸ್ಥೆಗಳು ಮಾನವ ಹಕ್ಕುಗಳ ಹೆಸರಿನಲ್ಲಿ ನೋಂದಣಿ ಮಾಡಿಕೊಂಡಿದ್ದು, ಆ ಸಂಸ್ಥೆಗಳು ಪ್ರತಿವರ್ಷ ‘ಆಡಿಟಿಂಗ್’ ಸಲ್ಲಿಸದಿದ್ದರೆ ಮತ್ತು ನಿಯಮಗಳನ್ನು ಪಾಲಿಸದಿದ್ದರೆ ನೋಂದಣಿ ರದ್ದು ಮಾಡಲು ಅವಕಾಶವಿದೆ’ ಎಂದು ತಿಳಿಸಿದರು.

‘ಅನ್ಯ ಉದ್ದೇಶಕ್ಕೆ ಪರಿಶಿಷ್ಟರ ಹಣ ಬಳಸದಿರಿ’

ಬೆಂಗಳೂರು: ‘ಪರಿಶಿಷ್ಟ ಜಾತಿಗಳ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳಿಗೆ (ಟಿಎಸ್‌ಪಿ) ಮೀಸಲಿರಿಸಿದ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಸುವುದನ್ನು ಸರ್ಕಾರ ನಿಲ್ಲಿಸಬೇಕು’ ಎಂದು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟವು ಆಗ್ರಹಿಸಿದೆ.

ಈ ಸಂಬಂಧ ಒಕ್ಕೂಟ ನೀಡಿರುವ ಹೇಳಿಕೆಗೆ ದಲಿತ ಸಂಘರ್ಷ ಸಮಿತಿಗಳ ಎನ್.ವೆಂಕಟೇಶ್, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರೆಗೋಡು, ಇಂದೂಧರ ಹೊನ್ನಾಪುರ ಸಹಿ ಮಾಡಿದ್ದಾರೆ.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಯಲ್ಲಿನ ಅಂತರವನ್ನು ತುಂಬಲು ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆಯನ್ನು ಸಿದ್ದರಾಮಯ್ಯ ಅವರ ನೇತೃತ್ವದ ಹಿಂದಿನ ಸರ್ಕಾರ ಜಾರಿಗೆ ತಂದಿತ್ತು. ಈ ಹಿಂದಿನ ಬಿಜೆಪಿ ಸರ್ಕಾರ ಈ ಉಪ ಯೋಜನೆಗಳ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಿತ್ತು. ಈಗ ಕಾಂಗ್ರೆಸ್ ಸರ್ಕಾರ ಸಹ ಪರಿಶಿಷ್ಟರ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದೆ. ಇದು ನಿಲ್ಲಬೇಕು’ ಎಂದು ಒಕ್ಕೂಟ ಒತ್ತಾಯಿಸಿದೆ.

‘2014ರಿಂದ ಈವರೆಗೆ ಪರಿಶಿಷ್ಟರಿಗೆಂದು ಮೀಸಲಿರಿಸಿದ ಅನುದಾನವನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ಎಂಬುದರ ವರದಿಯನ್ನು ಸರ್ಕಾರ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 5 ಲಕ್ಷಕ್ಕೂ ಹೆಚ್ಚು ಅರ್ಜಿಗಳು ವಿಲೇವಾರಿ ಆಗದೆ ಉಳಿದಿವೆ. ಅಗತ್ಯವಿರುವ ಅನುದಾನವನ್ನು ಒದಗಿಸುವ ಮೂಲಕ ಅರ್ಹರಿಗೆ ಅಗತ್ಯ ನೆರವು ಒದಗಿಸಬೇಕು ಎಂದು ಕೋರಿದೆ.



ಬಸವೇಶ್ವರ ರಥೋತ್ಸವ

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿ ಸುಕ್ಷೇತ್ರದಲ್ಲಿ ಬಸವೇಶ್ವರ ಹಾಗೂ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ ಶುಕ್ರವಾರ ಸಂಭ್ರಮದಿಂದ ಜರುಗಿತು –ಪ್ರಜಾವಾಣಿ ಚಿತ್ರ

ಸರ್ಕಾರಿ ಶಾಲಾ ಮಕ್ಕಳಿಗೂ ಎ.ಐ ಕಲಿಕೆ

ವಿಜ್ಞಾನ ದಿನಾಚರಣೆ: ವಿಜ್ಞಾನ–ತಂತ್ರಜ್ಞಾನ ಸಚಿವ ಬೋಸರಾಜು ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಶಾಲೆಗಳಲ್ಲಿ ಪ್ರಯೋಗಶೀಲತೆಗೆ ಅವಕಾಶ ಮಾಡಿಕೊಡುವಂತಹ ನೂತನ ಕಲಿಕಾ ವ್ಯವಸ್ಥೆಯನ್ನು ರೂಪಿಸಲು ಚಿಂತನೆ ನಡೆದಿದೆ. ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್ ಸವಲತ್ತು ಒದಗಿಸುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಹೇಳಿದರು.

ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ‘ರಾಷ್ಟ್ರೀಯ ವಿಜ್ಞಾನ ದಿನ’ ಮತ್ತು ‘ಯು.ಆರ್.ರಾವ್ ಭವನ’ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿಜ್ಞಾನ, ತಂತ್ರಜ್ಞಾನ, ರೊಬೊಟಿಕ್ಸ್, ಪರಿಸರ ಮತ್ತು ಪರಿಸರ ವಿಜ್ಞಾನ, ಖಗೋಳ ವಿಜ್ಞಾನ ಮತ್ತು ಗಣಿತದ ಪರಿಕಲ್ಪನೆಯನ್ನು ಪರಿಣಾಮಕಾರಿಯಾಗಿ ಅರ್ಥಮಾಡಿಕೊಳ್ಳಲು ಉಪಕರಣಗಳು ಮತ್ತು ಸಲಕರಣೆಗಳೊಂದಿಗೆ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು ನಮ್ಮ ಉದ್ದೇಶ’ ಎಂದರು.


ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಇರಿಸಲಾಗಿದ್ದ ವಿಜ್ಞಾನ ಮಾದರಿಯನ್ನು ವಿದ್ಯಾರ್ಥಿನಿಯರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

‘ವಿದ್ಯಾರ್ಥಿಗಳಲ್ಲಿ ಖಗೋಳವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಶಾಲೆಗಳಿಗೆ ದೂರದರ್ಶಕ ವಿತರಿಸುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದರು. ಅದರಂತೆ ವಸತಿ ಶಾಲೆಗಳಿಗೆ ಈಗ ದೂರದರ್ಶಕ ವಿತರಿಸಲಾಗುತ್ತಿದೆ. ಪಠ್ಯೇತರ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳನ್ನು ತೊಡಗಿಸುವುದು ಅಗತ್ಯವಾಗಿದೆ’ ಎಂದರು.

ವಿಜ್ಞಾನ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಪ್ರಬಂಧ ರಚನೆ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ವಸತಿ ಶಾಲೆಗಳಿಗೆ ದೂರದರ್ಶಕ ವಿತರಿಸಿದ ಈ ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿದ್ದರು.

‘ಶಿಕ್ಷಣದ ಮಹತ್ವ ತಿಳಿದದ್ದು ಸಚಿವನಾದಾಗ’

‘ಉನ್ನತ ಶಿಕ್ಷಣ ಎಷ್ಟು ಮುಖ್ಯ ಎಂಬುದು ನನಗೆ ಗೊತ್ತಾಗಿದ್ದೇ ಸಚಿವನಾದ ಮೇಲೆ. ಸದನದಲ್ಲಿ ಹಿರಿಯರು ಸುಲಲಿತವಾಗಿ ಮಾತನಾಡುತ್ತಿದ್ದರೆ, ನಾನು ಚಕಿತನಾಗಿ ನೋಡುತ್ತಿದ್ದೆ. ಆ ನಂತರವೇ ಉನ್ನತ ಶಿಕ್ಷಣ ಪಡೆಯಬೇಕು ಎನಿಸಿತ್ತು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಉನ್ನತ ಶಿಕ್ಷಣದ ಮಹತ್ವ ಅರಿವಾದ ನಂತರ ಕಲಿಯಲು ಹಿಂದೇಟು ಹಾಕಲಿಲ್ಲ. 47ನೇ ವಯಸ್ಸಿಗೆ ಪದವಿ ಪಡೆದೆ. ಉನ್ನತ ಶಿಕ್ಷಣ ಪಡೆದದ್ದರಿಂದ ನನಗೆ ಇನ್ನಷ್ಟು ಅವಕಾಶ ತೆರೆದುಕೊಂಡವು. ಹೀಗಾಗಿ ಶಿಕ್ಷಣ ಕಡೆಗಣಿಸಬೇಡಿ’ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮಾಂಡಲೀಕರಂತೆ ರಾಜ್ಯಗಳ ಪರಿಗಣನೆ: ಸಿ.ಎಂ

ನ್ಯಾಯಬದ್ಧವಾಗಿ ನೀಡಬೇಕಾಗಿರುವ ತೆರಿಗೆ ಪಾಲು ಮತ್ತಿತರ ಅನುದಾನ ನೀಡದೆ ರಾಜ್ಯದ ಖಜಾನೆಯನ್ನು ಬರಿದು ಮಾಡಲು ಹೊರಟಿದೆ. ಇಂತಹ ದಮನಕಾರಿ ನೀತಿಗಳನ್ನು ಎದುರಿಸುವ ಶಕ್ತಿ ಮತ್ತು ಧೈರ್ಯ ರಾಜ್ಯ ಸರ್ಕಾರಕ್ಕಿದೆ

‘ಗ್ಯಾರಂಟಿ’ ತಡೆಗೆ ತೆರಿಗೆ ಪಾಲಿನ ಅಸ್ತ್ರ

ಬೆಂಗಳೂರು: ‘ಗ್ಯಾರಂಟಿ’ ಯೋಜನೆಗಳ ಮೂಲಕ ಕನ್ನಡಿಗರ ಮನಗೆದ್ದಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಹೆಸರು ಕೆಡಿಸಲು ಕೇಂದ್ರ ಸರ್ಕಾರ ಹೊರಟಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ರಾಜ್ಯಗಳ ತೆರಿಗೆ ಪಾಲನ್ನು ಶೇ 41ರಿಂದ 40ಕ್ಕೆ ಇಳಿಸಲು ಶಿಫಾರಸು ಮಾಡುವಂತೆ ಹಣಕಾಸು ಆಯೋಗಕ್ಕೆ ಕೇಂದ್ರದ ಸರ್ಕಾರ ನೀಡಿರುವ ಸೂಚನೆ ಒಕ್ಕೂಟ ವಿರೋಧಿ ನಡೆ. ರಾಜ್ಯದ ನ್ಯಾಯಬದ್ಧ ತೆರಿಗೆ ಪಾಲನ್ನು ಇನ್ನಷ್ಟು ಕಡಿತಗೊಳಿಸಲು ಮಾಡುತ್ತಿರುವ ಪ್ರಯತ್ನ ಕರ್ನಾಟಕ ವಿರೋಧಿಯಷ್ಟೆ ಅಲ್ಲ, ಒಕ್ಕೂಟ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಾರುವ ಸಂವಿಧಾನಕ್ಕೂ ವಿರುದ್ಧ ಎಂದು ಅವರು ಪ್ರತಿಪಾದಿಸಿದ್ದಾರೆ.



ತೆರಿಗೆಯಲ್ಲಿ ನ್ಯಾಯಬದ್ಧ ಪಾಲು ರಾಜ್ಯಗಳಿಗೆ ಹಂಚಿಕೆಯಾಗುವಂತೆ ಕೇಂದ್ರ ಹಣಕಾಸು ಆಯೋಗ ನೋಡಿಕೊಳ್ಳುತ್ತದೆ ಎಂದು ಅವರು ಆರೋಪಿಸಿದ್ದಾರೆ.

ಆ ಆಯೋಗವನ್ನೇ ರಾಜ್ಯಗಳ ಹಕ್ಕು ದಮನಿಸುವ ಆಯುಧವಾಗಿಸಿಕೊಳ್ಳುತ್ತಿದೆ. ಅನ್ಯಾಯ ಪರಿಹರಿಸಲು ಯತ್ನಿಸದಿದ್ದರೆ ಜನರ ಜತೆಗೂಡಿ ಬೀದಿಗಿಳಿದು ಹೋರಾಟ ನಡೆಸುವುದು ಎಂದು ಎಚ್ಚರಿಸಿದ್ದಾರೆ.

ಪ್ರತಿ ವರ್ಷ ರಾಜ್ಯದಿಂದ ಸುಮಾರು ₹4 ಲಕ್ಷ ಕೋಟಿ ಕೇಂದ್ರಕ್ಕೆ ಸಲ್ಲಿಕೆಯಾಗುತ್ತದೆ. ಅದರಲ್ಲಿ ರಾಜ್ಯಕ್ಕೆ ವಾಪಸ್ ಬರುವುದು ಶೇ 15ರಷ್ಟು ಮಾತ್ರ. 15ನೇ ಹಣಕಾಸು ಆಯೋಗ ತೆರಿಗೆ ಹಂಚಿಕೆಯ ಪ್ರಮಾಣವನ್ನು ಶೇ 4.71ರಿಂದ ಶೇ 3.64ಕ್ಕೆ ಇಳಿಸಿದ್ದರಿಂದ ರಾಜ್ಯಕ್ಕೆ ಐದು ವರ್ಷಗಳಲ್ಲಿ ₹68,775 ಕೋಟಿ ಕೈತಪ್ಪಿದೆ. ಆಯೋಗವೇ ಶಿಫಾರಸು ಮಾಡಿರುವ ವಿಶೇಷ ಅನುದಾನ ₹5,495 ಕೋಟಿ ಮತ್ತು ರಾಜ್ಯ ಕೇಂದ್ರಿತ ₹6,000 ಕೋಟಿ ವಿಶೇಷ ಅನುದಾನವನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ ಎಂದು ದೂರಿದ್ದಾರೆ.

ಎಸ್‌ಜಿಎಸ್‌ಟಿ ಸಂಗ್ರಹಕ್ಕೆ ಅವಕಾಶ–ಒತ್ತಾಯ: ಜಿಎಸ್‌ಟಿ ಅನುಷ್ಠಾನದಿಂದಾಗಿ ರಾಜ್ಯ ಸರ್ಕಾರಗಳಿಗೆ ಆಗುವ ನಷ್ಟಕ್ಕೆ ನೀಡುತ್ತಿದ್ದ ಪರಿಹಾರ ಸ್ಥಗಿತಗೊಳಿಸಲಾಗಿದೆ. ಆದರೂ, ಸೆಸ್ ಸಂಗ್ರಹ ಮುಂದುವರಿಸಲಾಗಿದೆ. ಈ ಸೆಸ್ ಬದಲಿಗೆ ಹೆಚ್ಚುವರಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಸಂಗ್ರಹಕ್ಕೆ ಅವಕಾಶ ನೀಡಬೇಕು ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಸೇವಾ ತೆರಿಗೆಯ ಗರಿಷ್ಠ ಮಿತಿ ಹೆಚ್ಚಿಸಲು ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕು. ರಾಜ್ಯದಲ್ಲಿ ಸಂಗ್ರಹವಾಗುವ ತೆರಿಗೆಯಲ್ಲಿ ಕನಿಷ್ಠ ಅರ್ಧದಷ್ಟನ್ನಾದರೂ ಆ ರಾಜ್ಯಕ್ಕೆ ನೀಡಬೇಕು’ ಎಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಆಡಳಿತ ಸುಧಾರಣೆಗಾಗಿ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಧಾರವಾಡ: ಪರಿಸರ, ಕೃಷಿ, ಆರೋಗ್ಯ, ಶಿಕ್ಷಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಆಶಯದೊಂದಿಗೆ ಧಾರವಾಡದಿಂದ ಗರಗ ಗ್ರಾಮದವರೆಗೆ ಸ್ವಾಮೀಜಿಗಳು, ಹಿರಿಯ ನಾಗರಿಕರು, ಮಹಿಳೆಯರು, ಯುವಜನರು, ವಿವಿಧ ಸಂಘಸಂಸ್ಥೆಯವರು ಶುಕ್ರವಾರ 18 ಕಿ.ಮೀ. ಪಾದಯಾತ್ರೆ ಕೈಗೊಂಡರು.

ಸರ್ವೋದಯ ಸಮುದಾಯ, ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದಿಂದ ಹಮ್ಮಿಕೊಂಡಿದ್ದ ‘ನಮ್ಮ ನಡಿಗೆ ಸರ್ವೋದಯದ ಕಡೆಗೆ’ ಪಾದಯಾತ್ರೆಯು ಬೆಳಿಗ್ಗೆ 7.30ಕ್ಕೆ ಆರಂಭವಾಯಿತು. ಗಾಂಧಿ ಟೋಪಿ ಧರಿಸಿದ ಹಲವರು, ‘ನಾವು ಬಯಸುವ ಬದಲಾವಣೆ ನಮ್ಮಿಂದಲೇ ಪ್ರಾರಂಭವಾಗಲಿ’, ‘ಅಹಿಂಸೆ, ಪ್ರೀತಿ ನಮ್ಮ ಆದರ್ಶ’ ಎಂಬ ಭಿತ್ತಿ ಫಲಕಗಳನ್ನು ಹಿಡಿದು ಸುಡು ಬಿಸಿಲನ್ನು ಲೆಕ್ಕಿಸದೇ ಹೆಜ್ಜೆ ಹಾಕಿದರು.

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಲಘು ಉಪಾಹಾರ ಸವಿದ ಪಾದಯಾತ್ರಿಗಳಿಗೆ ದಾರಿಯಲ್ಲಿ ಕಿತ್ತಳೆ, ದ್ರಾಕ್ಷಿ, ಬಾಳೆ ಹಣ್ಣು ಮತ್ತು ಮಜ್ಜಿಗೆ ನೀಡಲಾಯಿತು. ನರೇಂದ್ರ, ಮಂಗಳಗಟ್ಟಿ ಗ್ರಾಮ ಮಾರ್ಗವಾಗಿ ಪಾದಯಾತ್ರಿಗಳು ಗರಗದ ಕ್ಷೇತ್ರೀಯ ಸೇವಾ ಸಂಘ (ರಾಷ್ಟ್ರಧ್ವಜ ಬಟ್ಟೆ ತಯಾರಿಕ ಸಂಸ್ಥೆ) ಆವರಣಕ್ಕೆ ಮಧ್ಯಾಹ್ನ ತಲುಪಿದರು.

ಈ ಸಂದರ್ಭದಲ್ಲಿ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ‘ಪರಿಸರ, ಕೃಷಿ, ಆರೋಗ್ಯ, ಶಿಕ್ಷಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಪಾದಯಾತ್ರೆ ಕೈಗೊಂಡಿದ್ದೇವೆ. ಮುಂದಿನ ಪಾದಯಾತ್ರೆ ಅರಸೀಕೆರೆ ಅಥವಾ ಕೊಟ್ಟೂರು ಭಾಗದಲ್ಲಿ ನಡೆಯಲಿದೆ. 10 ಕಿ.ಮೀ ಮಿತಿ ನಿಗದಿಪಡಿಸಲಾಗಿದೆ. ಪಾದಯಾತ್ರೆ ಮಾರ್ಗದ ಊರುಗಳ ಜನರು ಪಾಲ್ಗೊಳ್ಳಬೇಕು. ಒಂದು ಊರಿನಿಂದ ಕನಿಷ್ಠ 10 ಮಂದಿ ಭಾಗವಹಿಸಿ, ಪಾದಯಾತ್ರೆಯ ಆಶಯವನ್ನು ಅವರ ಊರುಗಳಲ್ಲಿ ಮುಂದುವರಿಸಬೇಕು’ ಎಂದು ತಿಳಿಸಿದರು.


ಧಾರವಾಡದಲ್ಲಿ ಶುಕ್ರವಾರ ‘ನಮ್ಮ ನಡಿಗೆ ಸರ್ವೋದಯದ ಕಡೆಗೆ’ ಪಾದಯಾತ್ರೆಯಲ್ಲಿ ಡಾ.ಸಂಜೀವ ಕುಲಕರ್ಣಿ, ಗುರುಬಸವ ಸ್ವಾಮೀಜಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ ಮತ್ತು ಕಪ್ಪತಗುಡ್ಡ ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು ಚಿತ್ರ:ಬಿ.ಎಂ.ಕೇದಾರನಾಥ

> **ಒಂದೆರಡು ದಿನಗಳಲ್ಲಿ ಸಮಗ್ರ ಬದಲಾವಣೆ ಸಾಧ್ಯ ಇಲ್ಲ, ಮತ್ತೆ ಮತ್ತೆ ಪ್ರಯತ್ನಿಸಿದರೆ ಮಾತ್ರ ಒಂದಲ್ಲ ಒಂದು ದಿನ ಪರಿವರ್ತನೆ ಆಗುತ್ತದೆ**
> **ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,** ಸಾಣೇಹಳ್ಳಿ

ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದ ಅಧ್ಯಕ್ಷ ಡಾ.ಸಂಜೀವ ಕುಲಕರ್ಣಿ, ಪ್ರಮುಖರಾದ ಮಹಿಮಾ ಪಟೇಲ್, ಸವಿತಾ ನಾಗಭೂಷಣ್, ಬಸವಪ್ರಭು ಹೊಸಕೇರಿ, ಬಿ.ಕೆ.ಎಸ್.ಬರ್ಧನ್ ಪಾಲ್ಗೊಂಡಿದ್ದರು.

ತಡ ರಾತ್ರಿವರೆಗೆ ಮತಗಳ ಮರು ಎಣಿಕೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆದಿದ್ದ ಚುನಾವಣೆಯ ಮತಗಳ ಮರು ಎಣಿಕೆ ಕಾರ್ಯ ಶುಕ್ರವಾರ ತಡರಾತ್ರಿ ತನಕ ನಡೆಯಿತು.

ಐಡಿಎಸ್‌ಜಿ ಸರ್ಕಾರಿ ಕಾಲೇಜಿನ ಮತ ಎಣಿಕಾ ಕೇಂದ್ರದಲ್ಲಿ ಶುಕ್ರವಾರ ಬೆಳಿಗ್ಗೆ 8ರಿಂದ ಆರಂಭವಾಗಿತ್ತು. ಎಣಿಕಾ ಕೇಂದ್ರಕ್ಕೆ ಅಭ್ಯರ್ಥಿಗಳು, ಅವರ ಏಜೆಂಟರು, ಎಣಿಕಾ ಸಿಬ್ಬಂದಿ ಹೊರತುಪಡಿಸಿ ಬೇರೆಯವರ ಪ್ರವೇಶಕ್ಕೆ ಅವಕಾಶ ಇರಲಿಲ್ಲ.

ಪೊಲೀಸರು ಕಾಲೇಜಿನ ಸುತ್ತಲೂ ಬಿಗಿ ಭದ್ರತೆ ಒದಗಿಸಿದ್ದರು. 2021ರ ಡಿಸೆಂಬರ್ 10ರಂದು ಮತದಾನ ನಡೆದಿತ್ತು. 2021ರ ಡಿಸೆಂಬರ್ 14ರಂದು ಮತ ಎಣಿಕೆ ನಡೆದಿತ್ತು. ಬಿಜೆಪಿಯ ಎಂ.ಕೆ.ಪ್ರಾಣೇಶ್ ಆರು ಮತಗಳಿಂದ ಗೆಲುವು ಸಾಧಿಸಿದ್ದರು. ಕಾಂಗ್ರೆಸ್‌ನ ಗಾಯತ್ರಿ ಶಾಂತೇಗೌಡ ನ್ಯಾಯಾಲಯದ ಮೆಟ್ಟಿಲೇರಿದ್ದರು. ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಮೂಡಿಗೆರ ಪಟ್ಟಣ ಪಂಚಾಯಿತಿಗಳ ಒಟ್ಟು 12 ನಾಮನಿರ್ದೇಶಿತ ಸದಸ್ಯರು ಮತದಾನ ಮಾಡಿದ್ದರು. ಅವರಿಗೆ ಮತದಾನ ಮಾಡಲು ಅವಕಾಶ ನೀಡಿರುವುದನ್ನು ಗಾಯತ್ರಿ ಅವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು.

ಪತ್ರಕರ್ತರ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ


ಮಂಜುಶ್ರೀ ಕಡಕೋಳ

ಬೆಂಗಳೂರು: ‘ಪ್ರಜಾವಾಣಿ’ಯ ಹಿರಿಯ ಉಪ ಸಂಪಾದಕಿ ಮಂಜುಶ್ರೀ ಎಂ. ಕಡಕೋಳ ಸೇರಿದಂತೆ ಹಲವು ಪತ್ರಕರ್ತರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ದತ್ತಿನಿಧಿ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಕೊಪ್ಪಳದಲ್ಲಿ ಮಾರ್ಚ್ 9ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಪ್ರಶಸ್ತಿ ಪುರಸ್ಕೃತರು: ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ: ಸುಬ್ಬು ಹೊಲೆಯಾರ್, ಡಿ.ವಿ.ಜಿ.ಪ್ರಶಸ್ತಿ: ರಾಘವೇಂದ್ರ ಗಣಪತಿ. ಎಚ್. ಎಸ್. ದೊರೆಸ್ವಾಮಿ ಪ್ರಶಸ್ತಿ: ಯು.ಜಿ.ಭಟ್. ಎಸ್.ವಿ. ಜಯಶೀಲರಾವ್ ಪ್ರಶಸ್ತಿ: ಅನು ಶಾಂತರಾಜು. ಪಾಟೀಲ್ ಪುಟ್ಟಪ್ಪ(ಪಾಪು) ಪ್ರಶಸ್ತಿ: ಸುಭಾಷ್ ಹೂಗಾರ. ಗೊಮ್ಮಟ ಮಾಧ್ಯಮ ಪ್ರಶಸ್ತಿ: ಎಂ.ಆರ್.ಸತ್ಯನಾರಾಯಣ. ಸಿ.ಆರ್.ಕೃಷ್ಣರಾವ್ ಪ್ರಶಸ್ತಿ: ಉಗಮ ಶ್ರೀನಿವಾಸ್. ಯಶೋದಮ್ಮ ಜಿ. ನಾರಾಯಣ ಪ್ರಶಸ್ತಿ: ಮಂಜುಶ್ರೀ ಎಂ. ಕಡಕೋಳ. ಬದರಿನಾಥ ಹೊಂಬಾಳೆ ಪ್ರಶಸ್ತಿ: ಗಂಗಹನುಮಯ್ಯ. ಎಂ.ಎಂ. ಕಲ್ಬುರ್ಗಿ ಪ್ರಶಸ್ತಿ: ಸಿದ್ಧನಗೌಡ ಪಾಟೀಲ. ಕಿಡಿಶೇಷಪ್ಪ ಪ್ರಶಸ್ತಿ: ಮು.ವೆಂಕಟೇಶಯ್ಯ.

ರವಿ ಬೆಳಗೆರೆ ಪ್ರಶಸ್ತಿ: ಎಂ.ಕೆ. ಹೆಗಡೆ. ಪಿ.ಆರ್. ರಾಮಯ್ಯ ಸ್ಮಾರಕ ಪ್ರಶಸ್ತಿ: ಎಂ.ಯೂಸುಫ್ ಪಟೇಲ್. ಎಚ್.ಕೆ. ವೀರಣ್ಣಗೌಡ ಸ್ಮಾರಕ ಪ್ರಶಸ್ತಿ: ಬಸವರಾಜ ಹೆಗ್ಗಡೆ. ರಾಜಶೇಖರ ಕೋಟಿ ಪ್ರಶಸ್ತಿ: ಕೆ.ಕೆ.ಬೋಪಣ್ಣ. ಪಿ.ರಾಮಯ್ಯ ಪ್ರಶಸ್ತಿ: ಎಸ್. ಟಿ.ರವಿಕುಮಾರ್. ಮಾ. ರಾಮಮೂರ್ತಿ ಸ್ಮಾರಕ ಪ್ರಶಸ್ತಿ: ತಾ.ನಂ. ಕುಮಾರಸ್ವಾಮಿ. ಮಹದೇವ ಪ್ರಕಾಶ್ ಪ್ರಶಸ್ತಿ: ಪ್ರಭುಲಿಂಗ ನಿಲೂರೆ. ಶಿವಮೊಗ್ಗ ಮಿಂಚು ಶ್ರೀನಿವಾಸ ಪ್ರಶಸ್ತಿ: ಚಂದ್ರಶೇಖರ ಶೃಂಗೇರಿ. ಎಚ್. ಎಸ್. ರಂಗಸ್ವಾಮಿ ಪ್ರಶಸ್ತಿ: ಗಿರೀಶ್ ಉಮ್ರಾಯ್. ಎಂ.ನಾಗೇಂದ್ರ ರಾವ್ ಪ್ರಶಸ್ತಿ: ಕೆ.ಬಿ.ಜಗದೀಶ್. ಗಿರಿಜಮ್ಮ–ರುದ್ರಪ್ಪ ತಾಳಿಕೋಟಿ ಪ್ರಶಸ್ತಿ: ಕವಿತ. ಅಪ್ಪಾಜಿಗೌಡ (ಸಿನಿ)ಪ್ರಶಸ್ತಿ: ಗಣೇಶ್ ಕಾಸರಗೋಡು, ಮೂಡಣ ಹಾವೇರಿ ಪ್ರಶಸ್ತಿ: ಎಂ.ಚಿರಂಜೀವಿ.

ವಿಶೇಷ ಪ್ರಶಸ್ತಿ: ರಂಗನಾಥ್ ಎಸ್. ಭಾರದ್ವಾಜ್,ರಮಾಕಾಂತ, ಶ್ರೀನಿವಾಸ್, ಬಿ.ಪಿಳ್ಳರಾಜು, ಭಾಸ್ಕರ ರೈ ಕಟ್ಟ, ಗುರುಶಾಂತ ಎನ್., ಎಸ್.ಎಂ.ಮನೋಹರ, ಸಿ.ಬಿ. ಸುಬೇದಾರ್.

ಕರ್ನಾಟಕ- ಮಹಾರಾಷ್ಟ್ರ ನಡುವಣ ಸಂಘರ್ಷ ನಿಯಂತ್ರಣಕ್ಕೆ ಶಾ ಸೂತ್ರ; ನೋಟಿಸಿಗೂ ಸಿಗದ ಬೆಲೆ

ಗಡಿ ಸಮನ್ವಯ ಸಮಿತಿ: ಸರ್ಕಾರಗಳ ನಿರ್ಲಕ್ಷ್ಯ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಕರ್ನಾಟಕ- ಮಹಾರಾಷ್ಟ್ರದ ಮಧ್ಯೆ ಪ್ರಕ್ಷುಬ್ಧ ವಾತಾವರಣ ನಿರ್ಮಾಣ ಆಗದಂತೆ ತಡೆಯಲು ಕೇಂದ್ರ ಸರ್ಕಾರವು ರಚಿಸಿರುವ ‘ಸಮನ್ವಯ ಸಮಿತಿ’ಗೆ ಎರಡೂ ರಾಜ್ಯಗಳ ಸರ್ಕಾರಗಳು ಯಾರನ್ನೂ ನೇಮಿಸಿಲ್ಲ. ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ನಿರ್ದೇಶನವನ್ನು ಸರ್ಕಾರಗಳು ಧಿಕ್ಕರಿಸಿವೆ.

ಬಸ್ ನಿರ್ವಾಹಕ ಮತ್ತು ಬಾಲಕಿ ನಡುವೆ ನಡೆದ ಸಣ್ಣ ಜಗಳವು ವಿಕೋಪಕ್ಕೆ ತಿರುಗಿತು. ಎರಡೂ ರಾಜ್ಯಗಳ ನಡುವೆ ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದು ಅಲ್ಲದೇ, ಎರಡೂ ಕಡೆಯ ಸಂಘಟನೆಗಳ ನಡುವೆ ವೈಷಮ್ಯಕ್ಕೂ ಕಾರಣವಾಯಿತು. ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಗೆ ಪ್ರತಿ ದಿನ ₹20 ಲಕ್ಷ ನಷ್ಟವಾಯಿತು. ಸಮನ್ವಯ ಸಮಿತಿಯು ಸಕ್ರಿಯವಾಗಿದ್ದು, ಈ ಪರಿಸ್ಥಿತಿ ನಿಭಾಯಿಸಿದ್ದರೆ ಸೂಕ್ತವಾಗಿರುತ್ತಿತ್ತು ಎಂಬ ಚರ್ಚೆ ಜನರಲ್ಲಿ ನಡೆದಿದೆ.

ಉದ್ದೇಶ ಈಡೇರಿಲ್ಲ: 2022ರ ನವೆಂಬರ್‌ನಲ್ಲಿ ಗಡಿ ಸಂಘರ್ಷ ಏರ್ಪಟ್ಟ ಸಂದರ್ಭದಲ್ಲಿ, ‘ಬೆಳಗಾವಿ ಸೇರಿ ಎಲ್ಲ 865 ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಪಡೆದೇ ಸಿದ್ಧ’ ಎಂದು ಆಗಿನ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ (ಈಗ ಉಪಮುಖ್ಯಮಂತ್ರಿ) ಹೇಳಿದ್ದರು. ಕರ್ನಾಟಕದ ಮುಖ್ಯಮಂತ್ರಿ ಆಗಿದ್ದ ಬಸವರಾಜ ಬೊಮ್ಮಾಯಿ ಅವರೂ ‘ಮಹಾರಾಷ್ಟ್ರದ ಜತ್ತ, ಅಕ್ಕಲಕೋಟ ಮತ್ತಿತರ ಪ್ರದೇಶ ಕರ್ನಾಟಕಕ್ಕೆ ಸೇರಿಸಿಯೇ ಸಿದ್ಧ’ ಎಂದಿದ್ದರು. ಆಗ ಅಮಿತ್ ಶಾ ಅವರು ಸಮನ್ವಯ ಸಮಿತಿ ರಚಿಸಿ, ಸಂಘರ್ಷ ತಿಳಿಗೊಳಿಸಲು ಪ್ರಯತ್ನಿಸಿದ್ದರು.



> **ಮಹಾರಾಷ್ಟ್ರ ಸರ್ಕಾರ ಮತ್ತು ಎಂಇಎಸ್ ಸಂಘಟನೆಯಿಂದ ಸಮನ್ವಯ ಸಮಿತಿಯ ನಿಬಂಧನೆಗಳು ಉಲ್ಲಂಘನೆ ಆಗುತ್ತಿವೆ. ಇದನ್ನು ಸರಿಪಡಿಸಬೇಕು**
> **ಅಶೋಕ ಚಂದರಗಿ,** ಸದಸ್ಯ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ



> **ಗಡಿ ಸಮನ್ವಯ ಸಮಿತಿ ರಚಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಮನವಿ ನೀಡಿದ್ದೇವೆ. ಶೀಘ್ರ ಸ್ಪಂದಿಸುವುದಾಗಿ ಅಲ್ಲಿನ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ**
> **ಮನೋಹರ ಕಿಣೇಕರ,** ಕಾರ್ಯಾಧ್ಯಕ್ಷ, ಎಂಇಎಸ್

‘ಗಡಿ ವಿವಾದ ಸುಪ್ರೀಂಕೋರ್ಟ್‌ನಲ್ಲಿ ಇತ್ಯರ್ಥ ಆಗುವವರೆಗೆ ಉಭಯ ರಾಜ್ಯಗಳು ಪರಸ್ಪರ ಪ್ರದೇಶಗಳ ಮೇಲೆ ‘ಹಕ್ಕು ಸಾಧಿಸುವ ಹೇಳಿಕೆ’ ನೀಡಬಾರದು. ‘ಎರಡೂ ರಾಜ್ಯಗಳ ತಲಾ ಮೂವರು ಸಚಿವರು ಒಳಗೊಂಡ ಸಮನ್ವಯ ಸಮಿತಿಯು ಗಡಿ ಪರಿಸ್ಥಿತಿ ನಿಭಾಯಿಸಬೇಕು’ ಎಂದು ಒಪ್ಪಂದವಾಯಿತು.

ರಾಜ್ಯದಿಂದ ಆಗಿನ ಸಚಿವರಾದ ಗೋವಿಂದ ಕಾರಜೋಳ, ಜೆ.ಸಿ. ಮಾಧುಸ್ವಾಮಿ, ಶಶಿಕಲಾ ಜೊಲ್ಲೆ ಹಾಗೂ ಮಹಾರಾಷ್ಟ್ರದಿಂದ ಚಂದ್ರಕಾಂತ ಪಾಟೀಲ, ದೀಪಕ್ ಕೇಸರಕರ್, ಶಂಭುರಾಜ್ ದೇಸಾಯಿ ಸಮಿತಿಗೆ ನೇಮಕ ಆಗಿದ್ದರು.

ಆಗಿನ ಎರಡೂ ರಾಜ್ಯ ಸರ್ಕಾರಗಳಿಂದ ಅದಕ್ಕೆ ಸ್ಪಂದನೆ ಸಿಗಲಿಲ್ಲ. ಒಂದು ಸಭೆಯೂ ನಡೆಸಲಿಲ್ಲ. ಒಪ್ಪಂದಗಳ ಪಾಲನೆ ಆಗಲಿಲ್ಲ. ಇದರ ಪರಿಣಾಮ 2023ರ ಡಿಸೆಂಬರ್ 5ರಂದು ಕೇಂದ್ರ ಗೃಹ ಸಚಿವಾಲಯ ರಾಜ್ಯ ಸರ್ಕಾರಗಳಿಗೆ ಪ್ರತ್ಯೇಕ ನೋಟಿಸ್ ನೀಡಿತ್ತು. ಎರಡೂ ಸರ್ಕಾರಗಳು ಪ್ರತಿಕ್ರಿಯಿಸಲಿಲ್ಲ. ಸಮನ್ವಯ ಸಮಿತಿ ಕಾರ್ಯಗತವಾಗಿಲ್ಲ.

ಗಡಿ ಉಸ್ತುವಾರಿ ಸಚಿವರೇ ಇಲ್ಲ!

ಗಡಿ ಕನ್ನಡಿಗರ ಹಿತರಕ್ಷಣೆಗೆ 1972ರಲ್ಲಿ ಗಡಿ ಉಸ್ತುವಾರಿ ಖಾತೆಯನ್ನು ರಚಿಸಿ ಕೆ.ಎಚ್.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಲಾಗಿತ್ತು. ಬಹಳ ವರ್ಷಗಳ ನಂತರ ಅಂದರೆ; 2015 ರಿಂದ 2018ರವರೆಗೆ ಸಿದ್ದರಾಮಯ್ಯ ಸರ್ಕಾರದಲ್ಲಿ ಎಚ್.ಕೆ.ಪಾಟೀಲ ಅವರಿಗೆ ಈ ಹುದ್ದೆ ನೀಡಲಾಯಿತು. 2018ಕ್ಕೆ ಅವಧಿ ಕೊನೆಗೊಂಡ ಬಳಿಕ ಈವರೆಗೆ ಯಾರನ್ನೂ ನೇಮಿಸಲಾಗಿಲ್ಲ.

‘ಕರ್ನಾಟಕ- ಮಹಾರಾಷ್ಟ್ರ ನಡುವೆ ಗಡಿ ಸಮಸ್ಯೆ, ಕರ್ನಾಟಕ- ಗೋವಾ ನಡುವೆ ಜಲತಂಟೆ ಇದೆ. ಇಂಥ ಪರಿಸ್ಥಿತಿಯಲ್ಲಿ ಗಡಿ ಉಸ್ತುವಾರಿ ಸಚಿವರು ಇಲ್ಲದಿರುವುದು ಗಡಿ ಕನ್ನಡಿಗರಲ್ಲಿ ಅನಾಥ ಪ್ರಜ್ಞೆ ಮೂಡಿಸಿದೆ’ ಎಂದು ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ತಿಳಿಸಿದರು.

ದ್ವಿತೀಯ ಪಿಯು ಪರೀಕ್ಷೆ ಇಂದಿನಿಂದ...

ಒಂದನೇ ಪುಟದಿಂದ...

ವೆಬ್‌ಕಾಸ್ಟಿಂಗ್ ಕಣ್ಗಾವಲು: ಎಲ್ಲ ಕೇಂದ್ರಗಳಲ್ಲೂ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಪ್ರತಿ ತಾಲ್ಲೂಕಿನಲ್ಲೂ ಪ್ರಮುಖ ಕಾಲೇಜಿನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗದ ತಲಾ ಒಬ್ಬರು ಉಪನ್ಯಾಸಕರನ್ನು ಒಳಗೊಂಡ ನಾಲ್ವರ ತಂಡವನ್ನು ಜಿಲ್ಲಾ ಉಪ ನಿರ್ದೇಶಕರು ರಚಿಸಿದ್ದಾರೆ. ಈ ತಂಡ ವೆಬ್‌ಕಾಸ್ಟಿಂಗ್ ವೀಕ್ಷಣೆಯ ಜವಾಬ್ದಾರಿ ನಿಭಾಯಿಸಲಿದೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಈ ತಂಡದ ಮೇಲುಸ್ತುವಾರಿ ನೋಡಿಕೊಳ್ಳಲಿದ್ದಾರೆ. ಪರೀಕ್ಷಾ ಕೊಠಡಿಗಳಲ್ಲಿ ವೆಬ್‌ಕಾಸ್ಟಿಂಗ್ ಜತೆಗೆ, ಹೊರಗೆ ಸಿಸಿಟಿವಿ ಕಣ್ಗಾವಲು ಇರಲಿದೆ ಎಂದು ಮಂಡಳಿ ಹೇಳಿದೆ.

ಯಾವುದಕ್ಕೆ ನಿರ್ಬಂಧ?

- ಮೊಬೈಲ್ ಫೋನ್
- ಎಲೆಕ್ಟ್ರಾನಿಕ್ ಸಾಧನಗಳು
- ಸ್ಮಾರ್ಟ್‌ವಾಚ್
- ಇಯರ್‌ಫೋನ್
- ತುಂಬು ತೋಳಿನ ಶರ್ಟ್, ಶೂ

- **1,171** ಪರೀಕ್ಷಾ ಕೇಂದ್ರಗಳು
- **7.13** ಲಕ್ಷ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳು
- **3.78** ಲಕ್ಷ ಬಾಲಕಿಯರು
- **3.35** ಲಕ್ಷ ಬಾಲಕರು
- **5** ಲಿಂಗತ್ವ ಅಲ್ಪಸಂಖ್ಯಾತರು

ಪರೀಕ್ಷಾ ವೇಳಾಪಟ್ಟಿ

ಮಾರ್ಚ್ 1	ಕನ್ನಡ, ಅರೇಬಿಕ್
ಮಾರ್ಚ್ 3	ಗಣಿತ, ಶಿಕ್ಷಣಶಾಸ್ತ್ರ, ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ
ಮಾರ್ಚ್ 4	ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳ
ಮಾರ್ಚ್ 5	ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ
ಮಾರ್ಚ್ 7	ಇತಿಹಾಸ, ಭೌತವಿಜ್ಞಾನ
ಮಾರ್ಚ್ 10	ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ಶಾಸ್ತ್ರ, ಗೃಹ ವಿಜ್ಞಾನ
ಮಾರ್ಚ್ 12	ಮನಃಶಾಸ್ತ್ರ, ರಸಾಯನವಿಜ್ಞಾನ, ಮೂಲಗಣಿತ
ಮಾರ್ಚ್ 13	ಅರ್ಥಶಾಸ್ತ್ರ
ಮಾರ್ಚ್ 15	ಇಂಗ್ಲಿಷ್
ಮಾರ್ಚ್ 17	ಭೂಗೋಳ ಶಾಸ್ತ್ರ
ಮಾರ್ಚ್ 18	ಜೀವಶಾಸ್ತ್ರ, ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ
ಮಾರ್ಚ್ 19	ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್
ಮಾರ್ಚ್ 20	ಹಿಂದಿ

ಹಕ್ಕಿಜ್ವರ: ಕೋಳಿಗಾಗಿ ರಾತ್ರಿವರೆಗೂ ಕಾದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ವರದಹಳ್ಳಿಯಲ್ಲಿ ಹಕ್ಕಿಜ್ವರ ದೃಢವಾದ ಕಾರಣ ಗ್ರಾಮದಲ್ಲಿ ರೈತರು ಸಾಕಿದ್ದ ನಾಟಿಕೋಳಿಗಳನ್ನು ಶುಕ್ರವಾರ ಕೊಲ್ಲಲಾಯಿತು.

ಪಶುಸಂಗೋಪನಾ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ರಾತ್ರಿವರೆಗೂ ಕೋಳಿಗಳು ಮನೆಗಳಿಗೆ ಬರುವುದನ್ನೇ ಕಾಯುತ್ತ ಕುಳಿತಿದ್ದರು! ವರದಹಳ್ಳಿಯಲ್ಲಿ ಬಹಳಷ್ಟು ರೈತರು ನಾಟಿ ಕೋಳಿಗಳನ್ನು ಸಾಕಿದ್ದಾರೆ. ಶುಕ್ರವಾರ ಬೆಳಿಗ್ಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಗ್ರಾಮಕ್ಕೆ ಬರುವಷ್ಟರಲ್ಲಿ ಕೆಲವು ರೈತರು ಮನೆಗಳಿಂದ ಕೋಳಿಗಳನ್ನು ಹೊರಗೆ ಬಿಟ್ಟಿದ್ದರು.

ಪಶುಸಂಗೋಪನಾ ಇಲಾಖೆ ಲೆಕ್ಕಾಚಾರದ ಪ್ರಕಾರ ಗ್ರಾಮದಲ್ಲಿ 450 ನಾಟಿಕೋಳಿಗಳು ಇವೆ. ಸಂಜೆ ವೇಳೆಗೆ 300 ಕೋಳಿಗಳನ್ನು ಹಿಡಿಯಲಾಗಿತ್ತು. ಉಳಿದ ಕೋಳಿಗಳು ಕತ್ತಲಾದ ನಂತರ ಮನೆಗಳಿಗೆ ಬರುತ್ತವೆ. ಆಗ ಹಿಡಿಯಬೇಕು ಎಂದು ಅಧಿಕಾರಿಗಳು ಮತ್ತು ಸಿಬ್ಬಂದಿ ರಾತ್ರಿಯಾದರೂ ಗ್ರಾಮದಲ್ಲಿಯೇ ಬೀಡು ಬಿಟ್ಟು, ಕೋಳಿಗಳಿಗೆ ಹುಡುಕಾಟ ನಡೆಸಿದ್ದರು.

ವರದಹಳ್ಳಿಯ ದ್ಯಾವಪ್ಪ ಮತ್ತು ರತ್ನಮ್ಮ ಅವರ ಮನೆಯಲ್ಲಿ ಮೃತಪಟ್ಟ ಕೋಳಿಗಳಲ್ಲಿ ಹಕ್ಕಿಜ್ವರ ದೃಢವಾಗಿದ್ದು ಗ್ರಾಮದಲ್ಲಿ ಸಾಕಿದ್ದ ಎಲ್ಲ ಕೋಳಿಗಳನ್ನು ಕೊಲ್ಲಲು ಪಶುಸಂಗೋಪನಾ ಇಲಾಖೆ ಮುಂದಾಗಿದೆ.

'ನಾವು ಎಷ್ಟೇ ಹೇಳಿದರೂ ಕೆಲವು ರೈತರು ಕೋಳಿಗಳನ್ನು ಮನೆಯಿಂದ ಹೊರಗೆ ಬಿಟ್ಟಿದ್ದಾರೆ. ಫಾರಂ ಕೋಳಿಗಳು ಆಗಿದ್ದರೆ ಸುಲಭವಾಗಿ ಹಿಡಿಯಬಹುದಿತ್ತು. ಆದರೆ, ನಾಟಿಕೋಳಿಗಳು ತಪ್ಪಿಸಿಕೊಳ್ಳುತ್ತವೆ. ಸುಲಭವಾಗಿ ಸಿಗುವುದಿಲ್ಲ. ರಾತ್ರಿ ಎಷ್ಟೇ ಸಮಯವಾದರೂ ಸರಿಯೇ ಎಲ್ಲ ಕೋಳಿಗಳನ್ನು ಹಿಡಿದು ಗುಂಡಿಯಲ್ಲಿ ಮುಚ್ಚಲಾಗುತ್ತದೆ' ಎಂದು ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ರಂಗಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಪಶುಸಂಗೋಪನಾ ಇಲಾಖೆ ಸಿಬ್ಬಂದಿ ಪಿಪಿಇ ಕಿಟ್ ಧರಿಸಿ ಕೋಳಿಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಜೀವಂತವಾಗಿ ತುಂಬಿದರು. ನಂತರ, ಅವುಗಳನ್ನು ಸಾಯಿಸಿ 7 ಅಡಿ ಆಳ ಮತ್ತು 6 ಅಡಿ ಅಗಲದ ಗುಂಡಿಯಲ್ಲಿ ಮುಚ್ಚಲಾಯಿತು. ಗುಂಡಿಗೂ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಯಿತು.

ಹೊರಗಡೆಯಿಂದ ವರದಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಕೋಳಿಗಳನ್ನು ತರದಂತೆ ಪೊಲೀಸರು ನಾಕಾಬಂಧಿ ಹಾಕಿದ್ದಾರೆ.

ಕುರೆಕುಪ್ಪ: 2400 ಕೋಳಿಗಳು ಸಾವು

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಕುರೆಕುಪ್ಪ ಜಾನುವಾರು ಸಂವರ್ಧನ ಕೇಂದ್ರದಲ್ಲಿ ಸಾಕಣೆ ಮಾಡಲಾಗಿದ್ದ 2,400 ಕೋಳಿಗಳು ಒಂದು ವಾರದ ಅವಧಿಯಲ್ಲಿ ಹಕ್ಕಿ ಜ್ವರದಿಂದ ಮೃತಪಟ್ಟಿವೆ. ಆಂಧ್ರ ಪ್ರದೇಶ ಮತ್ತು ತೆಲಂಗಾಣದಿಂದ ಸೋಂಕು ಹರಡಿರುವ ಸಾಧ್ಯತೆ ಇದೆ.

'ಸಾಕಣೆ ಕೇಂದ್ರದಲ್ಲಿ ಆರಂಭದಲ್ಲಿ ನಿತ್ಯ 20 ರಿಂದ 30 ಕೋಳಿ ಸತ್ತರೆ, ನಂತರದ ದಿನಗಳಲ್ಲಿ ನಿತ್ಯ 100 ರಿಂದ 200 ಕೋಳಿಗಳು ಸಾವಿಗೀಡಾದವು. ಸಾವಿಗೆ ಹಕ್ಕಿ ಜ್ವರವೇ ಕಾರಣವೆಂದು ಪ್ರಯೋಗಾಲಯದ ಪರೀಕ್ಷೆಯಿಂದ ದೃಢಪಟ್ಟಿತು. ನಂತರ 1020ಕ್ಕೂ ಹೆಚ್ಚು ಕೋಳಿಗಳನ್ನು ಸಾಯಿಸಲಾಯಿತು. ಸೋಂಕು ಹರಡದಂತೆ ಎಲ್ಲ ಕ್ರಮ ಕೈಗೊಳ್ಳಲಾಗಿದೆ' ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ವಿನೋದ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಲಂಚ ಪ್ರಕರಣ: ಸರ್ವೆ ಇಲಾಖೆ ಪರಿವೀಕ್ಷಕಗೆ ಜೈಲು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಮೀನಿಗೆ ಪಕ್ಕಾ ಪೋಡಿ ದುರಸ್ತಿ ಮಾಡಿಕೊಡಲು ಲಂಚಕ್ಕೆ ಬೇಡಿಕೆ ಇಟ್ಟು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದ ಭದ್ರಾವತಿಯ ಭೂಮಾಪನ ಇಲಾಖೆಯ ಪರಿವೀಕ್ಷಕ ಟಿ. ಮಲ್ಲಿಕಾರ್ಜುನಯ್ಯಗೆ ಶಿವಮೊಗ್ಗದ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಲಯ ಶುಕ್ರವಾರ ಒಂದೂವರೆ ವರ್ಷ ಜೈಲು ಶಿಕ್ಷೆ ಹಾಗೂ ₹30,000 ದಂಡ ವಿಧಿಸಿ ಆದೇಶಿಸಿದೆ.

2013ರಲ್ಲಿ ಪ್ರಕರಣ ನಡೆದಿತ್ತು. ಭದ್ರಾವತಿ ತಾಲ್ಲೂಕಿನ ಮತಿಘಟ್ಟ ಗ್ರಾಮದ ಎಂ.ಎಚ್.ಬಸವರಾಜಪ್ಪ, ತಮ್ಮ ಹೆಸರಿನಲ್ಲಿದ್ದ ಒಂದೂವರೆ ಎಕರೆ ಜಮೀನಿನ ಪಕ್ಕಾ ಪೋಡಿ ದುರಸ್ತಿ ಮಾಡಿಕೊಡುವಂತೆ ಭೂಮಾಪನ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಕೆಲಸ ಮಾಡಿಕೊಡಲು ಮಲ್ಲಿಕಾರ್ಜುನಯ್ಯ ₹15,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹೀಗಾಗಿ ಬಸವರಾಜಪ್ಪ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

2013ರ ಜುಲೈ 23ರಂದು ಮಲ್ಲಿಕಾರ್ಜುನಯ್ಯ ಅವರ ಸೂಚನೆಯಂತೆ ಶಿವಮೊಗ್ಗದ ವಿನೋಬನಗರದ ಕೆಂಚಪ್ಪ ಲೇಔಟ್‌ನಲ್ಲಿನ ಅವರ ಮನೆಗೆ ಹೋಗಿದ್ದ ಬಸವರಾಜಪ್ಪ, ಲಂಚದ ಹಣ ಕೊಡುವಾಗ ಲೋಕಾಯುಕ್ತ ತಂಡ ದಾಳಿ ನಡೆಸಿತ್ತು. ಲಂಚದ ಹಣದ ಸಮೇತ ಆರೋಪಿಯನ್ನು ಬಂಧಿಸಿತ್ತು. ತನಿಖೆ ಕೈಗೊಂಡಿದ್ದ ಇನ್‌ಸ್ಪೆಕ್ಟರ್ ಕೆ.ಸಿ. ಪುರುಷೋತ್ತಮ, ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಮರುಳಾರಾಧ್ಯ, ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಮಹದಾಯಿ: ವರದಿ ಸಲ್ಲಿಕೆಗೆ ಗಡುವು ವಿಸ್ತರಣೆ



ನವದೆಹಲಿ (ಪಿಟಿಐ): ಮಹದಾಯಿ ಜಲವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಮಂಡಳಿಯು ಅಂತಿಮ ವರದಿ ಸಲ್ಲಿಕೆಯ ಗಡುವನ್ನು ಕೇಂದ್ರ ಸರ್ಕಾರ ಮತ್ತೆ ಆರು ತಿಂಗಳು ವಿಸ್ತರಿಸಿದೆ ಎಂದು ಜಲಶಕ್ತಿ ಸಚಿವಾಲಯದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮಹದಾಯಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ನಡುವೆ ದಶಕಗಳಿಂದಲೂ ವಿವಾದವಿದೆ. ಅಂತರ ರಾಜ್ಯ ನದಿ ನೀರು ವಿವಾದ ಕಾಯ್ದೆ 1956ರ ಅಡಿಯಲ್ಲಿ, ಮಹದಾಯಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ 2010ರ ನವೆಂಬರ್ 16ರಂದು ನ್ಯಾಯಮಂಡಳಿಯನ್ನು ರಚಿಸಲಾಗಿತ್ತು.

2013ರ ನ.15ರ ಒಳಗಾಗಿ ನ್ಯಾಯಮಂಡಳಿಯು ವರದಿ ಸಲ್ಲಿಸಬೇಕಿತ್ತು. ಆದರೆ, 2013ರ ಆ.21ರಂದು ಕಾರ್ಯಾರಂಭಿಸಿದ್ದರಿಂದ ಗಡುವು ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು. ಮಂಡಳಿಯ ಮನವಿಗೆ ಕೇಂದ್ರ ಸರ್ಕಾರ ಸಮ್ಮತಿಸಿತ್ತು.

ಇದಾದ ಬಳಿಕ ಹಲವು ಸಲ ನ್ಯಾಯಮಂಡಳಿಯ ವರದಿ ಸಲ್ಲಿಕೆಗೆ ಗಡುವು ವಿಸ್ತರಿಸಲಾಗಿತ್ತು. ತನ್ನ ವರದಿ ಸಲ್ಲಿಕೆಯನ್ನು ಪೂರ್ಣಗೊಳಿಸಲು 2025ರ ಫೆ.16ರಿಂದ ಒಂದು ವರ್ಷ ಗಡುವು ವಿಸ್ತರಣೆ ಮಾಡುವಂತೆ ಮನವಿ ಮಾಡಿತ್ತು. ನ್ಯಾಯಮಂಡಳಿಯು ತನ್ನ ಅಂತಿಮ ವರದಿ ನೀಡಲು ಒಂದು ವರ್ಷದ ಬದಲಾಗಿ ಆರು ತಿಂಗಳು ವಿಸ್ತರಿಸಿ, ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ.

ನಗರಸಭೆ ಕಾರ್ಯಾಲಯ, ಸಿಂಧನೂರು

ಸಂಖ್ಯೆ:ನಕಾಸಿಂ:ತಾಂತ್ರಿಕ:ಕೆ.ಕೆ.ಆರ್.ಡಿ.ಬಿ:2024–25 ದಿನಾಂಕ: 31–01–2025

–:: ಟೆಂಡರ್ ಪ್ರಕಟಣೆ ::– (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ಸನ್ 2024–25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅನುದಾನದ ಮ್ಯಾಕ್ರೋ ಯೋಜನೆಯಡಿ ಸಿಂಧನೂರು ನಗರದ ವ್ಯಾಪ್ತಿಯಲ್ಲಿ ಬರುವ ಮುಖ್ಯ ರಸ್ತೆ ಮತ್ತು ವಾರ್ಡ ನಂ. 01 ರಿಂದ 31 ವಾರ್ಡಗಳಲ್ಲಿ CCTV ಅಳವಡಿಸುವ ಕಾಮಗಾರಿಗೆ (ಟೆಂಡರ್ ಸಂಖ್ಯೆ: DMA/2024-25/OW/WORK_INDENT36083) ಕೆ.ಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟನ ಷರತ್ತಿಗೊಳಪಟ್ಟು ಅರ್ಹ ವಿದ್ಯುತ್ ಗುತ್ತಿಗೆದಾರರು ಅಥವಾ WPC License (Wireless protocol Commission dept. of Telecom Govt. of India) ವುಳ್ಳ ಏಜೇನ್ಸಿದಾರರಿಂದ ಬಿಡ್ ದರಗಳನ್ನು ಅಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವರುವ http://kppp.karnataka.gov.in ವೆಬ್‌ಸೈಟ್‌ನಿಂದ ಡೌನಲೋಡ ಮಾಡಿಕೊಂಡು ಈ ಕೆಳಕಂಡ ಪ್ರಕಾರ ಬಿಡ್‌ನ್ನು ಸಲ್ಲಿಸಲು ಕೋರಿದೆ.

1) ಕೆಪಿಪಿಪಿ ಪೋರ್ಟನಲ್ಲಿ ಟೆಂಡರನ್ನು ಅಪ್‌ಲೋಡ್ ಮಾಡುವ ದಿನಾಂಕ:27–02–2025 at 5:30 PM 2) ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:15–03–2025 up to 5:30 PM 3) ಕೆಪಿಪಿಪಿ ಪೋರ್ಟಲ್ ಮೂಲಕ ತಾಂತ್ರಿಕ ಬಿಡ್‌ನ ಟೆಂಡರ್ ತೆರೆಯುವ ದಿನಾಂಕ:17–03–2025 at 11:00 AM 4.) ಟೆಂಡರ್ ಬಿಡ್ ಪೂರ್ವ ಸಭೆ ದಿನಾಂಕ: 11–03–2025– at 11:00 AM CMC Sindhanur

ಹೆಚ್ಚಿನ ವಿವರಗಳಿಗೆ ನಗರಸಭೆಯ ವೆಬ್‌ಸೈಟ್ www.sindhanurcity.mrc.gov.in ಮುಖಾಂತರ ಪಡೆದು ಸಲ್ಲಿಸಬಹುದು.

ಸಹಿ/–ಪೌರಾಯುಕ್ತರು
ನಗರಸಭೆ ಸಿಂಧನೂರು

DIP/RCR/770/KSMCA/771/2024-25

ಕರ್ನಾಟಕ ಮೃಗಾಲಯ ಪ್ರಾಧಿಕಾರ
ZOO AUTHORITY OF KARNATAKA — GADAG ZOO

ಕಾರ್ಯನಿರ್ವಾಹಕ ನಿರ್ದೇಶಕರು ಗದಗ ಮೃಗಾಲಯ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ವಿಭಾಗ, ಗದಗ

ದೂರವಾಣಿ : 08372–200289 ಇ–ಮೇಲ್ : dyconservatorgadag@gmail.com

ನಂ: ಎ3/ಜೆಡ್‌ಎಕೆ/ಪಶು ವೈದ್ಯ/ಗುತ್ತಿಗೆ ಆಧಾರ/ನೇಮಕಾತಿ/2024–25, ದಿನಾಂಕ: 27–02–2025

ನೇಮಕಾತಿ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಗದಗ ಮೃಗಾಲಯದಲ್ಲಿ ಕೆಳಗಿನ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ (ದಿನಾಂಕ: **01.04.2025** ರಿಂದ **31.03.2026** ರವರೆಗೆ) 12 ತಿಂಗಳವರೆಗೆ ಮಾತ್ರ ನೇಮಿಸಿಕೊಳ್ಳಲು ಉದ್ದೇಶಿಸಿದೆ.

ಕ್ರ.ಸಂ.	ವಿವರಗಳು	ಅರ್ಹತೆ	ಸಂಖ್ಯೆ	ಸಂಬಳ/ತಿಂಗಳು	ಷರಾ
1	ಪಶುವೈದ್ಯ	ಎಂ.ವಿ.ಎಸ್ಸಿ	01	ರೂ. **50,000/–**	ಕನಿಷ್ಠ 2 ವರ್ಷಗಳು ಹಾಗೂ ಮೇಲ್ಪಟ್ಟು ಅನುಭವ

ತಾತ್ಕಾಲಿಕವಾಗಿ ಪಶುವೈದ್ಯರನ್ನು ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲು ಸಂದರ್ಶನಕ್ಕೆ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಬಯೋ–ಡೇಟಾ ಮತ್ತು ಸಂಬಂಧಿತ ಮೂಲ ದಾಖಲಾತಿಗಳೊಂದಿಗೆ ದಿನಾಂಕ : **20–03–2025** ರಂದು ಬೆಳಿಗ್ಗೆ 11.30 ಗಂಟೆಗೆ ಕಾರ್ಯನಿರ್ವಾಹಕ ನಿರ್ದೇಶಕರು ಗದಗ ಮೃಗಾಲಯ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ವಿಭಾಗ, ಗದಗ ರವರ ಕಛೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಲು ಕೋರಲಾಗಿದೆ. ಅಭ್ಯರ್ಥಿಗಳು ತಮ್ಮ ಬಯೋ–ಡೇಟಾವನ್ನು zoorfogadag@gmail.com & dyconservatorgadag@gmail.com ಗೆ ದಿನಾಂಕ : **15.03.2025** ರ ಮೊದಲು ಕಳುಹಿಸಬೇಕು.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು ಗದಗ ಮೃಗಾಲಯ,
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ವಿಭಾಗ, ಗದಗ.

ವಾಸಾಸಂಇ/ಗದಗ/ಕೆಎಸ್‌ಎಂಸಿಎ/648/2024–25

NATIONAL INSTITUTE OF MENTAL HEALTH AND NEURO SCIENCES

INSTITUTE OF NATIONAL IMPORTANCE
Hosur Road, Bengaluru, India-560 029. Website : http://www.nimhans.ac.in

Ref. No.: NIMH:A&E-EA1:ADMSN:2025-26:July 2025 Session Date : 28.02.2025

ADMISSION NOTICE

Online Application Forms are invited for admission to the following courses under July session of the Academic Year 2025-26

Ph.D. Programs

Sl. No.	Name of the Course	Seats under Institute Stipendiary Category	Availability of Guideship Slots
01.	Ph.D. in Biophysics	2	5
02.	Ph.D. in Biostatistics	3	5
03.	Ph.D. in Child & Adolescent Psychiatry	---	4
04.	Ph.D. in Clinical Neurosciences (Funded by ICMR)	8	---
05.	Ph.D. in Clinical Psychology	6	17
06.	Ph.D. in Clinical Psychopharmacology and Toxicology	1	3
07.	Ph.D. in Epidemiology Ph.D. in Public Health	1 1	5
08.	Ph.D. in Human Genetics	2	5
09.	Ph.D. in Integrative Medicine	---	3
10.	Ph.D. in Mental Health Education	---	2
11.	Ph.D. in Neuroanaesthesia and Neurocritical Care	---	4
12.	Ph.D. in Neurochemistry	2	4
13.	Ph.D. in Neuroimaging and Interventional Radiology	---	7
14.	Ph.D. in Neurology	---	16
15.	Ph.D. in Neurological Rehabilitation	---	2
16.	Ph.D. in Neuromicrobiology	2	2
17.	Ph.D. in Neuropathology	---	4
18.	Ph.D. in Neurophysiology	5	6
19.	Ph.D. in Neurovirology	2	3
20.	Ph.D. in Nursing	1	3
21.	Ph.D. in Psychiatric Social Work	6	16
22.	Ph.D. in Psychiatry Ph.D. in History of Psychiatry Ph.D. in Mental Health Rehabilitation	--- --- 2	20
23.	Ph.D. in Psychosocial Support in Disaster Management	2	5
24.	Ph.D. in Speech Pathology & Audiology	1	5

PDF Programs

Sl. No.	Name of the Course	Total Seats	Seats under Institute Stipendiary Category	Seats under External / Sponsored Category
	POSTDOCTORAL FELLOWSHIP COURSES UNDER POST MD CATEGORY			
	PDF in Psychiatry (Common Entrance Test)			
01.	Postdoctoral Fellowship in Acute Care & Emergency Psychiatry	03	02	01
02.	Postdoctoral Fellowship in Addiction Medicine	06	04	02
03.	Postdoctoral Fellowship in Clinical Neuro Sciences & Therapeutics in Schizophrenia	03	01	02
04.	Postdoctoral Fellowship in Community Mental Health	03	01	02
05.	Postdoctoral Fellowship in Consultation Liaison Psychiatry	02	01	01
06.	Postdoctoral Fellowship in Forensic Psychiatry	02	01	01
07.	Postdoctoral Fellowship in Geriatric Psychiatry	03	02	01
08.	Postdoctoral Fellowship in Molecular Psychiatry	02	01	01
09.	Postdoctoral Fellowship in Neuropsychiatry	03	02	01
10.	Postdoctoral Fellowship in Non-Invasive Brain Stimulation of Psychiatric Disorders	02	01	01
11.	Postdoctoral Fellowship in Obsessive Compulsive Disorder & related disorders	04	02	02
12.	Postdoctoral Fellowship in Psychiatric Rehabilitation	02	01	01
13.	Postdoctoral Fellowship in Women's Mental Health	03	02	01
14.	Postdoctoral Fellowship in Tele-Psychiatry	01	01	---
	Post MD Category PDF Courses in other Departments			
01.	Postdoctoral Fellowship in Child & Adolescent Psychiatry	02	01	01
02.	Postdoctoral Fellowship in Diagnostic Neuroimaging	02	02	---
03	Postdoctoral Fellowship in Hospital Infection Control	02	01	01
04	Postdoctoral Fellowship in Integrative Mental Health and Neurosciences	02	01	01
05	Postdoctoral Fellowship in Integrative Psychiatry	02	01	01
06	Postdoctoral Fellowship in Neuroanaesthesia	08	06	02
07	Postdoctoral Fellowship in Neurocritical Care	03	03	---
08	Postdoctoral Fellowship in Neuroinfections	02	01	01
09	Postdoctoral Fellowship in Neurological Rehabilitation	02	02	---
10.	Postdoctoral Fellowship in Neuropathology	03	02	01
11.	Postdoctoral Fellowship in Transfusion Medicine	02	01	01
	POST DOCTORAL FELLOWSHIP UNDER POST DM CATEGORY			
	PDF in Neurology (Common Entrance Test)			
01.	Postdoctoral Fellowship in CNS Demyelinating Disorders	02	01	01
02.	Postdoctoral Fellowship in Cognitive Neurosciences	02	01	01
03.	Postdoctoral Fellowship in Epilepsy	03	02	01
04.	Postdoctoral Fellowship in Movement Disorders	03	02	01
05.	Postdoctoral Fellowship in Neuromuscular Disorder	03	02	01
06.	Postdoctoral Fellowship in Neuropathy	02	01	01
07.	Postdoctoral Fellowship in Paediatric Neurology	01	01	---
08.	Postdoctoral Fellowship in Stroke	01	01	---
	Post DM Category PDF Courses in other Departments			
01.	Postdoctoral Fellowship in Functional Neuroimaging	02	02	---
	MD Course			
01.	MD in Ayurveda Manovigyan Evam Manasa Roga (MD Ayu) (Out of 4 seats 01 seat is reserved for Karnataka Domicile category)	04	02	02
	M.Phil. Courses*			
01.	M.Phil. in Clinical Psychology: All India Category (UR-10, EWS-3, OBC-6, SC-3, ST-1) Karnataka State Domicile Category (UR-3, OBC-1, EWS-1) Foreign / Sponsored Category	32	 23 06 ---	 --- --- 03
02.	M.Phil. in Psychiatric Social Work All India Category (UR-10, EWS-3, OBC-6, SC-3, ST-1) Karnataka State Domicile Category (UR-3, OBC-1, EWS-1) Foreign / Sponsored Category	32	 23 06 	 --- --- 03
	Fellowship Courses			
01.	Fellowship in Clinical Neuropsychology (UR-2)	04	02	02
02.	Fellowship in Cognitive Behaviour Therapy (UR-2)	04	02	02
03.	Fellowship in Geriatric Mental Health Care	01	---	01
04.	Fellowship in Geriatric Mental Health Nursing (UR-1, OBC-1)	04	02	02
05.	Fellowship in Mental Health Education All India Category (UR-1, OBC-1, EWS-1) Karnataka State Domicile Category (UR-1)	06	 03 01	02
06.	Fellowship in Psychiatric Rehabilitation: a.Under Medical Category (UR-1) b.Under Non-Medical Category (UR-1)	04	 01 01	 01 01
07.	Fellowship in Psychosocial Care for elderly (UR-2)	03	02	01
08.	Fellowship in Psychosocial Support in Disaster Management All India Category (UR-1, OBC-1, EWS-1) Karnataka State Domicile Category (UR-1)	08	 03 01	04
09.	Fellowship in Community Mental Health Nursing	04	---	04
	Master of Public Health			
01	Master of Public Health : All India Category (UR-3,OBC-1) Karnataka State Domicile Category (UR-1) Sponsored Category	10	 04 01 ---	 --- 05
	M.Sc. Courses			
01	M.Sc. in Biostatistics All India Category (UR-2, OBC-1) Karnataka State Domicile Category (UR-1)	04	 03 01	---
02	M.Sc. in Psychiatric Nursing All India Category (UR-2,OBC-2, SC-1) Karnataka State Domicile Category (UR-2) Sponsored from NIMHANS	10	 05 02 	 --- 03#
03	M.Sc. in Neuroscience Nursing All India Category (UR-4, OBC-1) Karnataka State Domicile Category (UR-2) Sponsored from NIMHANS	10	 05 02 	 --- 03#
04	M.Sc. in Yoga Therapy (Mental Health & Neurosciences) All India Category (UR-1, OBC-1, EWS-1) Karnataka State Domicile Category (UR-1)	06	 03 01	02
05	M.Sc. in Neurosciences All India Category (UR-7, EWS-1, OBC-3, SC-1) Karnataka State Domicile Category (UR-2, OBC-1)	15	12 03	--- ---
06	M.Sc. in Medical Imaging Technology All India Category (UR-2, OBC-1, SC-1) Karnataka State Domicile Category (UR-1)	05	 04 01	---
	Postgraduate Diploma Course			
01	Postgraduate Diploma in Clinical Biochemistry All India Category (UR-1, OBC-1, SC-1) Karnataka State Domicile Category (UR-1)	04	 03 01	---

Applicants are eligible to apply for a maximum of three courses only. The options may be indicated in the application form.

\# Sponsored for NIMHANS staff and selection will be based on inter-se-seniority list subject to qualifying in the entrance test.

* The nomenclature of M.Phil. Courses is likely to be changed, subject to the approval of Government of India.

The Entrance test will be conducted for July Session in Bengaluru city only, except INI-CET & INI-SS Entrance Test conducted by AIIMS New Delhi.

Kindly refer to 'Admission Notification for Postgraduate Courses under July Session of the **Academic Year 2025-26' and 'NIMHANS PG Prospectus 2025-26 (July Session)'** on the **NIMHANS Website** for more details **http://www.nimhans.ac.in**

Sd/- DIRECTOR, NIMHANS

ಪೋಷಕರ ಪತ್ತೆಗಾಗಿ ಪ್ರಕಟಣೆ



ಈ ಭಾವಚಿತ್ರದಲ್ಲಿರುವ ಮೂರು ದಿನದ ಗಂಡು ಮಗುವನ್ನು ಶ್ರೀಮತಿ. ದೇವಿಕ ಬಿಸ್‌ವಾಲ್ ಕೋಂ ಸಂಜಯ್ ಎಂಬುವವರಿಗೆ ಜನಿಸಿದ್ದು, ಸದರಿಯವರು ದಿನಾಂಕ: 29–09–2024ರಂದು ಜಿಲ್ಲಾ ಆಸ್ಪತ್ರೆ, ತುಮಕೂರು ಇಲ್ಲಿ ಬಿಟ್ಟು ಹೋಗಿರುತ್ತಾರೆ. ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿದ್ದು, ಸದರಿ ಮಗುವಿನ ಪೋಷಕರು ಎಲ್ಲಿದ್ದಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ **ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಾ ಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ದೂರವಾಣಿ ಸಂಖ್ಯೆ: 0816–2956699** ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು **ಸಹಿ/–**
ದಿನಾಂಕ: 21–02–2025 **ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ**
DIPR/TUM/RO-187/24-25/Oysters ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ: 30: ಕಾಇಂ:ಲೋಇ:ಹಾವಿ:ಕಿ.ಇಂ–2:2024–25
ದಿನಾಂಕ: 28.02.2025.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ 1ನೇ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗದ ಅರಸೀಕೆರೆ ಉಪವಿಭಾಗ ವ್ಯಾಪ್ತಿಯ 01 ಸಂಖ್ಯೆ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.732.58ಲಕ್ಷ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಾಮಗಾರಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 17.03.2025, ಸಂಜೆ 4.00 ಗಂಟೆ ವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/1001/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಪುರಸಭಾ ಕಾರ್ಯಾಲಯ, ಮದ್ದೂರು–571428, ಮಂಡ್ಯ ಜಿಲ್ಲೆ

ಸಹಾಯವಾಣಿ ಸಂಖ್ಯೆ : 08232–232105
ವೆಬ್‌ಸೈಟ್ : www.maddurtown.gov.in
ನಂ: ಪುಸಮ/ಪ.ಅ/ಘವನಿ/ಟೆಂಡರ್–40/2024–25 ದಿ:27.02.2025

ಇ–ಪ್ರೆಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮದ್ದೂರು ಪುರಸಭೆ ವ್ಯಾಪ್ತಿಯ ಸ್ವಚ್ಛ ಭಾರತ್ ಅನುದಾನ ಕೇಂದ್ರ, ರಾಜ್ಯ ಮತ್ತು ಪುರಸಭಾ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ.

ಕ್ರ.ಸಂ : 01. ಕಾಮಗಾರಿ ಹೆಸರು : SUPPLY OF MANPOWER (TIME BASED) FOR PROCESSING OF LEGACY WASTE. ಅಂದಾಜು ಮೊತ್ತ (ಲಕ್ಷಗಳಲ್ಲಿ) : 13.69. ಇ.ಎಮ್.ಡಿ ಮೊತ್ತ : ರೂ.34,200/–. ಇಂಡೆಂಟ್ ಸಂಖ್ಯೆ : **DMA/2024-25/SE4505.**

ಕ್ರ.ಸಂ : 02. ಕಾಮಗಾರಿ ಹೆಸರು : SUPPLY OF BIO CULTURE and BIO CULTURE SPRAYING EQUIPMENT OF LEGACY WASTE. ಅಂದಾಜು ಮೊತ್ತ (ಲಕ್ಷಗಳಲ್ಲಿ) : 19.65. ಇ.ಎಮ್.ಡಿ ಮೊತ್ತ : ರೂ.49,200/–. ಇಂಡೆಂಟ್ ಸಂಖ್ಯೆ : **DMA/2024-25/IND4259.**

ಇ–ಪ್ರೆಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.03.2025 ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕ:17.03.2025 ಬೆಳಿಗ್ಗೆ 11.00 ಗಂಟೆಗೆ ರಂದು ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಪಡೆಯಬಹುದಾಗಿದೆ.

ಸಹಿ/–ಮುಖ್ಯಾಧಿಕಾರಿ,
ಪುರಸಭೆ–ಮದ್ದೂರು

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/697/2024–25

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6, ಕೆ.ಐ.ಎ.ಡಿ.ಬಿ.ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 4ನೇ ಫೇಸ್, ಪೀಣ್ಯ 2ನೇ ಹಂತ, ಬೆಂಗಳೂರು–560058, ದೂರವಾಣಿ ಸಂಖ್ಯೆ: 080–28363927.

ಸಂಖ್ಯೆ: ವಾತೆಜಂಆ(ಆ)/ಡಿಜಿಎಸ್‌ಟಿಓ–06/ಖಾ.ವಾ.ಟೆ/ಸಿಆರ್–07/2024–25 ದಿನಾಂಕ:27–02–2025

ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ), ವಿಭಾಗೀಯ ಸರಕು ಮತ್ತು ಸೇವಾ ಕಛೇರಿ–6, ಕೆ.ಐ.ಎ.ಡಿ.ಬಿ. ಕಟ್ಟಡ, ಬಿ' ಬ್ಲಾಕ್, 3ನೇ ಮಹಡಿ, 4ನೇ ಹಂತ, ಪೀಣ್ಯ 2ನೇ ಹಂತ, ಬೆಂಗಳೂರು–58 ಮತ್ತು ಇವರ ಅಧೀನ ಕಛೇರಿಯ ಉಪಯೋಗಕ್ಕಾಗಿ **(ಬೆಂಗಳೂರು ನಗರ ಕಛೇರಿಗಳಿಗೆ–08 ಮತ್ತು ಅಧೀನ ಕಛೇರಿಗಳಾದ ತಿಪಟೂರು–01, ಮಧುಗಿರಿ–01, ಮತ್ತು ತುಮಕೂರು–02)** ಒಟ್ಟು **12 (ಹನ್ನೆರಡು)** ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳು ಬಾಡಿಗೆ ಮೇರೆಗೆ ಅವಶ್ಯಕತೆ ಇದ್ದು, ಈ ಸಂಬಂಧ ಇಲಾಖೆಯ ಸೂಚನಾ ಫಲಕಕ್ಕೆ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಅಂಟಿಸಲಾಗಿದೆ ಹಾಗೂ ಇಲಾಖೆಯ ಜಾಲತಾಣ **http://ctax.kar.nic.in** ನಲ್ಲೂ ಸಹ ಪ್ರಕಟಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್–96. ಶಿವಾನಿ 2012, ದಿನಾಂಕ: 23–08–2012ರಲ್ಲಿ ತಿಳಿಸಿರುವ ನಿಯಮಗಳನ್ವಯ ಹಾಗೂ ಆಯುಕ್ತರ ಅನುಮತಿ ಪತ್ರ ದಿನಾಂಕ: 15–02–2025 ರನ್ವಯ ತಯಾರಿಕ ವರ್ಷ–2018 (Manufacturing Year 2018 onwards i.e., M.Y 2018) ನಂತರದ ಮಾದರಿಯ ವಾಹನಗಳನ್ನು ಹೊಂದಿರುವ ಮಾಲೀಕರೇ ಚಾಲಕರಾಗಿರುವ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸರ್ಕಾರಿ ಇಲಾಖೆಯಲ್ಲಿ **ಕನಿಷ್ಠ 2 ವರ್ಷದ ಅವಧಿಗೆ** ಮಾಲೀಕರೇ ಚಾಲಕರಾಗಿ ವಾಹನ ಚಾಲನೆ ಪದ್ಧತಿಯಲ್ಲಿ ಸೇವೆ ಸಲ್ಲಿಸಿರುವ ಅರ್ಜಿದಾರರಿಗೆ ಆದ್ಯತೆ ನೀಡಲಾಗುವುದು.

ಆಸಕ್ತರು ವಾಹನಗಳ ಸಂಬಂಧಪಟ್ಟ ದಾಖಲಾತಿಗಳಾದ **ನೋಂದಣಿ ಪತ್ರ, ವಿಮೆ, ಟ್ಯಾಕ್ಸ್ ಕಾರ್ಡ್, ರಹದಾರಿ ಅನುಮತಿ ಪತ್ರ (ಪರ್ಮಿಟ್), ಸ್ವಂತ ವಾಹನದ ಚಾಲಕರಾಗಿರುವುದನ್ನು ಪ್ರಮಾಣೀಕರಿಸಿರುವ ಡ್ರೈವಿಂಗ್ ಲೈಸನ್ಸ್, ಅನುಭವ ಪ್ರಮಾಣ ಪತ್ರ, ಇತ್ಯಾದಿ ಅಗತ್ಯ ದಾಖಲಾತಿಗಳೊಂದಿಗೆ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು(ಕೇ.ಕ), ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–06, ಕೆ.ಐ.ಎ.ಡಿ.ಬಿ. ಕಟ್ಟಡ, ಬಿ' ಬ್ಲಾಕ್, 3ನೇ ಮಹಡಿ, 4ನೇ ಹಂತ, ಪೀಣ್ಯ 2ನೇ ಹಂತ, ಬೆಂಗಳೂರು–58 ಬೆಂಗಳೂರು, ದೂರವಾಣಿ ಸಂಖ್ಯೆ: 080–28363927, 28363426** ಇಲ್ಲಿ **ದಿನಾಂಕ: 17–03–2025** ರಂದು **ಸಂಜೆ: 5:00 ಗಂಟೆ** ಒಳಗಾಗಿ **ಅರ್ಜಿಗಳನ್ನು** ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬಹುದಾಗಿದೆ.

ಸೂಚನೆ:– ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಸಂಖ್ಯೆಯನ್ನು ಅವಶ್ಯಕತೆಗನುಗುಣವಾಗಿ ಬದಲಾವಣೆ ಮಾಡಲಾಗುವುದು.

ಗುತ್ತಿಗೆ ಅವಧಿ: 01.04.2025 ರಿಂದ 31.03.2026 ರವರೆಗೆ.

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6, ಬೆಂಗಳೂರು.

DIPR/CP/RO5328/AAPL/2024-25

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್‌ಎಪಿಎಸ್/ಪಿಆರ್‌ಸಿ/17/2024–25 ದಿನಾಂಕ: 27.02.2025

ಇ–ಸಂಗ್ರಹಣ ವೇದಿಕೆ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ–ಲಕೋಟೆ) ಆಹ್ವಾನ ಪ್ರಕಟಣೆ

HIV test kits with Dot Immuno Assay Principle ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ–ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 07.03.2025. ಸಮಯ ಸಂಜೆ 5:30 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್: **https://kppp.karnataka.gov.in**

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ.

ವಾಸಾಸಂಇ/ವಾಪ್ರ/ಜಿಎ/5350/2024–25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಎಸ್/03/01/1544 ದಿನಾಂಕ: 28.02.2025

ಪ್ರಕಟಣೆ

ವಿಷಯ: ಚರ್ಚಾಪತ್ರ ಕುರಿತಂತೆ ಸಾರ್ವಜನಿಕರಿಂದ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಆಹ್ವಾನಿಸುವ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು **"ನಿಯಂತ್ರಣ ಅವಧಿ 2026ಕ್ಕೆ ಸೌರಶಕ್ತಿಯೊಂದಿಗೆ ಅಥವಾ ಸೌರಶಕ್ತಿ ಹೊರತಾದ ಮೇಲ್ಛಾವಣಿ ಏರೋ ಟರ್ಬೈನ್‌ನಿಂದ ವಿದ್ಯುತ್ ಖರೀದಿಗಾಗಿ ಮಾನದಂಡನಗಳ ನಿರ್ಧರಣೆ ಹಾಗೂ ದರ ಪರಿಷ್ಕರಣೆ"** ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದೆ ಹಾಗೂ ಈ ಚರ್ಚಾಪತ್ರ ಕುರಿತಂತೆ ಸಾರ್ವಜನಿಕರು / ಆಸಕ್ತರಿಂದ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳನ್ನು ಆಯೋಗವು ಆಹ್ವಾನಿಸುತ್ತದೆ.

ಸದರಿ ಚರ್ಚಾ ಪತ್ರವನ್ನು ಆಯೋಗದ ಅಂತರ್ಜಾಲ ತಾಣ **https://kerc.karnataka.gov.in** ಯಲ್ಲಿ ಪ್ರಕಟಿಸಲಾಗಿದೆ. ಆಸಕ್ತರು / ಸಾರ್ವಜನಿಕರು ತಮ್ಮ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳಿದ್ದಲ್ಲಿ **ದಿನಾಂಕ: 18.03.2025 ರೊಳಗೆ ಅಥವಾ ಅದಕ್ಕೂ ಮುಂಚಿತವಾಗಿ** ಲಿಖಿತ ರೂಪದಲ್ಲಿ ಆಯೋಗದ ಕಾರ್ಯದರ್ಶಿಯವರಿಗೆ ಸಲ್ಲಿಸಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/5368/2024-25

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
E-mail: mdktbs.tender@gmail.com Website:https://textbooks.karnataka.gov.in

ಸಂಖ್ಯೆ: ಎ7/E-55617/KTBS/ADM/TBTR/2/2024 ದಿನಾಂಕ: 28.02.2025
(ಟೆಂಡರ್ ಸಂಖ್ಯೆ: KTBS/2024-25/IND0012)

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2025–26 ನೇ ಸಾಲಿಗೆ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು, 4 ರಿಂದ 9 ನೇ ತರಗತಿಯ ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕಗಳು ಮತ್ತು 1 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಶಾಲಾ ದಿನಚರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಮರು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 07.03.2025 ರಂದು ಸಂಜೆ 5:30 ರವರೆಗೂ** ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ : **https://kppp.karnataka.gov.in** ಸಹಾಯವಾಣಿ: +91–8046010000/+91–8068948777, ಇಲಾಖೆಯ ವೆಬ್‌ಸೈಟ್: **https://textbooks.karnataka.gov.in**

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ದೂರುಗಳ ಪರಿಹಾರಕ್ಕೆ AKMI ಸಹಾಯವಾಣಿ

ರಾಜ್ಯದಲ್ಲಿ ಸಾಲ ವಸೂಲಾತಿ ಮಾಡುವ ಸಂಧರ್ಭದಲ್ಲಿ ಮೈಕ್ರೋಫೈನಾನ್ಸ್ ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ. ನಮ್ಮ ಸದಸ್ಯರುಗಳಾದ ಮೈಕ್ರೋಫೈನಾನ್ಸ್ ಕಂಪನಿಗಳು RBI ನಿಯಂತ್ರಣದಲ್ಲಿ ಬರುವುದರಿಂದ ಸುಗ್ರೀವಾಜ್ಞೆ ಅನ್ವಯಿಸುವುದಿಲ್ಲವಾದರೂ ಅಸೋಸಿಯೇಷನ್ ಆಫ್ ಮೈಕ್ರೋಫೈನಾನ್ಸ್ ಇನ್ಸಿಟ್ಯೂಷನ್ಸ್ (AKMI) ಗ್ರಾಹಕರ ರಕ್ಷಣೆಯ ವಿಚಾರದಲ್ಲಿ RBI ನಿಯಮಾವಳಿಗೂ, ರಾಜ್ಯ ಸರ್ಕಾರದ ಆಶಯಗಳಿಗೂ ಬದ್ಧವಾಗಿದೆ ಹಾಗೂ ಸದಾ ಗ್ರಾಹಕರ ಜೊತೆಗಿದ್ದು ಅವರ ದೂರು, ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸುತ್ತ ಪರಿಹಾರ ಒದಗಿಸಿದೆ. ನಮ್ಮ ಸದಸ್ಯರುಗಳು ವಿತರಿಸುವ ಸಾಲದ ಮೇಲಿನ ಬಡ್ಡಿ ದರ ಹಾಗೂ ಇತರ ಶುಲ್ಕಗಳು RBI ನಿಯಮಗಳ ಪ್ರಕಾರವಾಗಿಯೇ ಇದ್ದು ಹೆಚ್ಚು ಬಡ್ಡಿ ದರ ವಿಧಿಸುವ ಪ್ರಶ್ನೆ ಇಲ್ಲ.

ಪ್ರಸ್ತುತ ಸನ್ನಿವೇಶದಲ್ಲೂ ಕಿರುಕುಳ, ಬಲವಂತದ ಸಾಲ ವಸೂಲಿಯಂಥ ಅನುಚಿತ ಮಾರ್ಗಗಳನ್ನು ತಡೆಯಲು AKMI ಬದ್ಧವಾಗಿದೆ. ಈ ನಿಟ್ಟಿನಲ್ಲಿ ಗ್ರಾಹಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಅವರ ದೂರುಗಳನ್ನು ಪರಿಹರಿಸಲು ಪ್ರಾದೇಶಿಕವಾರು ಹಲವು ಜಿಲ್ಲೆಗಳಲ್ಲಿ ಸಹಾಯವಾಣಿಗಳನ್ನು ಆರಂಭಿಸಿದೆ. ಸಾಲ ಮರುಪಾವತಿ ಸೇರಿದಂತೆ ಯಾವುದೇ ಅನುಮಾನ, ಸಮಸ್ಯೆಗಳಿಗೆ ಸಂಬಂಧಿಸಿ ಗ್ರಾಹಕರು ನೇರವಾಗಿ ಈ ಸಹಾಯವಾಣಿಗಳಿಗೆ ಸಂಪರ್ಕಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಸಹಾಯವಾಣಿಯ ವಿವರಗಳು ಇಂತಿವೆ:

ಸಹಾಯವಾಣಿ ಕೇಂದ್ರಗಳು	AKMI ಸಹಾಯವಾಣಿ ಸಂಖ್ಯೆ	ಕೆಳಗಿನ ಜಿಲ್ಲೆಗಳ ಗ್ರಾಹಕರು ಸಹಾಯವಾಣಿ ಸಂಖ್ಯೆಗೆ ಮಾತನಾಡಬಹುದು
ಕಲಬುರಗಿ	18002022411	ಕಲಬುರಗಿ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಯಾದಗಿರಿ, ಬೀದರ್ ಮತ್ತು ಕೊಪ್ಪಳ
ಮೈಸೂರು	9686877435	ಮೈಸೂರು, ಚಾಮರಾಜನಗರ, ರಾಮನಗರ, ಮಂಡ್ಯ, ಕೊಡಗು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ತುಮಕೂರು, ಕೋಲಾರ, ಬೆಂಗಳೂರು (R&U) ಮತ್ತು ಚಿಕ್ಕಬಳ್ಳಾಪುರ
ದಾವಣಗೆರೆ	8192296307	ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ವಿಜಯನಗರ (ಹೊಸಪೇಟೆ), ಹಾವೇರಿ, ಉತ್ತರ ಕನ್ನಡ, ಧಾರವಾಡ ಮತ್ತು ಗದಗ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: 8050770005
ಇ–ಮೇಲ್ : bcwdhelpline@gmail.com

ಸಂಖ್ಯೆ: : 1692327 BCWD-17/6/2025-BCWD_SCHLR-BCWD ದಿನಾಂಕ:28.02.2025

ಪ್ರಕಟಣೆ

2023–24 ನೇ ಸಾಲಿನಲ್ಲಿ ಮೆಟ್ರಿಕ್–ನಂತರದ ಕೋರ್ಸುಗಳಾದ ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿಗಳ ಕೆಲ ಕೋರ್ಸುಗಳಿಗೆ ಕೌನ್ಸೆಲಿಂಗ್ ತಡವಾಗಿ ಪ್ರಾರಂಭವಾಗಿರುತ್ತದೆ ಮತ್ತು ಹಿಂದಿನ ಶೈಕ್ಷಣಿಕ ವರ್ಷದ ಫಲಿತಾಂಶ ತಡವಾಗಿ ನೀಡಿದ ಕಾರಣ ಇಲಾಖೆಯಿಂದ ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಈ ಕೋರ್ಸುಗಳ ವಿದ್ಯಾರ್ಥಿಗಳು ಇಲಾಖೆಗೆ ಮನವಿ ಸಲ್ಲಿಸಿದ್ದು, ಈ ಕೋರ್ಸುಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು **ದಿನಾಂಕ: 15.03.2025**ಕ್ಕೆ ನಿಗದಿಪಡಿಸಲಾಗಿದೆ ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ಸೂಚಿಸಿದೆ.

ವಿ.ಸೂ : ಸದರಿ ಅರ್ಜಿಗಳಿಗೆ ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನ ಒದಗಿಸಿದ್ದಲ್ಲಿ 2023–24ನೇ ಸಾಲಿಗೆ ಶುಲ್ಕ ಮರುಪಾವತಿ ಮಾಡಲು ಕ್ರಮ ವಹಿಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	: 15.03.2025
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ	: https://ssp.postmatric.karnataka.gov.in
ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಭೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ	https://bcwd.karnataka.gov.in
ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ	: 8050770005
ಇಮೇಲ್	: bcwdhelpline@gmail.com
ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್	: postmatrichelp@karnataka.gov.in
ದೂರವಾಣಿ ಸಂಖ್ಯೆ	: 1902

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/5361/2024–25

2025–26ನೇ ಸಾಲಿನ ರಾಜ್ಯ ಬಜೆಟ್‌ನ ನಿರೀಕ್ಷೆ: ತಜ್ಞರ ಅಭಿಪ್ರಾಯಗಳು

‘ಹೈಟೆಕ್ ಹೂಡಿಕೆ’ಗಿಂತಲೂ ಸ್ಥಳೀಯರ ಅಭಿವೃದ್ಧಿ ಮುಖ್ಯ



ಕರ್ನಾಟಕದಲ್ಲೂ ಗಮನಾರ್ಹ ಪ್ರಮಾಣದಲ್ಲಿ ಜನರು ಕೃಷಿಯಿಂದ ದೂರ ಸರಿಯುತ್ತಿದ್ದಾರೆ. ತಮ್ಮ ಸಾಂಪ್ರದಾಯಿಕ ಕಸುಬು ತೊರೆಯುತ್ತಿರುವ ಕೃಷಿಕರಿಗೆ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಸಲುವಾಗಿ ಗ್ರಾಮೀಣ ಸಂಪನ್ಮೂಲಗಳನ್ನು ಕೃಷಿ ಕ್ಷೇತ್ರದಿಂದ ಹೊರಗೆ ವಿನಿಯೋಗಿಸುವುದು ಅಗತ್ಯವಾಗಿದೆ. ಕೃಷಿ ವಲಯದ ಬಂಡವಾಳವನ್ನು ಉತ್ಪಾದನಾ ವಲಯ ಮತ್ತು ಸೇವಾ ವಲಯಕ್ಕೆ ವಿನಿಯೋಗಿಸುವುದು ಸದ್ಯ ಕೆಲವೇ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ

● ನರೇಂದ್ರ ಪಾಣಿ

ಕರ್ನಾಟಕದ 2025–26ರ ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆಗಳು ಮತ್ತು ಅಭಿವೃದ್ಧಿ ಯೋಜನೆಗಳ ನಡುವೆ ಹೇಗೆ ಸಮತೋಲನ ಸಾಧಿಸಲಾಗುತ್ತದೆ ಎನ್ನುವ ಬಗ್ಗೆ ತೀವ್ರವಾದ ಕುತೂಹಲವಿದೆ. ತಮ್ಮ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹೇರುತ್ತಿದ್ದಾರೆ. ಆದರೆ, ಗ್ಯಾರಂಟಿಗಳನ್ನು ಕಡಿತಗೊಳಿಸಿದರೆ, ಕಾಂಗ್ರೆಸ್ ರಾಜಕೀಯ ಬೆಲೆ ತೆರಬೇಕಾಗುತ್ತದೆ ಎನ್ನುವುದು ಸಿದ್ದರಾಮಯ್ಯ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರು ಈ ಬಾರಿಯ ಬಜೆಟ್ ಅನ್ನು ಕೂಡ ಮತ್ತೊಂದು ಸಮತೋಲನದ ಕ್ರಿಯೆ ಎಂದು ಭಾವಿಸುವರೋ ಅಥವಾ ತಮ್ಮನ್ನು ಮತ್ತು ಮುಂದಿನ ಹಣಕಾಸು ಸಚಿವರನ್ನು ಈ ಇಬ್ಬಂದಿತನದಿಂದ ಪಾರು ಮಾಡುವರೋ ಎನ್ನುವುದು ಆಸಕ್ತಿಕರವಾಗಿದೆ.

ಈ ಇಬ್ಬಂದಿತನದಿಂದ ಪಾರಾಗಲು ಇರುವ ಮಾರ್ಗವೆಂದರೆ, ಜನರ ಮೂಲಭೂತ ಅಗತ್ಯಗಳನ್ನು ಪೂರೈಸುವಂಥ ಅಭಿವೃದ್ಧಿಯ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು ಮತ್ತು ಈ ಮೂಲಕ ಗ್ಯಾರಂಟಿಗಳಿಗೆ ಇರುವ ಬೇಡಿಕೆಯನ್ನು ಕಡಿಮೆ ಮಾಡುವುದು. ಅದಕ್ಕೂ ಮುನ್ನ ಅವರು ಕರ್ನಾಟಕದ ಸದ್ಯದ ಅಭಿವೃದ್ಧಿ ಮಾದರಿಯು ಗ್ಯಾರಂಟಿ ಮತ್ತು ಸಬ್ಸಿಡಿಗಳನ್ನು ಏಕೆ ಅನಿವಾರ್ಯವಾಗಿಸಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಿದೆ.

ಇತರೆ ಕೆಲವು ರಾಜ್ಯಗಳಂತೆ ಕರ್ನಾಟಕದಲ್ಲೂ ಗಮನಾರ್ಹ ಪ್ರಮಾಣದಲ್ಲಿ ಜನರು ಕೃಷಿಯಿಂದ ದೂರ ಸರಿಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ, ತಮ್ಮ ಸಾಂಪ್ರದಾಯಿಕ ಕಸುಬು ತೊರೆಯುತ್ತಿರುವ ಕೃಷಿಕರಿಗೆ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಸಲುವಾಗಿ ‘ಗ್ರಾಮೀಣ ಬಂಡವಾಳ’ವು ಕೃಷಿ ಕ್ಷೇತ್ರದಿಂದ ಹೊರಗೆ ಹರಿಯುವುದು ಅಗತ್ಯವಾಗಿದೆ. ಕೃಷಿ ವಲಯದ ಬಂಡವಾಳವನ್ನು ಉತ್ಪಾದನಾ ವಲಯ ಮತ್ತು ಸೇವಾ ವಲಯಕ್ಕೆ ವ್ಯಯಿಸುವುದು ಸದ್ಯ ಕೆಲವೇ ಜಿಲ್ಲೆಗಳಿಗೆ, ವಿಶೇಷವಾಗಿ ಕರಾವಳಿ ಜಿಲ್ಲೆಗಳಿಗೆ ಸೀಮಿತವಾಗಿದೆ. ಹೀಗಾಗಿ ಕೃಷಿ ಕ್ಷೇತ್ರ ತೊರೆಯುತ್ತಿರುವವರಿಗೆ ಉದ್ಯೋಗ ಕಲ್ಪಿಸಲು ಕೆಲವೇ ಕೆಲವು ಉದ್ಯಮಗಳು ಲಭ್ಯ ಇವೆ.

ಆದರೆ, ಈ ತೀವ್ರವಾದ ಆರ್ಥಿಕ ಒತ್ತಡವು, ರಾಜ್ಯದ ಒಟ್ಟಾರೆ ಬೆಳವಣಿಗೆಯಲ್ಲಿ, ಅದೂ ಬೆಂಗಳೂರು ಕೇಂದ್ರಿತವಾದ ಮಾಹಿತಿ ತಂತ್ರಜ್ಞಾನ ಉದ್ಯಮ ಕೇಂದ್ರಿತ ಬೆಳವಣಿಗೆಯಲ್ಲಿ ಗೋಚರವಾಗುತ್ತಿಲ್ಲ. ಕರ್ನಾಟಕದ ಒಟ್ಟು ರಾಜ್ಯ ಆಂತರಿಕ ಉತ್ಪನ್ನದಲ್ಲಿ (ಜಿಎಸ್‌ಡಿಪಿ) ಮಾಹಿತಿ ತಂತ್ರಜ್ಞಾನ ಉದ್ಯಮ ಮತ್ತು ಬೆಂಗಳೂರು ನಗರ ಜಿಲ್ಲೆಯ ಪಾಲು ಹೆಚ್ಚಾಗಿದೆ. ಬೆಂಗಳೂರು ಹಾಗೂ ಮಾಹಿತಿ ತಂತ್ರಜ್ಞಾನ ಉದ್ಯಮ ಕೇಂದ್ರಿತ ಈ ಮಾದರಿಯ ಅಭಿವೃದ್ಧಿಯಿಂದಾಗಿ ತಲಾ ಆದಾಯವು ಹೆಚ್ಚಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಸಮಸ್ಯೆ ಏನೆಂದರೆ, ಈ ಬೆಳವಣಿಗೆಯ ಫಲವು ಕೃಷಿ ಕ್ಷೇತ್ರ ತೊರೆದು ಬರುತ್ತಿರುವವರಿಗೆ ದಕ್ಕುತ್ತಿಲ್ಲ. ಕೃಷಿ ರಂಗದಿಂದ ಹೊರಬರುತ್ತಿರುವವರು– ಅವರ ಮುಂದಿನ ತಲೆಮಾರು ಕೂಡ– ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉತ್ತಮ ಉದ್ಯೋಗ ಗಿಟ್ಟಿಸಲು ಅಗತ್ಯವಾದ ಕೌಶಲಗಳನ್ನು ಪಡೆದಿಲ್ಲ.

ಆರ್ಥಿಕ ಒತ್ತಡವನ್ನು ಇನ್ನಷ್ಟು ಹೆಚ್ಚಿಸಿರುವ ಸಂಗತಿ ಏನೆಂದರೆ, ಕೃಷಿ ಬಂಡವಾಳವನ್ನು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸುವಂಥ ವ್ಯವಸ್ಥೆಯೇ ನಮ್ಮಲ್ಲಿ ರೂಪುಗೊಂಡಿಲ್ಲ.

ಹೀಗೆ ಬೆಂಗಳೂರಿನ (ಮತ್ತು ಕರ್ನಾಟಕದ) ಅಭಿವೃದ್ಧಿಯು ಜಾಗತಿಕ ಬಂಡವಾಳವನ್ನು (ದೇಶೀಯ ಮತ್ತು ವಿದೇಶಿ) ಅವಲಂಬಿಸಿದೆ. ಜಾಗತಿಕ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ನಗರಾಭಿವೃದ್ಧಿಯ ಉಸ್ತುವಾರಿ ಹೊತ್ತಿರುವವರು ‘ವಿಶ್ವದರ್ಜೆ’ ಎಂದು ತಾವು ಭಾವಿಸಿರುವಂಥ ಮೂಲಸೌಕರ್ಯ ಕಲ್ಪಿಸಲು ಹೊರಟಿದ್ದಾರೆ. ಈ ದಿಸೆಯಲ್ಲಿ ಅವರು ಎಲ್ಲ ಗ್ಯಾರಂಟಿಗಳಿಗೂ ವರ್ಷಕ್ಕೆ ತಗಲುವ ಒಟ್ಟು ಮೊತ್ತದಷ್ಟು ವೆಚ್ಚದ ಸುರಂಗ ರಸ್ತೆ ನಿರ್ಮಾಣದಂತಹ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ವಿಶ್ವದರ್ಜೆಯ ಮೂಲಸೌಕರ್ಯದ ಹೆಸರಿನ ಇಂಥ ಹೂಡಿಕೆಗಳು ಸಾಮಾನ್ಯವಾಗಿ ಹೈಟೆಕ್ ಮತ್ತು ಭಾರಿ ಬಂಡವಾಳ ಬೇಡುವ ಯೋಜನೆಗಳಾಗಿರುತ್ತವೆ. ಕೃಷಿ ವಲಯ ತೊರೆದು ಬರುತ್ತಿರುವವರಿಗೆ ಇಂಥ ಯೋಜನೆಗಳಿಂದ ಆಗುವ ಲಾಭ ಅತ್ಯಲ್ಪ.

ಕರ್ನಾಟಕವು ಒಂದೆಡೆ ಬೆಂಗಳೂರಿನಲ್ಲಿ ವಿಶ್ವದರ್ಜೆಯ ಮೂಲಸೌಕರ್ಯ ಯೋಜನೆಗಳನ್ನು ರೂಪಿಸುವ, ಮತ್ತೊಂದೆಡೆ ರಾಜಧಾನಿಯ ಆಚೆಗೆ ಬಡತನದ ನಿವಾರಣೆಗೆ ಯೋಜನೆಗಳನ್ನು ಹಮ್ಮಿಕೊಳ್ಳುವ ಇಬ್ಬಗೆಯ ರಚನೆಯನ್ನು ರೂಪಿಸಿಕೊಂಡಿದ್ದು, ಇದಕ್ಕಾಗಿ ರಾಜಕೀಯ ಬೆಲೆಯನ್ನು ತೆರಬೇಕಿದೆ. 1990ರ ಮಾಹಿತಿ ತಂತ್ರಜ್ಞಾನದ ಉತ್ಕರ್ಷದ ನಂತರ ಯಾವುದೇ ಪಕ್ಷ ಎರಡನೇ ಬಾರಿಗೆ ಅಧಿಕಾರ ಪಡೆದಿಲ್ಲ. ಈ ಅನಿವಾರ್ಯದಿಂದ ಪಾರಾಗಲು ಸರ್ಕಾರಗಳು ಜನ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಹಣ ವ್ಯಯಿಸುತ್ತಿವೆ. ಗ್ಯಾರಂಟಿ ಯೋಜನೆಗಳು ಈ ಕಲ್ಯಾಣ ಕಾರ್ಯಕ್ರಮಗಳ ಹೊಸ ಮಾದರಿ ಅಷ್ಟೆ.

ಶಾಸಕರು ಅಭಿವೃದ್ಧಿಗಾಗಿ ಹೆಚ್ಚು ಅನುದಾನ ಕೇಳುತ್ತಿರುವುದು, ಕಲ್ಯಾಣ ಯೋಜನೆಗಳಿಗಾಗಿ ಹಣ ವ್ಯಯಿಸುತ್ತಿರುವುದನ್ನು ವಿರೋಧಿಸುವ ರಾಜಕೀಯ ತಂತ್ರವಾಗಿರಬಹುದು ಎನ್ನುವ ಭಾವನೆ ಮೂಡಿಸಬಹುದು. ಆದರೆ, ಇದು ತಪ್ಪುದಾರಿಗೆ ಎಳೆಯುವಂತಹದ್ದು. ವಾಸ್ತವವಾಗಿ ಅಭಿವೃದ್ಧಿಯ ನೆಪದಲ್ಲಿ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ವೆಚ್ಚ ಮಾಡುವುದಕ್ಕಾಗಿ ಅನುದಾನ ಕೇಳುತ್ತಿದ್ದಾರೆ. ಕ್ಷೇತ್ರಾಭಿವೃದ್ಧಿ ನಿಧಿಯನ್ನು ಕ್ಷೇತ್ರಕ್ಕೆ ತಮ್ಮ ಕೊಡುಗೆ ಎನ್ನುವಂತೆ ಶಾಸಕರು ವ್ಯಯಿಸಬಹುದು. ಮೌಲ್ಯಗಳ ಬಗ್ಗೆ ತಲೆಕೆಡಿಸಿಕೊಳ್ಳದ ಕೆಲವರು ಈ ಅನುದಾನದ ಗಮನಾರ್ಹ ಮೊತ್ತವನ್ನು ವೈಯಕ್ತಿಕ ಜಾಲಗಳಿಗೆ ತಿರುಗಿಸಿ ವ್ಯಯಿಸಿ, ನಂತರ ನೇರವಾಗಿ ಇದು ತಮ್ಮ ವೈಯಕ್ತಿಕ ಕೊಡುಗೆ ಎಂಬಂತೆ ಬಿಂಬಿಸಿಕೊಳ್ಳಬಹುದು.

ಒಂದು ವೇಳೆ ಶಾಸಕರು ಈ ಅನುದಾನವನ್ನು ಅಭಿವೃದ್ಧಿ ಯೋಜನೆಗಳಿಗೆ ಬಳಸಿಕೊಂಡರೂ, ಅವರು ಕೆಲವೊಂದು ಅಡಚಣೆಗಳನ್ನು ಎದುರಿಸಬೇಕಾಗುತ್ತದೆ. ಎಲ್ಲರ ಒಳಗೊಳ್ಳುವಿಕೆಗೆ ಸಂಬಂಧಿಸಿದ ಯೋಜನೆಯೊಂದರ ಯಶಸ್ಸು ಹೂಡಿರುವ ಬಂಡವಾಳವನ್ನು ಮಾತ್ರ ಅವಲಂಬಿಸಿರುವುದಿಲ್ಲ; ಬದಲಿಗೆ ಸ್ಥಳೀಯ ಆರ್ಥಿಕತೆಯು ಆ ಉದ್ಯಮ/ಯೋಜನೆಯೊಂದಿಗೆ ಎಂಥ ನಂಟು ಹೊಂದಿದೆ ಎನ್ನುವುದರ ಮೇಲೂ ಅವಲಂಬಿತವಾಗಿದೆ. ಮಾಹಿತಿ ತಂತ್ರಜ್ಞಾನ ವೃತ್ತಿಪರರು ಇಲ್ಲದಿರುವ ಪ್ರದೇಶದಲ್ಲಿ ಐ.ಟಿ ಯೋಜನೆಯನ್ನು ಕಾರ್ಯಗತಗೊಳಿಸಿದರೆ ಅದರಿಂದ ಸ್ಥಳೀಯರಿಗೆ ಆಗುವ ಪ್ರಯೋಜನ ಸೀಮಿತವಾಗಿರುತ್ತದೆ. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಪರಿಣಾಮಕಾರಿ ಕಾರ್ಯತಂತ್ರ ಎಂದರೆ ಮೊದಲಿಗೆ, ರಾಜ್ಯದ ಪ್ರತಿ ತಾಲ್ಲೂಕಿನಲ್ಲಿರುವ ಅಭಿವೃದ್ಧಿಯ ವಾಹಕಗಳನ್ನು ಸಮರ್ಪಕವಾಗಿ ಗುರುತಿಸುವುದು. ಈ ಸಾಧ್ಯತೆಗಳಲ್ಲಿರುವ ಅಭಿವೃದ್ಧಿಯ ಅಂತರ್ಗತ ಪ್ರವೃತ್ತಿ ಎಷ್ಟೇ ಚಿಕ್ಕದಾಗಿದ್ದರೂ ತೊಂದರೆ ಇಲ್ಲ. ಇಂತಹ ಅಭಿವೃದ್ಧಿಯ ಸಾಧ್ಯತೆಗಳು ಸಾಮಾನ್ಯವಾಗಿ ಸ್ಥಳೀಯ ಕಾರ್ಮಿಕ ಶಕ್ತಿ ಮತ್ತು ಬಂಡವಾಳವನ್ನು ಆಧರಿಸಿರುತ್ತವೆ. ರಾಜ್ಯ ಸರ್ಕಾರವು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯನ್ನು ಸೃಷ್ಟಿಸಲು ಈ ಬಂಡವಾಳಕ್ಕೆ ಉತ್ತೇಜನ ನೀಡಬೇಕು. ಈ ಕಾರ್ಯತಂತ್ರದ ವ್ಯಾಪಕ ಯಶಸ್ಸು, ಉಚಿತ ಆಹಾರ ನೀಡುವ ಅಗತ್ಯ ಕಡಿಮೆ ಮಾಡುವುದರ ಜೊತೆಗೆ ಇತರ ಗ್ಯಾರಂಟಿಗಳ ಬೇಡಿಕೆಯನ್ನು ಕುಗ್ಗಿಸಲಿದೆ.

ಈ ಸಾಲಿನ ಬಜೆಟ್ ಆ ದಿಕ್ಕಿನಲ್ಲಿ ದಾಪುಗಾಲು ಹಾಕುತ್ತದೆ ಎಂದುಕೊಳ್ಳುವುದು ಅತಿಯಾದ ನಿರೀಕ್ಷೆಯಾಗುತ್ತದೆ. ಈ ಸರ್ಕಾರದ ಧೋರಣೆ ಕೂಡ ಹಿಂದಿನ ಸರ್ಕಾರಗಳಂತೆ ಸ್ಥಳೀಯರಿಗೆ ಯಾವುದೇ ಪ್ರಯೋಜನ ಉಂಟು ಮಾಡದ ಪೂರ್ವನಿರ್ಧಾರಿತ ಕ್ಷೇತ್ರಗಳಲ್ಲಿ ಹೈಟೆಕ್ ಹೂಡಿಕೆ ಮಾಡುವ ರೀತಿಯಲ್ಲಿಯೇ ಇದೆ. ಈ ಬಜೆಟ್, ಅಭಿವೃದ್ಧಿಗೆ ಮಾತ್ರ ಗಮನ ನೀಡದೆ ಸ್ಥಳೀಯ ಜನರಿಗೆ ಅನುಕೂಲ ಕಲ್ಪಿಸುವಂತಹ ಅಂಶಗಳಿಗೆ ಮನ್ನಣೆ ನೀಡಿದರೆ ಅದೊಂದು ಮಹತ್ವದ ಹೆಜ್ಜೆಯಾಗಲಿದೆ. ಉದಾಹರಣೆಗೆ, ಯೋಜನೆ ರೂಪಿಸುವಾಗ ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಸುರಂಗ ಮಾರ್ಗದಿಂದಾಗಿ ನಗರದ ಜನರಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಎಷ್ಟು ಉದ್ಯೋಗ ಸಿಗಬಹುದು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬಹುದು.

ಲೇಖಕ: ಸಂದರ್ಶಕ ಪ್ರಾಧ್ಯಾಪಕ, ನಿಯಾಸ್

ಪ್ರಜಾವಾಣಿ ಚರ್ಚೆ



‘ಮರುಕೌಶಲ’ ಆದ್ಯತೆ ಆಗಲಿ ಅಲ್ಲಿವರೆಗೆ ‘ಖಾತರಿ’ ಇರಲಿ



ಸಣ್ಣಗಾತ್ರದ ಕೃಷಿಕರು, ವ್ಯಾಪಾರಿಗಳು, ಮೀನುಗಾರರು, ಭೂಹಿಡುವಳಿದಾರರು, ಮಹಿಳೆಯರು, ಅಶಕ್ತರು, ಕೂಲಿ ಕಾರ್ಮಿಕರು... ಹೀಗೆ- ಪರ್ಯಾಯ ಜೀವನೋಪಾಯ ಕಂಡುಕೊಳ್ಳಬೇಕಾದವರೆಲ್ಲರೂ, ಸಮರ್ಪಕವಾಗಿ ‘ಮರುಕಶಲ’ಗೊಳ್ಳುವ ತನಕ, ಅವರ ಜೀವನೋಪಾಯ ಸರ್ಕಾರಗಳ ಹೊಣೆ ಆಗಬೇಕು. ಅಲ್ಲಿಯ ತನಕ ಅವಶ್ಯಕತೆ ಇರುವ ಅರ್ಹರಿಗೆಲ್ಲರಿಗೂ ಸರ್ಕಾರವು ಕನಿಷ್ಠ ಆದಾಯ ಖಾತರಿ (ಯುಬಿಐ) ಒದಗಿಸಿದರೆ, ಅದನ್ನು ‘ಪಾಪ್ಯುಲಿಸ್ಟ್’ ಎಂದು ಹಣೆಪಟ್ಟಿ ಹಚ್ಚುವುದು ತಪ್ಪಾಗುತ್ತದೆ

● ರಾಜಾರಾಂ ತಲ್ಲೂರು

ದೇಶದಾದ್ಯಂತ ಇಂದು ಒಂದೇ ಚರ್ಚೆ - ‘ಎಕನಾಮಿಕ್ಸ್ ಆಫ್ ಸ್ಕೇಲ್’ ಕುರಿತು. ಸಣ್ಣಗಾತ್ರದ ವ್ಯವಹಾರ, ಉತ್ಪಾದನೆ, ಸೇವೆ, ಚಟುವಟಿಕೆಗಳು ಲಾಭದಾಯಕ ಅಲ್ಲ. ಭರಪೂರ ಲಾಭ ಗಳಿಸಬೇಕೆಂದರೆ, ಅವುಗಳ ಗಾತ್ರ ಹಿಗ್ಗಿಸಬೇಕು ಎಂಬ ಚಿಂತನೆ.

ಹೀಗೆ ಉತ್ಪಾದನೆಗಳನ್ನು, ಆರ್ಥಿಕ ಚಟುವಟಿಕೆಗಳನ್ನು ಹಿಗ್ಗಿಸಬೇಕಾದರೆ, ಆ ಚಟುವಟಿಕೆಗಳನ್ನು ಬಲಾಢ್ಯರು (ಅರ್ಥಾತ್ ಕಾರ್ಪೊರೇಟ್‌ಗಳು) ಮಾಡಬೇಕು. ಹಾಲಿ ಇರುವ ಕಿರಿಗಾತ್ರದ ಚಟುವಟಿಕೆಗಳನ್ನು ನಿರುತ್ಸಾಹಗೊಳಿಸಿ, ಅಲ್ಲಿ ತೊಡಗಿಕೊಂಡಿರುವವರನ್ನು ಕ್ರಮೇಣ ಅಲ್ಲಿಂದ ಕಳಚಿಕೊಳ್ಳುವಂತೆ ಮಾಡಬೇಕು. ಅವರಿಗೆ ಬೇರೆ ಕೌಶಲಗಳನ್ನು ಕಲಿಸಿಕೊಟ್ಟು, ಪರ್ಯಾಯ ಜೀವನೋಪಾಯಗಳನ್ನು ಒದಗಿಸಬೇಕು ಎಂಬುದು ಈ ಚಿಂತನೆಯ ಸಾರಾಂಶ. ಉದಾರೀಕರಣ ಪ್ರಕ್ರಿಯೆ ವೇಗ ಗಳಿಸಿಕೊಂಡಂತೆಲ್ಲ ಬಲಗೊಳ್ಳುತ್ತಾ ಬಂದಿರುವ ಈ ಚಿಂತನೆ, ಕಳೆದ 10 ವರ್ಷಗಳಲ್ಲಿ ಹರಳುಗಟ್ಟಿ, ವೇಗವಾಗಿ ಅನುಷ್ಠಾನಗೊಳ್ಳತೊಡಗಿದೆ.

ಸಣ್ಣ ಕೃಷಿಕರು, ಕೃಷಿ ಕೂಲಿಕಾರ್ಮಿಕರನ್ನು ಕೃಷಿರಂಗದಿಂದ ಹೊರಗೆ ಕಳುಹಿಸಿ, ಕಾರ್ಪೊರೇಟ್ ಕೃಷಿ ಅನುಷ್ಠಾನ; ಸಣ್ಣ ಮೀನುಗಾರರನ್ನು ಸಮುದ್ರದಿಂದ ಹೊರಗೆ ಕಳುಹಿಸಿ ಯಾಂತ್ರೀಕೃತ ಮೀನುಗಾರಿಕೆಗೆ ಪ್ರೋತ್ಸಾಹ; ಸಾಂಪ್ರದಾಯಿಕ ಕಲಿಕೆಗಳನ್ನು ನಿರುತ್ಸಾಹಗೊಳಿಸಿ, ಕೌಶಲ ಆಧಾರಿತ ಕಲಿಕೆಗಳಿಗೆ ಪ್ರೋತ್ಸಾಹ; ಪುಟ್ಟ ರಸ್ತೆಗಳು-ಸಂವಹನ-ಲಾಜಿಸ್ಟಿಕ್ಸ್ ಅನ್ನು ನಿರುತ್ತೇಜಿಸಿ, ಕ್ಯಾಪೆಕ್ಸ್ ಕ್ರಾಂತಿ; ಸಣ್ಣಪುಟ್ಟ ಜನವಸತಿಗಳನ್ನು ಒಕ್ಕಲೆಬ್ಬಿಸಿ ಬೃಹತ್ ಕೈಗಾರಿಕೆಗಳಿಗೆ ನೆಲ-ಜಲ; ದೇಶದೊಳಗೆ ಉಂಡು ವ್ಯರ್ಥಗೊಳಿಸುವ ಬದಲು, ವಿದೇಶಗಳಿಗೆ ರಫ್ತು ಹೆಚ್ಚಳ... ಹೀಗೆ ‘ಒಂದು ದೇಶ; ಒಂದು ಮಹಾಸ್ಕೇಲ್’ ಅಭಿಯಾನವನ್ನು ಎಲ್ಲ ರಂಗಗಳಲ್ಲಿ ಆರಂಭಿಸಲಾಗಿದೆ.

ಸಂವಿಧಾನದ 7ನೇ ಶೆಡ್ಯೂಲಿನಲ್ಲಿ ಬರುವ ಜಂಟಿ ಪಟ್ಟಿಮತ್ತು ರಾಜ್ಯ ಪಟ್ಟಿಯಲ್ಲಿ ಇರುವ ಸಂಗತಿಗಳನ್ನು ಈ ‘ಸ್ಕೇಲ್’ ಸಾಧಿಸುವ ಕಾರಣ ನೀಡಿ, ರಾಷ್ಟ್ರಮಟ್ಟದಲ್ಲಿಯೇ ನಿರ್ಧರಿಸುವುದು ಅನಿವಾರ್ಯ ಎಂಬ ಸ್ಥಿತಿ ನಿರ್ಮಾಣ ಮಾಡಲಾಗಿದೆ. ಹಾಗಾಗಿ, ಇಂದು ದೂರಗಾಮಿ ಯೋಜನೆಗಳಲ್ಲಿ ರಾಜ್ಯಗಳಿಗೆ ನಿರ್ಧರಿಸುವ ಸ್ವಾಯತ್ತೆ ಇಲ್ಲವೇ ಇಲ್ಲ ಎಂಬಷ್ಟು ಗೌಣವಾಗಿಬಿಟ್ಟಿದೆ. ರಾಜ್ಯಗಳೂ ಈ ಮಾರುಕಟ್ಟೆ ತುತ್ತೂರಿಯ ಅಬ್ಬರಕ್ಕೆ ಮಾರುಹೋಗಿ ‘ಹೂಡಿಕೆ ಸಮಾವೇಶ’ಗಳಲ್ಲಿ ಮೈಮರೆಯುತ್ತಿವೆ.

ಇಂತಹ ಸಂಕ್ರಮಣ ಸನ್ನಿವೇಶದಲ್ಲಿ ಸರ್ಕಾರಗಳು ಸಂತುಲಿತವಾಗಿ ವ್ಯವಹರಿಸದಿದ್ದಾಗ ಏನು ಆಗಬೇಕೋ, ಅದು ಈಗ ಎಲ್ಲೆಡೆ ಕಾಣಸಿಗುತ್ತಿದೆ. ಅಂದರೆ, ‘ಎಕನಾಮಿಕ್ಸ್ ಆಫ್ ಸ್ಕೇಲ್’ನ ತರಾತುರಿಯಲ್ಲಿ, ಎಲ್ಲವನ್ನೂ ಮೊಗೆಮೊಗೆದು ಕಾರ್ಪೊರೇಟ್‌ಗಳ ತೆಕ್ಕೆಗೆ ನೀಡಲಾಗುತ್ತಿದೆ. ಆದರೆ,ಅಲ್ಲಿಂದ ಹೊರದೂಡಿಸಿಕೊಳ್ಳುತ್ತಿರುವ ಜನಸಾಮಾನ್ಯರನ್ನು ಮರುಕುಶಲಗೊಳಿಸುವ, ಅವರಿಗೆ ತಕ್ಕ ಪುನರ್ವಸತಿ ಕಲ್ಪಿಸುವ ಕೆಲಸ ಅಷ್ಟೇ ವೇಗದಿಂದ, ಅಗತ್ಯ ಇಚ್ಛಾಶಕ್ತಿಯೊಂದಿಗೆ ನಡೆಯುತ್ತಿಲ್ಲ. ವಿಶಾಲವಾದ ಈ ದೇಶದಲ್ಲಿ, ಈ ರೀತಿಯ ಪ್ರಾದೇಶಿಕ, ವಿಕೇಂದ್ರೀಕೃತ ಸಣ್ಣ ಜೀವನೋಪಾಯ ಚಟುವಟಿಕೆಗಳ ವೈವಿಧ್ಯ ಮತ್ತು ಮಹತ್ತಿಕೆಯ ಕಲ್ಪನೆ ಆಳುವವರ ಗಮನಕ್ಕೆ ಬರುತ್ತಿಲ್ಲ. ಕೇವಲ ಬ್ಯಾಲೆನ್ಸ್‌ಶೀಟ್ ಕೊಬ್ಬಿಸುವ ‘ಡೆವಲಪ್‌ಮೆಂಟ್’ ಹಿಂದೆ ಓಡಿದ್ದರ ಫಲವಾಗಿ, ಕೋವಿಡೋತ್ತರ ಆರ್ಥಿಕತೆ ಕುಸಿದಿದ್ದು, ಎಷ್ಟೇ ಪ್ರೋತ್ಸಾಹ ನೀಡಿದರೂ ಚಿಗುರುತ್ತಿಲ್ಲ; ಎಲ್ಲ ಪ್ರಯತ್ನಗಳೂ ಮೇಲುಪದರದ ತೇಪೆ ಅನ್ನಿಸುತ್ತಿವೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ‘ಗ್ಯಾರಂಟಿಗಳ’ ಆಶ್ವಾಸನೆ ಬೆನ್ನೇರಿ 2023ರಲ್ಲಿ ಅಧಿಕಾರಕ್ಕೆ ಬರುವಲ್ಲಿ, ಈ ‘ಎಕನಾಮಿಕ್ಸ್ ಆಫ್ ಸ್ಕೇಲ್’ ಕಲ್ಪನೆ ಹುಟ್ಟು ಹಾಕಿದ ಅಸಮತೋಲನದ ಪಾತ್ರ ಬಲು ದೊಡ್ಡದಿದೆ. ಕರ್ನಾಟಕವೇನೂ ಸಾಧಾರಣ ಸಾಮರ್ಥ್ಯದ ರಾಜ್ಯವಲ್ಲ. 2023ರ ಆರ್ಥಿಕ ವರ್ಷದಲ್ಲಿ, ದೇಶದ ಒಟ್ಟು ಜಿಡಿಪಿಯಲ್ಲಿ 8.2% ಕೊಡುಗೆ ಕರ್ನಾಟಕದ್ದಿತ್ತು. ರಾಜ್ಯದ ತಲಾ ಒಟ್ಟು ರಾಜ್ಯ ಆಂತರಿಕ ಉತ್ಪನ್ನ ದೇಶದಲ್ಲೇ ಹೆಚ್ಚು. ಹೀಗಿರುವ ಕರ್ನಾಟಕದಲ್ಲೂ, ಈ ಗ್ಯಾರಂಟಿಗಳನ್ನು ಜನರ ಬಾಯಿಯನ್ನು ತಕ್ಷಣಕ್ಕೆ ಮುಚ್ಚಿಸುವ ‘ಪಾಪ್ಯುಲಿಸ್ಟ್’ ಯೋಜನೆಗಳೆಂದು ಬ್ರ್ಯಾಂಡ್ ಮಾಡಲಾಗುತ್ತಿದೆ. ಹೀಗೆ ಬ್ರ್ಯಾಂಡ್ ಮಾಡುವವರು, ಬೃಹತ್ ಕೈಗಾರಿಕೆಗಳು- ಕಾರ್ಪೊರೇಟ್‌ಗಳು– ಐ.ಟಿ–ಬಿ.ಟಿಯಂತಹ ಕ್ಷೇತ್ರಗಳಿಗೆ ಸರ್ಕಾರ ಕೊಡುತ್ತಿರುವ ಸಬ್ಸಿಡಿಗಳು, ಉಚಿತವಾಗಿ ಅಥವಾ ಚಿಕ್ಕಾಸಿಗೆ ಮಂಜೂರು ಮಾಡುತ್ತಿರುವ ನೆಲ- ಜಲ- ಪರಿಸರಗಳನ್ನೆಲ್ಲ ‘ಪಾಪ್ಯುಲಿಸ್ಟ್’ ಎಂದು ತಪ್ಪಿಯೂ ಗುರುತಿಸುವುದಿಲ್ಲ!

2023ರ ಲೆಕ್ಕಾಚಾರದಂತೆ, ಕರ್ನಾಟಕದಲ್ಲಿ 86.81ಲಕ್ಷ ಕೃಷಿ ಕುಟುಂಬಗಳು (ಅಂದಾಜು 4.5 ಕೋಟಿ ಜನ) 118.05 ಲಕ್ಷ ಹೆಕ್ಟೇರ್ ಭೂಮಿಯನ್ನು ಅವಲಂಬಿಸಿ, ಕೃಷಿ ನಿರತರಾಗಿದ್ದಾರೆ. ಇದು ರಾಜ್ಯದ ಜನಸಂಖ್ಯೆಯ 60% ಭಾಗ. ಇವರನ್ನೆಲ್ಲ ಹೊರಕಳುಹಿಸಿ, ಕೃಷಿಯನ್ನು ಲಾಭದಾಯಕಗೊಳಿಸುವ ಕಲ್ಪನೆಯೇ ಅಸಹಜವಾದದ್ದು. ಇಷ್ಟೊಂದು ಮಂದಿಯನ್ನು ಕೃಷಿ ಪ್ರಧಾನ ವ್ಯವಸ್ಥೆಯಿಂದ ಹೊರಕಳುಹಿಸಿ, ಅವರಿಗೆ ಪರ್ಯಾಯ ಜೀವನೋಪಾಯಗಳನ್ನು ಕಲ್ಪಿಸಲು ಸರ್ಕಾರಗಳು ಕೈಗೊಂಡಿರುವ ಕ್ರಮಗಳೆಲ್ಲ ಪರ್ಯಾಪ್ತವಾಗಿವೆಯೇ ಎಂಬ ಒಂದು ಪ್ರಶ್ನೆ ಕೇಳಿಕೊಂಡರೆ, ಜನಸಾಮಾನ್ಯರ ಸಶಕ್ತೀಕರಣಕ್ಕೆ ದೂರಗಾಮಿ ಚಿಂತನೆಗಳಿರುವ ಒಂದು ಬಜೆಟ್ ಹೇಗಿರಬೇಕೆಂಬ ಪ್ರಶ್ನೆಗೆ ಉತ್ತರಗಳು ಸರಳವಾಗಿ ಸಿಗತೊಡಗುತ್ತವೆ.

ಏನು ಮಾಡಬಹುದು?: ಸಣ್ಣಗಾತ್ರದ ಕೃಷಿಕರು, ವ್ಯಾಪಾರಿಗಳು, ಮೀನುಗಾರರು, ಭೂಹಿಡುವಳಿದಾರರು, ಮಹಿಳೆಯರು, ಅಶಕ್ತರು, ಕೂಲಿ ಕಾರ್ಮಿಕರು... ಹೀಗೆ- ಪರ್ಯಾಯ ಜೀವನೋಪಾಯ ಕಂಡುಕೊಳ್ಳಬೇಕಾದವರೆಲ್ಲರೂ, ಸಮರ್ಪಕವಾಗಿ ‘ಮರುಕುಶಲ’ಗೊಳ್ಳುವ ತನಕ, ಅವರ ಜೀವನೋಪಾಯ ಸರ್ಕಾರಗಳ ಹೊಣೆ ಆಗಬೇಕು. ಅಲ್ಲಿಯ ತನಕ ಆವಶ್ಯಕತೆ ಇರುವ ಅರ್ಹರಿಗೆಲ್ಲರಿಗೂ ಸರ್ಕಾರವು ಕನಿಷ್ಠ ಆದಾಯ ಖಾತರಿ ಒದಗಿಸಿದರೆ, ಅದನ್ನು ‘ಪಾಪ್ಯುಲಿಸ್ಟ್’ ಎಂದು ಹಣೆಪಟ್ಟಿ ಹಚ್ಚುವುದು ತಪ್ಪಾಗುತ್ತದೆ.

ಮರುಕೌಶಲ (Reskilling) ಪ್ರಕ್ರಿಯೆ ಒಂದು ಸಮಯಬದ್ಧ, ಫಲಿತಾಂಶ ಆಧಾರಿತ ಕಾರ್ಯಕ್ರಮವಾಗಿ ರೂಪುಗೊಳ್ಳಬೇಕೇ ಹೊರತು, ಯಾರೋ ಒಂದಿಷ್ಟು ಖಾಸಗಿಯವರು ಮತ್ತೆ ಇದರಲ್ಲೂ ದುಡ್ಡು ಹೊಡೆಯುವ ‘ಸರ್ಕಾರಿ ಯೋಜನೆ’ ಆಗಬಾರದು. ‘ಒಂದು ಜಿಲ್ಲೆ, ಒಂದು ಉತ್ಪನ್ನ’ದಂತಹ ಕೇಂದ್ರೀಕೃತ ಚಿಂತನೆಗಳು ಸಣ್ಣಗಾತ್ರದ ದೇಶಗಳಲ್ಲಿ ಕಾರ್ಯಸಾಧ್ಯವೇ ಹೊರತು ಭಾರತದಂತಹ ವೈವಿಧ್ಯಮಯ, ವಿಶಾಲ ಒಕ್ಕೂಟ ವ್ಯವಸ್ಥೆಯಲ್ಲಿ ಅಲ್ಲ. ಹಾಗಾಗಿ, ಇಲ್ಲಿನ ಜೀವನೋಪಾಯಗಳ ಬಗ್ಗೆ ನಿರ್ಧರಿಸುವಾಗ, ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಅವಶ್ಯಕತೆಗಳನ್ನು ಮತ್ತು ಪರಿಸರದ ಸ್ಥಿತಿಯನ್ನು ಪರಿಗಣಿಸಿ, ಮಾಹಿತಿಯುತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಎಳೆಯ ನಿರುದ್ಯೋಗಿಗಳನ್ನು ಉದ್ಯೋಗಕ್ಕೆಂದು ಅರೆಕೌಶಲದ ಅಥವಾ ಕೌಶಲ ಬೇಕಿಲ್ಲದ ‘ಸ್ಕ್ರೂಡ್ರೈವರ್ ತಂತ್ರಜ್ಞಾನ’ ಗಳಲ್ಲಿ, ಗಿಗ್ ಚಾಕರಿಗಳಲ್ಲಿ ತೊಡಗಿಸಲಾಗುತ್ತಿದೆ. ಹೀಗೆ, ಅಮೂಲ್ಯವಾದ ಮಾನವ ಶ್ರಮವನ್ನು ವ್ಯರ್ಥಗೊಳಿಸುವ ಬದಲು, ದೀರ್ಘಕಾಲಿಕವಾಗಿ ಉಪಯೋಗಕ್ಕೆ ಬರಬಲ್ಲ ಮತ್ತು ದಿನಕಳೆದಂತೆ ಪರಿಣತಗೊಂಡು – ಹೆಚ್ಚು ಉತ್ಪಾದಕ ಆಗಬಲ್ಲ ಕೌಶಲದ ಉದ್ಯೋಗಗಳಲ್ಲಿ ಅವರನ್ನು ತೊಡಗಿಸಬೇಕು.

ನೆಲ- ಜಲ- ಪರಿಸರ- ಜನಪದಗಳ ನಡುವೆ ಸಂತುಲನ ಇರುವ ಸಹ್ಯ ಅಭಿವೃದ್ಧಿ ಜನ ನೆಮ್ಮದಿಯಿಂದ ಬದುಕಲು ಪೂರಕವಾಗಿರಬೇಕೇ ಹೊರತು, ಕಾರ್ಪೊರೇಟ್ ಬ್ಯಾಲೆನ್ಸ್‌ಶೀಟ್ ಕೊಬ್ಬಿಸುವಲ್ಲಿ ಮತ್ತು ದೇಶದ ಆಮದು-ರಫ್ತು ಸಂತುಲನದತ್ತ ಮಾತ್ರ ಕಣ್ಣಿಟ್ಟು ಮುಂದುವರಿಯಬಾರದು. ‘ಒಂದು ದೇಶ; ಒಂದು x’ (ಇಲ್ಲಿ x ವೇರಿಯೆಬಲ್) ಎಂಬ ಮಂತ್ರ ತಾರಕಕ್ಕೇರುತ್ತಿರುವಾಗ, ನಾಡಿನ ಅಭ್ಯುದಯದಲ್ಲಿ ರಾಜ್ಯ ಸರ್ಕಾರಗಳ ಮತ್ತು ಸ್ಥಳೀಯಾಡಳಿತಗಳ ಹೊಣೆಗಾರಿಕೆ, ಸ್ವಾಯತ್ತ ನಿರ್ಧಾರಗಳು ಮಹತ್ವದ ಪಾತ್ರ ವಹಿಸುತ್ತವೆ.

ಲೇಖಕರು: ಸಾಮಾಜಿಕ ವಿಶ್ಲೇಷಕ

ಸಿದ್ಧಸೂತ್ರ ಬಿಟ್ಟು ಕದಲದ ‘ಶಭಾಷ್’

ಸುಮಾರು ಎರಡೂವರೆ ವರ್ಷಗಳ ಹಿಂದೆಯೇ ಸೆಟ್ಟೇರಿದ್ದ ಸಿನಿಮಾವಿದು. ಸಿದ್ಧಸೂತ್ರದಲ್ಲೇ ಕಟ್ಟಿಕೊಡಲಾಗಿರುವ ಈ ಸಿನಿಮಾದಲ್ಲಿ ಪೊಲೀಸ್ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ ಪ್ರಮೋದ್ ಶೆಟ್ಟಿ. ‘ಲಾಫಿಂಗ್ ಬುದ್ಧ’ ಸಿನಿಮಾದಲ್ಲಿ ತಿಂಡಿಪೋತ ಪೊಲೀಸ್ ಆಗಿದ್ದ ಪ್ರಮೋದ್ ಇಲ್ಲಿ ಸೋಂಬೇರಿ ಪೊಲೀಸ್ ಆಗಿದ್ದಾರೆ.

ಇದು ಶತಸೋಂಬೇರಿಯಾಗಿರುವ ಸಬ್‌ಇನ್‌ಸ್ಪೆಕ್ಟರ್ ಹೇಮಂತ್ ಕುಮಾರ್(ಪ್ರಮೋದ್ ಶೆಟ್ಟಿ) ಕಥೆ. ಯಾವುದೇ ಅಪರಾಧ ನಡೆಯದ ತನ್ನೂರಿನಲ್ಲೇ ಸಬ್‌ಇನ್‌ಸ್ಪೆಕ್ಟರ್ ಆಗಿ ಕೆಲಸಕ್ಕೆ ಸೇರುತ್ತಾನೆ ಹೇಮಂತ್. ಆ ಠಾಣೆಯಲ್ಲಿ ಹೇಮಂತ್‌ನ ಅಪ್ಪನೇ ಹೆಡ್‌ಕಾನ್‌ಸ್ಟೆಬಲ್. ಕರ್ತವ್ಯಕ್ಕಿಂತ ಹೆಂಡತಿಯ ಸೆರಗಿನಲ್ಲೇ ಹೆಚ್ಚಿನ ಸಮಯ ಜೋತಾಡುವ ಹೇಮಂತ್ ವೃತ್ತಿ ಬದುಕನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಆ ಊರಿನಲ್ಲಿ ಕೊಲೆಯೊಂದು ನಡೆಯುತ್ತದೆ. ಈ ಪ್ರಕರಣವನ್ನು ಆಲಸಿಯಾದ ಹೇಮಂತ್ ಹೇಗೆ ಭೇದಿಸುತ್ತಾನೆ ಎನ್ನುವುದೇ ಚಿತ್ರದ ಕಥೆ.

ಪೇಲವವಾಗಿರುವ ಕಥೆ ಹಾಗೂ ಚಿತ್ರಕಥೆ ಹೊಂದಿರುವ ಈ ಸಿನಿಮಾದುದ್ದಕ್ಕೂ ಲಾಜಿಕ್ ಇಲ್ಲದ ದೃಶ್ಯಗಳ ಸರಮಾಲೆಯೇ ಇದೆ. ಚಿತ್ರಕಥೆ ಬರೆಯುವ ಮುನ್ನ ಪೊಲೀಸ್ ವ್ಯವಸ್ಥೆ ಹಾಗೂ ಅದರ ಕಾರ್ಯನಿರ್ವಹಿಸುವಿಕೆಯ ಬಗ್ಗೆ ಅರಿತು ಚಿತ್ರವನ್ನು ಕಟ್ಟಿಕೊಡಬಹುದಿತ್ತು. ಹಾಸ್ಯಪ್ರಧಾನ ಸಿನಿಮಾದಲ್ಲಿ ಸಂಭಾಷಣೆಗಳೇ ಬಹುಮುಖ್ಯ. ಇಲ್ಲಿ ಸಂಭಾಷಣೆಗಳು ಹಾಗೂ ದೃಶ್ಯಗಳ ಕಟ್ಟುವಿಕೆ ಕೃತಕವಾಗಿದೆ. ಹೇಮಂತ್ ವೈಯಕ್ತಿಕ ಬದುಕಿನಲ್ಲಿ ಹೆಚ್ಚು ಆಸಕ್ತಿಯುಳ್ಳವ ಎನ್ನುವುದನ್ನು ತೋರಿಸುವುದಕ್ಕೇ ಹೆಚ್ಚಿನ ತೆರೆ ಅವಧಿಯನ್ನು ನಿರ್ದೇಶಕರು ಮೀಸಲಿಟ್ಟಿದ್ದಾರೆ. ಇದು ತಾಳ್ಮೆ ಪರೀಕ್ಷಿಸುತ್ತದೆ. ಅನಗತ್ಯವಾದ ಹಾಡುಗಳು ಸಿನಿಮಾ ಅವಧಿ ಹೆಚ್ಚಿಸಿದೆ.

‘ಲಾಫಿಂಗ್ ಬುದ್ಧ’ದಲ್ಲಿ ‘ಗೋವರ್ಧನ’ನಂಥ ಪಾತ್ರವನ್ನು ಪ್ರಮೋದ್ ನಿಭಾಯಿಸಿದ್ದಾರೆ. ಆದರೆ ಕಥೆ, ಚಿತ್ರಕಥೆಯ ಕೊರತೆಯಿಂದ ಈ ಸಿನಿಮಾದಲ್ಲಿ ಅವರ ಪಾತ್ರ ಬಹಳ ಕೃತಕವಾಗಿ ಕಾಣಿಸುತ್ತದೆ. ಶಂಕರ್ ಅಶ್ವಥ್, ಆದ್ಯಪ್ರಿಯಾ, ಕಾವ್ಯಪ್ರಕಾಶ್ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಚಿಕ್ಕಮಗಳೂರು ಪ್ರಕೃತಿಯನ್ನು ಅಣಜಿ ನಾಗರಾಜ್ ಸುಂದರವಾಗಿ ಸೆರೆಹಿಡಿದಿದ್ದಾರೆ.

ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಚಿತ್ರದ ಹೆಸರು: ಶಭಾಷ್ ಬಡ್ಡಿಮಗ್ನೆ

- **ನಿರ್ಮಾಣ:** ಚೈತ್ರಾಪ್ರಕಾಶ್
- **ನಿರ್ದೇಶನ:** ಬಿ.ಎಸ್.ರಾಜಶೇಖರ್
- **ತಾರಾಗಣ:** ಪ್ರಮೋದ್ ಶೆಟ್ಟಿ, ಆದ್ಯಪ್ರಿಯಾ, ಸಾಮ್ರಾಟ್ ಶೆಟ್ಟಿ, ಕಾವ್ಯಪ್ರಕಾಶ್, ರವಿತೇಜ, ಮಿತ್ರ, ಮೂಗು ಸುರೇಶ್, ಶಂಕರ್ ಅಶ್ವಥ್, ಪ್ರಕಾಶ್ ತುಮ್ಮಿನಾಡು ಮತ್ತಿತರರು



ಆದ್ಯಪ್ರಿಯಾ, ಪ್ರಮೋದ್ ಶೆಟ್ಟಿ

ಪದಬಂಧ 5968


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಲವಂತವಾಗಿ ಹೊರದೂಡುವಿಕೆ (4)
3.ಸಂಪೂರ್ಣವಾಗಿ ಪಕ್ವವಾಗಿರುವುದು (4)
5.ಪಿತ್ರಾರ್ಜಿತ ಹಕ್ಕು (3)
6.ವ್ಯಾಪಾರದಲ್ಲಿ ಕೊಂಡುಕೊ (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲುಭೂಮಿ (7)
10.ಅನಿರೀಕ್ಷಿತ ಘಟನೆ (4)
11.ಋತುಗಳ ರಾಜ (3)
13.ಬರಿದಾಗದ ಬತ್ತಳಿಕೆ (4)
15.ಗೌರವಕ್ಕೆ ಪಾತ್ರನಾದವನು (4)

ಮೇಲಿಂದ ಕೆಳಕ್ಕೆ

1.ಬಲಭಾಗವಲ್ಲದುದು (2)
2.ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)
4.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
5.ವಾದ್ಯವನ್ನು ನುಡಿಸುವಿಕೆ (3)
6.ಖನಿಯಲ್ಲಿ ಸಿಕ್ಕಿದುದು (3)
8.ಮುನಿದು ಕುಳಿತಿರುವ ಅಜ್ಜ! (3)
9.ಮಿತದಲ್ಲಿನ ಸ್ಪಂದನ ಗೊತ್ತಾಯಿತೇ? (3)
10.ಮೊದಲು ಮತ್ತು ಕೊನೆ (3)
12.ದೇಹ ನೋಡಿದಾಗಲೇ ಈ ಅನುಮಾನ! (3)
13.ಚರ್ಮ ಕಿತ್ತು ದೇಹದಲ್ಲುಂಟಾಗುವ ಕಚ್ಚು (2)



5967ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಾಧಕ 3.ಪದರ 5.ಪತಿ 6.ವಲ್ಮೀಕ 7.ನೆಪ 9.ಯುವತಿ 10.ಆಲಾಪ 11.ಕೆರ 13.ಹಣಿಗೆ 15.ಮಾರ 16.ಕಟಾವು 17.ಲುಬ್ಧಕ

ಮೇಲಿಂದ ಕೆಳಕ್ಕೆ: 1.ಬಾಣಂತಿ 2.ಕಕವ 3.ಪದಕ 4.ರವಾನೆ 5.ಪಳೆಯುಳಿಕೆ 8.ಪರೋಪಕಾರ 12.ರಕ್ಷಕ 13.ಹಗೇವು 14.ಗೆದ್ದಲು 15.ಮಾಸಿಕ

ಸುಡೊಕು 6353

		1		8				5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6352 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮಾರ್ಚ್ 1, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ದ್ವಿತೀಯ ಗಂ. 24-10 ನಕ್ಷತ್ರ: ಪೂರ್ವಾಭಾದ್ರ ಗಂ. 11-23 ಯೋಗ: ಸಾಧ್ಯ ಗಂ. 16-25 ಕರಣ: ಬಾಲವ ಗಂ. 13-44, ಕುಂಭ ಮಾಸದ 17 ನೇ ದಿನ, ಮಳೆನಕ್ಷತ್ರ: ಶತಭಿಷ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-50 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 30 ಶಬನ್, ದಿನ ವಿಶೇಷ : ರಾಮಕೃಷ್ಣ ಪರಮಹಂಸರ ಜನ್ಮದಿನ
ಅದೃಷ್ಟ ಸಂಖ್ಯೆ : 6, 1

ಮೇಷ: ಗಣಿತದ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡುವ ಕನಸಿಗೆ ಪುಷ್ಟಿ ಸಿಗಲಿದೆ. ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ. ವೈಯಕ್ತಿಕ ವಿಚಾರಗಳ ಬಗ್ಗೆ ಗಮನಹರಿಸಿ.

ವೃಷಭ: ಜಾನುವಾರು ಸಾಕಣೆ ಮಾಡುವವರಿಗೆ ಅವುಗಳ ಆಮದು ಅಥವಾ ರಫ್ತಿನ ವಿಚಾರವಾಗಿ ಕೆಲವು ಸಮಸ್ಯೆಗಳು ಉಂಟಾಗಬಹುದು. ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗುವುದು.

ಮಿಥುನ: ಹೂಡಿಕೆಯ ವಿಚಾರದಲ್ಲಿ ಎಚ್ಚರಿಕೆಯ ತೀರ್ಮಾನ ಕೈಗೊಳ್ಳುವುದು ಉತ್ತಮ. ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ. ಸ್ನೇಹಿತರೊಂದಿಗೆ ಪ್ರಯಾಣ ಬೆಳೆಸುವಿರಿ.

ಕರ್ಕಾಟಕ: ಉದ್ಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನವನ್ನು ಮಾಡಿ. ಕೃಷಿಗೆ ಸಂಬಂಧಿಸಿದ ಹಣಕಾಸಿನ ಯೋಜನೆಗಳ ಬಗ್ಗೆ ಚಿಂತೆ ಮಾಡಬೇಕಾದ ಅಗತ್ಯವಿಲ್ಲ.

ಸಿಂಹ: ಮಕ್ಕಳ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದು ಕಷ್ಟವಾದರೂ ಅನಿವಾರ್ಯವಾಗಿ ನಡೆದುಕೊಳ್ಳಿರಿ. ಮದುವೆಯ ಬಗ್ಗೆ ಮನೆಯಲ್ಲಿ ನಿರ್ಧಾರ ತಿಳಿಸುವಿರಿ. ಕ್ರೀಡೆಗಳಲ್ಲಿ ಸಮಯ ಕಳೆಯುವಿರಿ.

ಕನ್ಯಾ: ಸಂದರ್ಭಕ್ಕೆ ಅನುಗುಣವಾಗಿ ಪಾಠವನ್ನು ಬೋಧಿಸುವುದು. ಪರೋಪಕಾರದಂಥ ಒಳ್ಳೆಯ ನಿರ್ಧಾರಗಳಿಂದ ಸಹೋದ್ಯೋಗಿಗಳಿಗೆ ಸಂತಸವಾಗುವುದು. ಪ್ರಯಾಣದಲ್ಲಿ ಎಚ್ಚರವಹಿಸಿ.

ತುಲಾ: ನೂತನ ವ್ಯಾಪಾರ ಆರಂಭವನ್ನು ನಿರ್ಧರಿಸಿದವರಿಗೆ ಮಧ್ಯವರ್ತಿಗಳ ಬಳಕೆಯಿಂದ ಸಹಾಯ ಸಿಗುವುದು. ಸಾಲಬಾಧೆಯಂತಹ ಪರಿಸ್ಥಿತಿಯಲ್ಲಿ ಸಹೋದರರು ಸಹಕರಿಸುವರು. ಬೇಡಿಕೆಗಳು ಇತ್ಯರ್ಥವಾಗಲಿವೆ.

ವೃಶ್ಚಿಕ: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆಗಳು ಬರಲಿವೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ತರಹದ ತೀರ್ಮಾನ ತೆಗೆದುಕೊಳ್ಳಬೇಡಿ. ಅರಣ್ಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿರುವುದು.

ಧನು: ಪ್ರಗತಿಯನ್ನು ಬಹಳಷ್ಟು ಜಾಗದಲ್ಲಿ ಪ್ರಶಂಸಿಸುತ್ತಿರುವುದರಿಂದ ಕಾರ್ಯಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜತೆಗೆ ವೃತ್ತಿಪರವಾದ ಶತ್ರುಗಳ ಸಂಖ್ಯೆ ಹೆಚ್ಚಲಿದೆ.

ಮಕರ: ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಂಡಿರುವ ನಿಮ್ಮಿಂದ ಈ ದಿನ ಸಂಸ್ಥೆಗೆ ನಷ್ಟ ಸಂಭವಿಸುವಂತಾಗಬಹುದು ಜಾಗ್ರತರಾಗಿರಿ. ಆಗೊಂದು ಈಗೊಂದು ಸಲ ಅನವಶ್ಯಕವಾಗಿ ನೆರೆಹೊರೆಯವರ ಕಿರಿಕಿರಿ ತಪ್ಪದು.


ಕುಂಭ: ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ ಸ್ವ ಪ್ರಯತ್ನದಿಂದ ಕೆಲಸದಲ್ಲಿ ಮುನ್ನುಗ್ಗಿ. ಯಾವುದೇ ಕೆಲಸಗಳನ್ನು ಮುಂದುಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಭವಿಷ್ಯದ ಕುರಿತು ಗಂಭೀರ ಚರ್ಚೆ ನಡೆಸುವಿರಿ.

ಮೀನ: ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಕೇವಲ ಸಮಯ ಮಾತ್ರ ಹಾಳಾಗುವುದು ಎಂದು ತಿಳಿದಿರಲಿ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಬಹುದು. ಆತಂಕಕ್ಕೆ ಕಾರಣವಾಗಬೇಕಿಲ್ಲ.

ಶನಿವಾರ • ಮಾರ್ಚ್ 1, 2025 ಪ್ರಜಾವಾಣಿ

ಖಾಲಿ ಹುದ್ದೆ ಭರ್ತಿಗೆ ರಾಹುಲ್ ಆಗ್ರಹ

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿ ರಾಷ್ಟ್ರೀಯ ಆಯೋಗದಲ್ಲಿ (ಎನ್‌ಸಿಎಸ್‌ಸಿ) ಹುದ್ದೆಗಳು ಖಾಲಿ ಇರುವುದಕ್ಕೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರವನ್ನು ಶುಕ್ರವಾರ ತರಾಟೆಗೆ ತೆಗೆದುಕೊಂಡಿದ್ದಾರೆ.



ದಲಿತರ ಹಕ್ಕುಗಳು ಮತ್ತು ಹಿತಾಸಕ್ತಿಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಎಸ್.ಸಿ ರಾಷ್ಟ್ರೀಯ ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಅದನ್ನು ದುರ್ಬಲಗೊಳಿಸುವುದು ದಲಿತರ ಸಾಂವಿಧಾನಿಕ ಮತ್ತು ಸಾಮಾಜಿಕ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ ಎಂದು ಟೀಕಿಸಿದ್ದಾರೆ.

‘ಬಿಜೆಪಿ ಸರ್ಕಾರದ ದಲಿತ ವಿರೋಧಿ ಮನಃಸ್ಥಿತಿಗೆ ಮತ್ತೊಂದು ಪುರಾವೆ. ದಲಿತರ ಹಕ್ಕುಗಳನ್ನು ರಕ್ಷಿಸುವ ಪರಿಶಿಷ್ಟ ಜಾತಿ ರಾಷ್ಟ್ರೀಯ ಆಯೋಗವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗಿದೆ. ಆಯೋಗದ ಎರಡು ಪ್ರಮುಖ ಹುದ್ದೆಗಳು ಕಳೆದ ಒಂದು ವರ್ಷದಿಂದ ಖಾಲಿಯಾಗಿವೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎನ್‌ಸಿಎಸ್‌ಸಿ

ದೌರ್ಜನ್ಯ: ಬಿಜೆಪಿ ಆಡಳಿತದಲ್ಲಿ ಯಾರೂ ಸುರಕ್ಷಿತರಲ್ಲ –ಖರ್ಗೆ



ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಸರ್ಕಾರದ ‘ಬೇಟಿ ಬಚಾವೊ, ಬೇಟಿ ಪಢಾವೊ’ ಯೋಜನೆಯಿಂದ ₹455 ಕೋಟಿ ನಾಪತ್ತೆ ಆಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

‘ಆರ್‌ಟಿಐ ಅರ್ಜಿಯಡಿ ಈ ಸಂಬಂಧ ಬಹಿರಂಗವಾಗಿರುವ ಮಾಹಿತಿಯು ಕೇಂದ್ರ ಸರ್ಕಾರದ ಸುಳ್ಳುಗಳನ್ನು ಬಯಲು ಮಾಡಿದೆ’ ಎಂದು ಅವರು ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

‘ಕಳೆದ ಹತ್ತು ವರ್ಷಗಳ ಬಿಜೆಪಿ ಆಡಳಿತದ ಅವಧಿಯಲ್ಲಿ ಹಾಗೂ ಕೆಲವೊಮ್ಮೆ ಬಿಜೆಪಿಯ ಗೂಂಡಾಗಳಿಂದಲೇ ದೌರ್ಜನ್ಯದಿಂದ ಬಳಲಿರುವ ಹೆಣ್ಣುಮಕ್ಕಳ ನೋವನ್ನು, ‘ಮಹಿಳೆ ಮೇಲಿನ ದೌರ್ಜನ್ಯ ಸಾಕು’ ಎಂಬ ಬಿಜೆಪಿ ಸರ್ಕಾರದ ಜಾಹೀರಾತು ಅಣಕಿಸುವಂತಿದೆ ಎಂದೂ ಟೀಕಿಸಿದ್ದಾರೆ.

‘ಪುನರ್‌ವಿಂಗಡನೆ ಸವಾಲು’

ಚೆನ್ನೈ: ‘ಭಾಷೆಯ ಹೋರಾಟ ಮತ್ತು ಕ್ಷೇತ್ರ ಪುನರ್‌ವಿಂಗಡನೆ ನಮ್ಮ ಎದುರು ಇರುವ ಪ್ರಮುಖ ಸವಾಲುಗಳಾಗಿದ್ದು, ತಮಿಳಿಗರು ತಮ್ಮ ಹಕ್ಕುಗಳಿಗಾಗಿ ಒಗ್ಗಟ್ಟಿನಿಂದ ಹೋರಾಡಬೇಕಿದೆ’ ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶುಕ್ರವಾರ ಕರೆ ನೀಡಿದ್ದಾರೆ.

‘ಭಾಷೆಯು ತಮಿಳರ ಜೀವನಾಡಿಯಾಗಿದ್ದರೆ, ನ್ಯಾಯಬದ್ಧ ಕ್ಷೇತ್ರ ಪುನರ್‌ವಿಂಗಡನೆ ನಮ್ಮ ಹಕ್ಕಾಗಿದೆ’ ಎಂದು ಅವರು ಪ್ರತಿಪಾದಿಸಿದ್ದಾರೆ. ಡಿಎಂಕೆ ಕಾರ್ಯಕರ್ತರಿಗೆ ವಿಡಿಯೊ ಸಂದೇಶ ಕಳುಹಿಸಿರುವ ಅವರು, ಈ ಎರಡೂ ಸವಾಲುಗಳ ವಿರುದ್ಧ ತಮಿಳುನಾಡು ಮತ್ತು ಡಿಎಂಕೆ ಬದ್ಧತೆಯಿಂದ ಹೋರಾಟ ನಡೆಸುತ್ತದೆ ಎಂದು ಹೇಳಿದ್ದಾರೆ. ಜನಸಂಖ್ಯೆಯನ್ನು ಮಾತ್ರವೇ ಆಧರಿಸಿ ಸಂಸದೀಯ ಕ್ಷೇತ್ರಗಳ ಸಂಖ್ಯೆಯನ್ನು ನಿರ್ಧರಿಸಬಾರದು ಎಂಬುದು ತಮಿಳುನಾಡಿನ ಬೇಡಿಕೆಯಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಮಣಿಪುರ: ಶಸ್ತ್ರಾಸ್ತ್ರ ಒಪ್ಪಿಸಲು ರಾಜ್ಯಪಾಲರಿಂದ ‘ಕೊನೆಯ ಅವಕಾಶ’

ಗಡುವು 6ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಲೂಟಿ ಮಾಡಿದ ಮತ್ತು ಅಕ್ರಮವಾಗಿ ಇಟ್ಟುಕೊಂಡಿರುವ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ನೀಡಿದ್ದ ಗಡುವನ್ನು ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಮಾರ್ಚ್ 6ರವರೆಗೆ ವಿಸ್ತರಿಸಿ ‘ಅಂತಿಮ ಅವಕಾಶ’ ನೀಡಿದ್ದಾರೆ.

ರಾಷ್ಟ್ರಪತಿ ಆಳ್ವಿಕೆ ಜಾರಿಯಾದ ಬೆನ್ನಲ್ಲೇ ಫೆ.20ರಂದು ರಾಜ್ಯಪಾಲರು ಒಂದು ವಾರದೊಳಗೆ (ಫೆ.27) ಶಸ್ತ್ರಾಸ್ತ್ರಗಳನ್ನು ಸ್ವಯಂಪ್ರೇರಿತವಾಗಿ ಒಪ್ಪಿಸುವಂತೆ ಸ್ವಯಂಸೇವಕರು ಮತ್ತು ಬಂಡುಕೋರರಿಗೆ ಸೂಚಿಸಿದ್ದರು. ಆದರೆ, ಗಡುವು ಮುಗಿದ ಗುರುವಾರದ ವರೆಗೆ 500 ಶಸ್ತ್ರಾಸ್ತ್ರಗಳನ್ನು ಮಾತ್ರ ಒಪ್ಪಿಸಲಾಗಿದೆ.

ಶಸ್ತ್ರಾಸ್ತ್ರಗಳನ್ನು ಒಪ್ಪಿಸಲು ನೀಡಿದ ಗಡುವು ವಿಸ್ತರಿಸುವಂತೆ ಮೈತೇಯಿ ಮತ್ತು ಕುಕಿ ಸಮುದಾಯಗಳನ್ನು ಪ್ರತಿನಿಧಿಸುವ ಹಲವು ಸಂಘಟನೆಗಳು ರಾಜ್ಯಪಾಲರಿಗೆ ಮನವಿ ಮಾಡಿದ್ದವು. ವಿವಿಧ ಸಂಘಟನೆಗಳ ಮನವಿಯನ್ನು ಪರಿಗಣಿಸಿ ಗಡುವನ್ನು ಮಾರ್ಚ್ 6ರವರೆಗೆ ವಿಸ್ತರಿಸಲಾಗಿದೆ ಎಂದು ರಾಜಭವನದ ಪ್ರಕಟಣೆ ತಿಳಿಸಿದೆ.

‘ಶಸ್ತ್ರಾಸ್ತ್ರಗಳನ್ನು ಒಪ್ಪಿಸಲು ಕೊನೆಯ ಅವಕಾಶವನ್ನು ನೀಡಿದ್ದೇವೆ. ಗಡುವು ಮುಗಿದ ಬಳಿಕ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ವ್ಯಾಪಕ ಶೋಧ ಕಾರ್ಯ ನಡೆಸಲಿದ್ದಾರೆ’ ಎಂದು ಎಚ್ಚರಿಸಲಾಗಿದೆ.

2023ರಲ್ಲಿ ಪೊಲೀಸ್ ಠಾಣೆಗಳು ಮತ್ತು ಶಸ್ತ್ರಾಗಾರದಿಂದ 6 ಸಾವಿರಕ್ಕೂ ಅಧಿಕ ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಲಾಗಿತ್ತು. ಅದರಲ್ಲಿ ಇದುವರೆಗೆ ಸುಮಾರು ಎರಡು ಸಾವಿರ ಶಸ್ತ್ರಾಸ್ತ್ರಗಳನ್ನು ಮಾತ್ರ ಮರಳಿ ವಶಕ್ಕೆ ಪಡೆಯಲಾಗಿದೆ.



ಮೈತೇಯಿ ಸಮುದಾಯದ ತೀವ್ರಗಾಮಿ ಗುಂಪಾದ ಅರಂಬಾಯಿ ತೆಂಗೋಲ್ ಸಂಘಟನೆಯ ಸದಸ್ಯರು ಒಪ್ಪಿಸಿರುವ ಶಸ್ತ್ರಾಸ್ತ್ರಗಳನ್ನು ಇಂಫಾಲ್‌ನ ಮಣಿಪುರ ರೈಫಲ್ಸ್ ಮೈದಾನದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದರು –ಎಎಫ್‌ಪಿ ಚಿತ್ರ

ಬಂಡುಕೋರರಿಂದ ಗುಂಡಿನ ದಾಳಿ


ಇಂಫಾಲ್ (ಪಿಟಿಐ): ಮಣಿಪುರದ ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ಮೈತೇಯಿ ಸಮುದಾಯಕ್ಕೆ ಸೇರಿದ ಪ್ರಾರ್ಥನಾ ಸ್ಥಳದ ಮೇಲೆ ಅಪರಿಚಿತ ಬಂಡುಕೋರರು ಶುಕ್ರವಾರ ಗುಂಡಿನ ದಾಳಿ ನಡೆಸಿದ್ದಾರೆ.

ಘಟನೆಯಲ್ಲಿ ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಕ್ತರ ಗುಂಪೊಂದು ಭಾರಿ ಭದ್ರತೆಯಲ್ಲಿ ಮೈತೇಯಿ ಸಮುದಾಯದ ಪವಿತ್ರ ಕ್ಷೇತ್ರ ಎನಿಸಿರುವ ಕೊಂಗ್ಬಾ ಮರುಗೆ ಪ್ರಾರ್ಥನೆ ಸಲ್ಲಿಸಲು ಬೆಳಿಗ್ಗೆ 9.30ಕ್ಕೆ ಬಂದಾಗ ಗುಂಡಿನ ದಾಳಿ ನಡೆದಿದೆ.

‘ಸಮೀಪದ ಬೆಟ್ಟಗಳ ಕಡೆಯಿಂದ ಒಟ್ಟು ಏಳು ಸುತ್ತು ಗುಂಡು ಹಾರಿಸಲಾಗಿದ್ದು, ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ. ಹೆಚ್ಚುವರಿ ಭದ್ರತಾ ಪಡೆಗಳನ್ನು ಸ್ಥಳಕ್ಕೆ ಕಳುಹಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಿನ ದಾಳಿಯ ಸುದ್ದಿ ಹಬ್ಬಿದಂತೆಯೇ ಸಮೀಪದ ಗ್ರಾಮಗಳ ನಿವಾಸಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದರು. ದಾಳಿ ನಡೆಸಿದವರನ್ನು ಬಂಧಿಸುವಂತೆ ಆಗ್ರಹಿಸಿದರು.





ಉಕ್ಕಿ ಹರಿದ ನದಿ

ಜಮ್ಮುವಿನಲ್ಲಿ ಶುಕ್ರವಾರ ಸುರಿದ ಭಾರಿ ಮಳೆಗೆ ತವೀ ನದಿ ಉಕ್ಕಿ ಹರಿಯಿತು –ಪಿಟಿಐ ಚಿತ್ರ

ಜನಾದೇಶಕ್ಕೆ ಅವಮಾನ: ಆತಿಶಿ

ನವದೆಹಲಿ (ಪಿಟಿಐ): ದೆಹಲಿ ವಿಧಾನ ಸಭೆಯಿಂದ ಎಎಪಿಯ 21 ಶಾಸಕರನ್ನು ಅಮಾನತು ಮಾಡಿರುವುದು ಜನಾದೇಶಕ್ಕೆ ಮಾಡಿದ ‘ಅವಮಾನ’ ಮತ್ತು ‘ಪ್ರಜಾಪ್ರಭುತ್ವಕ್ಕೆ ನೀಡಿದ ಏಟು’ ಎಂದು ವಿರೋಧ ಪಕ್ಷದ ನಾಯಕಿ ಆತಿಶಿ ಅವರು ಸ್ಪೀಕರ್ ವಿಜೇಂದರ್ ಗುಪ್ತಾ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಶಾಸಕರ ಅಮಾನತು ಕ್ರಮವನ್ನು ಖಂಡಿಸಿದ ಅವರು, ವಿರೋಧ ಪಕ್ಷದವರ ಧ್ವನಿಯನ್ನು ಉದ್ದೇಶಪೂರ್ವಕವಾಗಿ ಹತ್ತಿಕ್ಕಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

‘ದೆಹಲಿ ವಿಧಾನಸಭೆಯಲ್ಲಿ ನಡೆದ ಘಟನೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಪ್ರತಿಭಟನೆ ಮಾಡಿದ್ದಕ್ಕೆ ವಿರೋಧ ಪಕ್ಷದ ಶಾಸಕರ ವಿರುದ್ಧ ಸೇಡು ತೀರಿಸಿಕೊಳ್ಳಲಾಗುತ್ತಿದೆ’ ಎಂದು ದೂರಿದ್ದಾರೆ.

ಸುದ್ದಿ 2 ನಿಮಿಷ

ಪತ್ನಿ ವಿರುದ್ಧ ವಿಡಿಯೊ ಮಾಡಿಟ್ಟು ಟಿಸಿಎಸ್ ಉದ್ಯೋಗಿ ಆತ್ಮಹತ್ಯೆ

ಲಖನೌ: ಟಿಸಿಎಸ್ ಕಂಪನಿಯ ಉದ್ಯೋಗಿ ಮಾನವ್ ಶರ್ಮಾ ಅವರು, ಪತ್ನಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಉತ್ತರ ಪ್ರದೇಶದ ಆಗ್ರಾ ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಾನವ್ ಅವರು ಮುಂಬೈನಲ್ಲಿ ಸಂಸ್ಥೆಯ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಡಿಫೆನ್ಸ್ ಕಾಲೊನಿಯಲ್ಲಿನ ತಮ್ಮ ನಿವಾಸದಲ್ಲಿ ನೇಣು ಹಾಕಿಕೊಳ್ಳುವ ಮುನ್ನ ಅವರು ಪತ್ನಿ ಕಿರುಕುಳ ನೀಡುತ್ತಿರುವುದಾಗಿ ಆರೋಪಿಸಿ ವಿಡಿಯೊ ಮಾಡಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪ್ರಕರಣವು ಬೆಂಗಳೂರು ಮೂಲದ ಟೆಕಿ, ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣವನ್ನು ನೆನಪಿಸುವಂತಿದೆ.

6.57 ನಿಮಿಷದ ವಿಡಿಯೊದಲ್ಲಿ ಮಾನವ್ ಅವರು, ‘ಪುರುಷರಿಗೆ ರಕ್ಷಣೆ ನೀಡುವ ಕಾನೂನಿನ ಅಗತ್ಯವಿದೆ’ ಎಂದು ಮನವಿ ಮಾಡಿದ್ದಾರೆ.

‘ಸಾಯಲು ಯಾವುದೇ ಭಯ ಇಲ್ಲ...ಪುರುಷರ ಬಗ್ಗೆಯೂ ಯೋಚಿಸಿ.. ಅವರು ಏಕಾಂಗಿಯಾಗಿದ್ದಾರೆ’ ಎಂದು ನೇಣು ಹಾಕಿಕೊಂಡ ನಂತರ ಅವರು ಹೇಳಿರುವ ದೃಶ್ಯ ವಿಡಿಯೊದಲ್ಲಿದೆ.

ವರದಿಗಳ ಪ್ರಕಾರ, ಮಾನವ್ ಅವರು ಸೋಮವಾರವೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎರಡು ದಿನಗಳ ನಂತರ ಅವರ ಸಹೋದರಿಯು ಮೊಬೈಲ್‌ನಲ್ಲಿದ್ದ ವಿಡಿಯೊ ನೋಡಿದ್ದಾರೆ. ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಅವರಿಗೆ ವಿಷಯ ತಿಳಿದಿದೆ.



ಮಾನವ್ ಅವರಿಗೆ ಕಳೆದ ವರ್ಷ ಜನವರಿಯಲ್ಲಿ ವಿವಾಹವಾಗಿತ್ತು. ಈ ಮಧ್ಯೆ ಮಾನವ್ ಅವರ ಆರೋಪವನ್ನು ಪತ್ನಿ ಅಲ್ಲಗಳೆದಿದ್ದಾರೆ.

‘ಪ್ರಧಾನಿ ಪದವಿ ವಿವರ ಕೋರ್ಟ್‌ಗೆ ತೋರಿಸುತ್ತೇವೆ’

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಕೋರ್ಟ್‌ಗೆ ತೋರಿಸಲು ಸಿದ್ಧ. ಆದರೆ, ಆರ್‌ಟಿಐ ಅನ್ವಯ ಅಪರಿಚಿತರಿಗೆ ಒದಗಿಸುವುದಿಲ್ಲ’ ಎಂದು ದೆಹಲಿ ವಿಶ್ವವಿದ್ಯಾಲಯವು (ಡಿ.ಯು) ಗುರುವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಪ್ರಧಾನಿಯವರ ಪದವಿ ಕೋರ್ಸ್‌ಗೆ ಸಂಬಂಧಿತ ವಿವರ ನೀಡಬೇಕು ಎಂದು ಕೇಂದ್ರ ಮಾಹಿತಿ ಆಯೋಗವು ಹಿಂದೆ (ಸಿಐಸಿ) ನೀಡಿದ್ದ ಆದೇಶವನ್ನು ಡಿಯು ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಇದಕ್ಕೆ ಪೂರಕವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಮೂರ್ತಿ ಸಚಿನ್ ದತ್ತಾ ಅವರಿದ್ದ ಪೀಠಕ್ಕೆ ಈ ಮಾಹಿತಿ ನೀಡಿದರು.

‘ಕೋರ್ಟ್‌ಗೆ ಅಗತ್ಯ ವಿವರವನ್ನು ಒದಗಿಸಲು ಡಿ.ಯುಗೆ ಯಾವುದೇ ತಕರಾರು ಇಲ್ಲ. ಆದರೆ, ಅಪರಿಚಿತರು ಈ ದಾಖಲೆಗಳನ್ನು ಪರಿಶೀಲಿಸಲು ಅವಕಾಶವಿಲ್ಲ. ಖಾಸಗೀತನದ ಹಕ್ಕು ರಕ್ಷಿಸುವ ಆಧಾರದಲ್ಲಿ ಸಿಐಸಿ ಅವರು ನೀಡಿರುವ ಆದೇಶವನ್ನು ರದ್ದುಪಡಿಸಬೇಕು’ ಎಂದು ಮೆಹ್ತಾ ಅವರು ಕೋರಿದರು.

ಈ ಕುರಿತು ಆದೇಶವನ್ನು ಹೈಕೋರ್ಟ್‌ನ ನ್ಯಾಯಪೀಠವು ಕಾಯ್ದಿರಿಸಿದೆ.

‘ಈಗ ಪ್ರಧಾನಿ ಆಗಿರುವ ಹಳೆಯ ವಿದ್ಯಾರ್ಥಿಯ ಪದವಿ ವಿವರ ಕೇಳಲಾಗುತ್ತಿದೆ. ವಿ.ವಿಗೆ ಇಲ್ಲಿ ಗೋಪ್ಯವಾಗಿ ಇಡುವುದು ಏನೂ ಇಲ್ಲ. ವರ್ಷವಾರು ದಾಖಲೆಗಳಿವೆ. ಕೋರ್ಟ್‌ಗೆ ತೋರಿಸಲು ತಕರಾರೂ ಇಲ್ಲ. ಇದು, 1978ನೇ ಸಾಲಿನ ಕಲಾ ನಿಕಾಯದ ಪದವಿಗೆ ಸಂಬಂಧಿಸಿದ್ದಾಗಿದೆ’ ಎಂದು ವಿವರಿಸಿದರು.

ಸ್ವಚ್ಛತಾ ಅಭಿಯಾನ ಆರಂಭ

ಪ್ರಯಾಗರಾಜ್ (ಪಿಟಿಐ): ಮಹಾ ಕುಂಭಮೇಳ ಮುಕ್ತಾಯವಾಗಿದ್ದು, ಪ್ರಯಾಗರಾಜ್‌ನಲ್ಲಿ 15 ದಿನಗಳ ವಿಶೇಷ ಸ್ವಚ್ಛತಾ ಅಭಿಯಾನವನ್ನು ಪ್ರಾರಂಭಿಸಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ಶುಕ್ರವಾರ ತಿಳಿಸಿದೆ.

ಮೇಳದ ಬಳಿಕ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಮಹಾ ಕುಂಭಮೇಳದ ಸಮಯದಲ್ಲಿ ನೈರ್ಮಲ್ಯ ಕಾಪಾಡಿದ ಕಾರ್ಮಿಕರ ಸೇವೆಗಾಗಿ ಅವರನ್ನು ಸನ್ಮಾನಿಸಿ, ಕುಂಭಮೇಳದ ಪ್ರದೇಶವನ್ನು ಸ್ವಚ್ಛಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಂಕ್ಷಿಪ್ತ ಸುದ್ದಿ

ಸಂಭಲ್: ಸ್ಥಳೀಯರ ಹೇಳಿಕೆ ದಾಖಲು

ಸಂಭಲ್ (ಪಿಟಿಐ): ಮಸೀದಿ ಸಮೀಕ್ಷೆ ವೇಳೆ ಸಂಭಲ್‌ನಲ್ಲಿ ನಡೆದ ಹಿಂಸಾಚಾರದ ಕುರಿತು ತನಿಖೆ ನಡೆಸುತ್ತಿರುವ ನ್ಯಾಯಾಂಗ ಆಯೋಗದ ಸದಸ್ಯರು ಶುಕ್ರವಾರ ನಗರಕ್ಕೆ ಭೇಟಿ ನೀಡಿ ಘಟನೆಗೆ ಸಂಬಂಧಿಸಿದಂತೆ ಸ್ಥಳೀಯರ ಹೇಳಿಕೆಗಳನ್ನು ದಾಖಲಿಸಿಕೊಂಡರು.

ಕಳೆದ ವರ್ಷ ನ.24ರಂದು ಶಾಹಿ ಜಾಮಾ ಮಸೀದಿ ಸಮೀಕ್ಷೆ ವೇಳೆ ನಡೆದ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟು, ಅನೇಕರು ಗಾಯಗೊಂಡಿದ್ದರು. ಈ ಬಗ್ಗೆ ತನಿಖೆ ನಡೆಸಲು ಉತ್ತರ ಪ್ರದೇಶ ಸರ್ಕಾರವು ಡಿ.11ರಂದು ಮೂವರು ಸದಸ್ಯರನ್ನೊಳಗೊಂಡ ನ್ಯಾಯಾಂಗ ಆಯೋಗವನ್ನು ರಚಿಸಿತ್ತು.

ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಅರೋರ, ನಿವೃತ್ತ ಐಪಿಎಸ್ ಅಧಿಕಾರಿ ಅರವಿಂದ ಕುಮಾರ್ ಜೈನ್ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಅಮಿತ್ ಮೋಹನ್ ಪ್ರಸಾದ್ ಅವರು ಆಯೋಗದ ಸದಸ್ಯರಾಗಿದ್ದಾರೆ. ಈ ಹಿಂದೆಯೂ ನಗರಕ್ಕೆ ಭೇಟಿ ನೀಡಿದ್ದ ಆಯೋಗವು ಅಧಿಕಾರಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿತ್ತು.

ಮಸೀದಿ ಆವರಣ ಸ್ವಚ್ಛಗೊಳಿಸಲು ಅನುಮತಿ



(ಪ್ರಯಾಗರಾಜ್ ವರದಿ): ಉತ್ತರ ಪ್ರದೇಶದ ಸಂಭಲ್‌ನಲ್ಲಿರುವ ಜಾಮಾ ಮಸೀದಿಯ ಆವರಣವನ್ನು ಸ್ವಚ್ಛಗೊಳಿಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಅಲಹಾಬಾದ್ ಹೈಕೋರ್ಟ್ ಶುಕ್ರವಾರ ನಿರ್ದೇಶಿಸಿದೆ. ಆದರೆ, ಮಸೀದಿಗೆ ಬಣ್ಣ ಬಳಿಯಲು ನ್ಯಾಯಾಲಯ ಅನುಮತಿ ನೀಡಿಲ್ಲ. ರಂಜಾನ್ ಆರಂಭವಾಗಲಿರುವ ಕಾರಣ ಮಸೀದಿ ಸ್ವಚ್ಛಗೊಳಿಸಿ ಬಣ್ಣ ಬಳಿಯಲು ಅವಕಾಶ ನೀಡುವಂತೆ ಕೋರಿ ಮಸೀದಿಯ ನಿರ್ವಹಣಾ ಸಮಿತಿಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು.

ತೆಲಂಗಾಣ: ರಕ್ಷಣಾ ಕಾರ್ಯದಲ್ಲಿ ರೈಲ್ವೆ ಇಲಾಖೆ ಭಾಗಿ

ನಾಗರಕರ್ನೂಲ್ (ತೆಲಂಗಾಣ) (ಪಿಟಿಐ): ಶ್ರೀಶೈಲಂ ಎಡದಂಡೆ ಕಾಲುವೆಯಡಿ (ಎಸ್‌ಎಲ್‌ಬಿಸಿ) ಸಿಲುಕಿರುವ 8 ಸಿಬ್ಬಂದಿಯ ರಕ್ಷಣೆಗಾಗಿ ಕಾರ್ಯಾಚರಣೆ ನಡೆಸುತ್ತಿರುವ ತಂಡದೊಂದಿಗೆ ದಕ್ಷಿಣ ಕೇಂದ್ರ ರೈಲ್ವೆಯು ಜೊತೆಗೂಡಿದೆ.

ಪ್ಲಾಸ್ಮಾ ಕಟರ್ ಮತ್ತು ಬ್ರೋಕೋ ಕಟಿಂಗ್ ಮಷಿನ್‌ಗಳ ಮೂಲಕ ಭಾರಿ ಗಾತ್ರದ ಲೋಹಗಳನ್ನು ತುಂಡರಿಸುವ ಪರಿಣತರು ರೈಲ್ವೆಯಲ್ಲಿದ್ದಾರೆ ಎಂದು ದಕ್ಷಿಣ ಕೇಂದ್ರ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ಎ. ಶ್ರೀಧರ್ ಅವರು ಹೇಳಿದ್ದಾರೆ. ‘ರೈಲ್ವೆಯ ಎರಡು ತಂಡಗಳು ಘಟನಾ ಸ್ಥಳಕ್ಕೆ ಗುರುವಾರ ತಲುಪಿದ್ದು, ಶುಕ್ರವಾರವೂ ಕಾರ್ಯಾಚರಣೆ ಮುಂದುವರಿದಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಎರಡು ದಿನಗಳಲ್ಲಿ ಕಾರ್ಯಾಚರಣೆ ಪೂರ್ಣಗೊಳ್ಳಬಹುದು’ ಎಂದು ತೆಲಂಗಾಣ ಜಲಸಂಪನ್ಮೂಲ ಸಚಿವ ಉತ್ತಮ್ ಕುಮಾರ್ ರೆಡ್ಡಿ ಗುರುವಾರ ಹೇಳಿದ್ದರು.



ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು – ಪಿಟಿಐ ಚಿತ್ರ

ನಕ್ಸಲ್ ಮುಖಂಡನ ಬಂಧನ

ನವದೆಹಲಿ (ಪಿಟಿಐ): ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯೊಂದಿಗೆ ನಂಟು ಹೊಂದಿದ ಸಂಘಟನೆಯ ಉನ್ನತ ಮುಖಂಡನನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದಾರೆ.

ಛತ್ತೀಸಗಢದಲ್ಲಿ ಭಯೋತ್ಪಾದನಾ ಚಟುವಟಿಕೆಗೆ ಹಣಕಾಸು ನೆರವು ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೂಲವಾಸಿ ಬಚಾವೊ ಮಂಚ್ (ಎಂಬಿಎಂ)ನ ನಾಯಕ ರಾಘು ಮಿದಿಯಾಮಿ ಅವರನ್ನು ಗುರುವಾರ ವಶಕ್ಕೆ ಪಡೆಯಲಾಗಿದೆ ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

ಎಂಬಿಎಂ ಸಂಘಟನೆಯನ್ನು ಛತ್ತೀಸಗಢ ಸರ್ಕಾರವು ನಿಷೇಧಿಸಿದೆ. ಎಂಬಿಎಂ ಸಂಘಟನೆಯು ಸಿಪಿಐ (ಮಾವೋವಾದಿ) ಸಂಘಟನೆಗಾಗಿ ಹಣ ಸಂಗ್ರಹಿಸಿ, ವಿತರಿಸುವ ಕೆಲಸದಲ್ಲಿ ತೊಡಗಿಸಿಕೊಂಡಿತ್ತು.

ಜಾಮೀನಿನ ಮೇಲೆ ಹೊರಗಿದ್ದ ದುಷ್ಕರ್ಮಿ • ಭತ್ತದ ಗದ್ದೆಯಲ್ಲಿ ಅಡಗಿದ್ದ

ಪುಣೆ: ಅತ್ಯಾಚಾರ ಆರೋಪಿ ಬಂಧನ

ಪುಣೆ (ಪಿಟಿಐ): ಇಲ್ಲಿನ ಸ್ವಾರ್ಗೇಟ್ ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಬಸ್‌ನಲ್ಲಿ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಪರಾರಿಯಾಗಿದ್ದ ಆರೋಪಿಯನ್ನು ಶಿರೂರ್ ತಾಲ್ಲೂಕಿನ ಭತ್ತದ ಗದ್ದೆಯೊಂದರಲ್ಲಿ ಪೊಲೀಸರು ಶುಕ್ರವಾರ ಬೆಳಗಿನ ಜಾವ ಬಂಧಿಸಿದ್ದಾರೆ.

ದತ್ತಾತ್ರೇಯ ರಾಮದಾಸ್ ಗಾಡೆ ಬಂಧಿತ. ಕೃತ್ಯದ ಬಳಿಕ ಈತ ಶಿರೂರ್ ತಾಲ್ಲೂಕಿನ ಗುನತ್ ಗ್ರಾಮದ ಭತ್ತದ ಗದ್ದೆಯಲ್ಲಿ ಅಡಗಿಕೊಂಡಿದ್ದ. ಮನೆಯೊಂದರಲ್ಲಿ ಊಟ, ನೀರು ಕೇಳಿದ್ದ. ಈ ಸುಳಿವು ಆಧರಿಸಿ ಪೊಲೀಸರು ತೀವ್ರ ಶೋಧ ನಡೆಸಿದ್ದರು.

ಬಂಧಿತನ ಕತ್ತಿನಲ್ಲಿ ಗಾಯದ ಗುರುತಿದೆ. ಈತನೇ ಕೃತ್ಯ ಎಸಗಿರಬಹುದು ಎಂಬ ಶಂಕೆಯಲ್ಲಿ ಮಧ್ಯರಾತ್ರಿ 2 ಗಂಟೆ ವೇಳೆಗೆ ವಶಕ್ಕೆ ಪಡೆದು, ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು. ಬಳಿಕ ಕೋರ್ಟ್‌ಗೆ ಹಾಜರುಪಡಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

‘ಈತನ ಬಂಧನಕ್ಕೆ 13 ತಂಡಗಳನ್ನು ರಚಿಸಲಾಗಿತ್ತು. ಡ್ರೋನ್ ಹಾಗೂ ಶ್ವಾನದಳದ ನೆರವನ್ನೂ ಪಡೆಯಲಾಗಿತ್ತು. ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದ ಈತನ ಚಲನವಲನ ಗುರುತಿಸಿದ್ದ ಪೊಲೀಸರು, ಗುನತ್‌ಗೆ ತೆರಳಿ ಶೋಧ ನಡೆಸಿದ್ದರು.



ಈತನಿಗೆ ಅಪರಾಧದ ಹಿನ್ನೆಲೆಯಿದೆ. 12ಕ್ಕೂ ಹೆಚ್ಚು ಕಳವು ಪ್ರಕರಣ, ದರೋಡೆ, ಸರ ದೋಚಿದ ಪ್ರಕರಣಗಳು ದಾಖಲಾಗಿವೆ. ಅಪರಾಧ ಕೃತ್ಯವೊಂದರಲ್ಲಿ ಬಂಧಿತನಾಗಿದ್ದು, 2019ರಿಂದಲೂ ಜಾಮೀನಿನ ಮೇಲೆ ಹೊರಗಿದ್ದ ಎಂದು ಪೊಲೀಸರು ವಿವರಿಸಿದ್ದಾರೆ.

‘ಆರೋಪಿಯನ್ನು ಕೋರ್ಟ್‌ಗೆ ಹಾಜರುಪಡಿಸಲಿದ್ದು, ತನಿಖೆಗೆ ವಿಶೇಷ ತಂಡ ರಚಿಸಿ, ಕ್ಷಿಪ್ರಗತಿ ಕೋರ್ಟ್‌ನಲ್ಲಿ ವಿಚಾರಣೆ ನಡೆಸಲಾಗುವುದು. ವಿಶೇಷ ಪ್ರಾಸಿಕ್ಯೂಟರ್ ನೇಮಕಕ್ಕೂ ಕ್ರಮ ವಹಿಸಲಾಗುವುದು’ ಎಂದು ಪುಣೆಯ ಪೊಲೀಸ್ ಕಮಿಷನರ್ ಅಮಿತೇಶ್ ಕುಮಾರ್ ಅವರು ತಿಳಿಸಿದರು.

‘ಶಕ್ತಿ ಮಸೂದೆ’ ಜಾರಿಗೆ ಆಗ್ರಹ

ಮುಂಬೈ (ಪಿಟಿಐ): ಅತ್ಯಾಚಾರ, ದೌರ್ಜನ್ಯ ಕೃತ್ಯದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಅನುವಾಗುವಂತೆ ಶಕ್ತಿ ಮಸೂದೆ ಜಾರಿಗೊಳಿಸುವಂತೆ ವಿರೋಧಪಕ್ಷಗಳು ಒತ್ತಾಯಿಸಿವೆ.

ಮಹಿಳೆ, ಮಕ್ಕಳ ಮೇಲಿನ ದೌರ್ಜನ್ಯ ಕೃತ್ಯಗಳಲ್ಲಿ ಮರಣದಂಡನೆ ವಿಧಿಸಲು ಅವಕಾಶವುಳ್ಳ ಶಕ್ತಿ ಮಸೂದೆ ಜಾರಿಗೊಳಿಸಲಿ ಎಂದು ಕಾಂಗ್ರೆಸ್, ಎನ್‌ಸಿಪಿ (ಎಸ್‌ಪಿ) ಆಗ್ರಹಪಡಿಸಿವೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಎನ್‌ಸಿಪಿ (ಎಸ್‌ಪಿ) ನಾಯಕ ಅನಿಲ್ ದೇಶ್‌ಮುಖ್, ‘ಎಂವಿಎ ಸರ್ಕಾರವಿದ್ದಾಗ ನಾಲ್ಕು ವರ್ಷಗಳ ಹಿಂದೆ ಶಾಸನಸಭೆಯು ಮಸೂದೆಯನ್ನು ಅಂಗೀಕರಿಸಿದೆ. ಕೇಂದ್ರ ಸರ್ಕಾರದ ಅನುಮೋದನೆ ಬಾಕಿ ಇದೆ’ ಎಂದು ತಿಳಿಸಿದರು.

‘ಶಕ್ತಿ ಮಸೂದೆ ಜಾರಿಗೊಳಿಸದಿರುವುದು ಮಹಾಯುತಿ ಸರ್ಕಾರದ ವೈಫಲ್ಯ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ವಿಜಯ್ ವಾಡೆಟ್ಟಿವಾರ್ ಟೀಕಿಸಿದ್ದಾರೆ. ಮಸೂದೆಗೆ ರಾಷ್ಟ್ರಪತಿಗಳ ಅಂಕಿತ ದೊರೆತಿಲ್ಲ. ಮಾ.3ರಿಂದ ಆರಂಭವಾಗುವ ಅಧಿವೇಶನದಲ್ಲೇ ಮರು ಪ್ರಸ್ತಾಪಿಸಿ, ಮಸೂದೆ ಜಾರಿಗೆ ಕ್ರಮವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಅದು ಪರಸ್ಪರ ಒಪ್ಪಿತ ದೈಹಿಕ ಸಂಬಂಧ–ವಕೀಲ

‘ಆರೋಪಿ ಮತ್ತು ಮಹಿಳೆ ನಡುವೆ ದೈಹಿಕ ಸಂಬಂಧಕ್ಕೆ ಪರಸ್ಪರ ಒಪ್ಪಿಗೆ ಇತ್ತು’ ಎಂದು ಪುಣೆಯ ಅತ್ಯಾಚಾರ ಪ್ರಕರಣದ ಆರೋಪಿ ಪರ ವಕೀಲರು ಪ್ರತಿಪಾದಿಸಿದ್ದಾರೆ.

‘ಆರೋಪಿ ಮೇಲೆ ಈ ಹಿಂದೆ ದರೋಡೆ ಪ್ರಕರಣಗಳಿದ್ದವು; ಅತ್ಯಾಚಾರ ಪ್ರಕರಣವಲ್ಲ. ಆಗಾಗ್ಗೆ ಅಪರಾಧ ಕೃತ್ಯ ನಡೆಸಿದ್ದರೂ, ಯಾವುದರಲ್ಲೂ ಶಿಕ್ಷೆಗೆ ಒಳಗಾಗಿರಲಿಲ್ಲ. ಈ ಕೃತ್ಯ ನಡೆದಿರುವುದು ಬೆಳಿಗ್ಗೆ 5.45 ಗಂಟೆಗೆ. ಆಕೆ ಸಹಾಯಕ್ಕಾಗಿ ಕೂಗಬಹುದಿತ್ತು. ಬಲವಂತದಿಂದ ಏನೂ ಆಗಿಲ್ಲ’ ಎಂದು ಆರೋಪಿ ಪರ ವಕೀಲ ವಾಜಿದ್ ಖಾನ್ ಅವರು ವಿಚಾರಣೆ ಬಳಿಕ ಹೇಳಿದರು. ಇದಕ್ಕೆ ಮುನ್ನ ಆರೋಪಿಯನ್ನು ಪುಣೆ ಜಿಲ್ಲಾ ಸೆಷನ್ಸ್ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು. ಕೋರ್ಟ್ ಆತನನ್ನು 12 ದಿನಗಳ ಅವಧಿಗೆ ಪೊಲೀಸರ ವಶಕ್ಕೆ ಒಪ್ಪಿಸಿತು.

ಮಮತಾ ಆರೋಪ: ಇ.ಸಿಗೆ ಸುವೇಂದು ಪತ್ರ

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸಿರುವ ಬಗ್ಗೆ ತಾವು ಆಯೋಗಕ್ಕೆ ಪತ್ರ ಬರೆದಿರುವುದಾಗಿ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಶುಕ್ರವಾರ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿಗೆ (ಸಿಇಒ) ಮತ್ತೊಂದು ಪತ್ರ ಹಸ್ತಾಂತರಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುವೇಂದು, ‘ಅಧಿಕಾರಿಯೊಬ್ಬರು ತಮ್ಮ ಕೆಲಸದ ಭಾಗವಾಗಿ ನಿರ್ದಿಷ್ಟ ಇಲಾಖೆ ಅಥವಾ ಸಚಿವಾಲಯದಲ್ಲಿ ಕೆಲಸ ಮಾಡಿದ್ದರೆ ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತಿಲ್ಲ. ಹೆಚ್ಚುವರಿ ಚುನಾವಣಾ ಅಧಿಕಾರಿಗಳು ಮತ್ತು ಇತರ ಚುನಾವಣಾ ಅಧಿಕಾರಿಗಳ ಪ್ರಾಮಾಣಿಕತೆಯ ಬಗ್ಗೆ ಮುಖ್ಯಮಂತ್ರಿ ಆಧಾರರಹಿತ ಆರೋಪಗಳನ್ನು ಮಾಡಿದ್ದಾರೆ’ ಎಂದು ಹೇಳಿದರು.



‘ಅವರು (ಬ್ಯಾನರ್ಜಿ) ರಾಜ್ಯದ ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ನಿಷ್ಕ್ರಿಯಗೊಳಿಸಿದ್ದಾರೆ. ಈಗ ಪಾರದರ್ಶಕ ರೀತಿಯಲ್ಲಿ ಮಾಡಲಾದ ಸಿಇಸಿ ನೇಮಕವನ್ನು ಪ್ರಶ್ನಿಸುತ್ತಿದ್ದಾರೆ’ ಎಂದು ಟೀಕಿಸಿದರು. ‘ಮತದಾರರ ಪಟ್ಟಿಯಲ್ಲಿ ಸುಮಾರು 16 ಲಕ್ಷ ಮತದಾರರ ಹೆಸರುಗಳನ್ನು ಎರಡೆರಡು ಬಾರಿ ನಮೂದಿಸಲಾಗಿದೆ. ದೇಶಕ್ಕೆ ಅಕ್ರಮವಾಗಿ ನುಸುಳಿ ಬಂದಿರುವವರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸುವಲ್ಲಿ ಆಡಳಿತಾರೂಢ ಟಿಎಂಸಿ ಪ್ರಮುಖ ಪಾತ್ರ ವಹಿಸಿದೆ’ ಎಂದು ಅವರು ಆರೋಪಿಸಿದರು.

‘ಕಳಪೆ ಔಷಧ ಕಡಿವಾಣಕ್ಕೆ ಪ್ರತ್ಯೇಕ ನೀತಿ’

ಒಂದನೇ ಪುಟದಿಂದ...

‘ಈ ಜನವರಿಯಲ್ಲಿ 1,133 ಔಷಧ ಮಾದರಿಗಳನ್ನು ವಿಶ್ಲೇಷಣೆಗೆ ಗುರಿಪಡಿಸಲಾಗಿತ್ತು. ಅವುಗಳಲ್ಲಿ 106 ಔಷಧ ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎನ್ನುವುದು ಪರೀಕ್ಷೆಯಿಂದ ದೃಢಪಟ್ಟಿದೆ. ಫೆಬ್ರುವರಿ ತಿಂಗಳಲ್ಲಿ 1,841 ಔಷಧ ಮಾದರಿಗಳನ್ನು ವಿಶ್ಲೇಷಣೆಗೆ ಪಡೆಯಲಾಗಿದ್ದು, ಅವುಗಳಲ್ಲಿ ಈವರೆಗೆ 58 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲವೆಂಬ ವರದಿಗಳು ಬಂದಿವೆ. ಇಂತಹ ಔಷಧಗಳ ಬಗ್ಗೆ ಸಾರ್ವಜನಿಕರು ಹಾಗೂ ಮಾರಾಟಗಾರರಿಗೆ ಮಾಹಿತಿ ಒದಗಿಸುವ ಆ್ಯಪ್ ಒಂದನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು’ ಎಂದು ತಿಳಿಸಿದರು.

‘ಕಾಂತಿವರ್ಧಕಗಳ ಗುಣಮಟ್ಟವನ್ನು ಪರೀಕ್ಷಿಸಲು 2024ರ ಡಿಸೆಂಬರ್ ತಿಂಗಳಲ್ಲಿ 262 ಕಾಂತಿವರ್ಧಕ ಮಾದರಿಗಳನ್ನು ವಿಶ್ಲೇಷಣೆಗೆ ಪಡೆಯಲಾಗಿದೆ. ಅವುಗಳಲ್ಲಿ 120 ಮಾದರಿಗಳ ವರದಿ ಬಂದಿದ್ದು, ಅವು ಉತ್ತಮ ಗುಣಮಟ್ಟದ ಕಾಂತಿವರ್ಧಕಗಳಾಗಿವೆ. ಉಳಿದ ಮಾದರಿಗಳು ವಿಶ್ಲೇಷಣಾ ಹಂತದಲ್ಲಿವೆ. ಔಷಧ ಮತ್ತು ಕಾಂತಿವರ್ಧಕ ಕಾಯ್ದೆ 1940 ಮತ್ತು ಅದರಡಿಯ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ 75 ಸಂಸ್ಥೆಗಳ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅನುಮತಿ ನೀಡಲಾಗಿದೆ’ ಎಂದು ಹೇಳಿದರು.

‘ಆ್ಯಂಟಿಬಯಾಟಿಕ್ ಔಷಧಗಳ ದುರ್ಬಳಕೆ ತಡೆಗೆ ಸಂಬಂಧಿಸಿದಂತೆ ಫೆ.17ರಿಂದ ಫೆ.19ರವರೆಗೆ ರಾಜ್ಯದಾದ್ಯಂತ ಔಷಧ ಮಳಿಗೆಗಳಲ್ಲಿ ಅಧಿಕಾರಿಗಳು ವಿಶೇಷ ತಪಾಸಣೆ ನಡೆಸಿದ್ದಾರೆ. 52 ಔಷಧ ಮಳಿಗೆಗಳಲ್ಲಿ ವೈದ್ಯರ ಶಿಫಾರಸು ಇಲ್ಲದೆ ಆ್ಯಂಟಿಬಯಾಟಿಕ್ ಔಷಧ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದೆ. ಅವುಗಳ ವಿರುದ್ಧ ತನಿಖೆ ಪ್ರಗತಿಯಲ್ಲಿದೆ’ ಎಂದು ವಿವರಿಸಿದರು.

‘ಕೆಲ ಕೇಕ್ ಮಾದರಿ ಅಸುರಕ್ಷಿತ’

‘ಕೇಕ್ ತಯಾರಿಕೆಗೆ ಬಳಸುತ್ತಿರುವ ಕೃತಕ ಬಣ್ಣಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು 2024ರ ಆಗಸ್ಟ್‌ನಲ್ಲಿ 295 ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿದ್ದಾರೆ. ಅವುಗಳಲ್ಲಿ 12 ಮಾದರಿಗಳು (ಶೇ 4.06 ರಷ್ಟು) ಅಸುರಕ್ಷಿತವೆಂಬ ವರದಿ ಬಂದಿತ್ತು. ಬಳಿಕ ನೈಸರ್ಗಿಕ ಬಣ್ಣ ಬಳಸುವಂತೆ ಹಾಗೂ ನಿಗದಿತ ಮಿತಿಯೊಳಗೆ ಕೃತಕ ಬಣ್ಣ ಬಳಸುವಂತೆ ಬೇಕರಿ ಉದ್ದಿಮೆದಾರರಿಗೆ ಜಾಗೃತಿ ಮೂಡಿಸಲಾಗಿತ್ತು. 2025ರ ಜನವರಿಯಲ್ಲಿ ನಡೆದ ವಿಶೇಷ ಅಭಿಯಾನದಲ್ಲಿ ಕೇಕ್‌ಗಳ 603 ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಅವುಗಳಲ್ಲಿ 7 ಮಾದರಿಗಳು (ಶೇ 1.16 ರಷ್ಟು) ಅಸುರಕ್ಷಿತವೆಂಬ ವರದಿ ಬಂದಿವೆ’ ಎಂದು ಸಚಿವರು ಹೇಳಿದರು.

‘ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ವರ್ಷ ಕೇಕ್‌ಗಳಲ್ಲಿ ಕೃತಕ ಬಣ್ಣ ಬಳಕೆ ಕಡಿಮೆಯಾಗಿದೆ. ಇದು ಉತ್ತಮ ಬೆಳವಣಿಗೆ. ಅಲ್ಲದೆ, ಮುಂದಿನ ದಿನಗಳಲ್ಲೂ ಬೇಕರಿ ಉದ್ದಿಮೆದಾರರಿಗೆ ನೈಸರ್ಗಿಕ ಬಣ್ಣ ಬಳಸುವಂತೆ ಅರಿವು ಮೂಡಿಸಲಾಗುವುದು. ವಿಶ್ಲೇಷಣಾ ಕಾರ್ಯವನ್ನು ಮುಂದುವರಿಸಲಾಗುವುದು’ ಎಂದು ತಿಳಿಸಿದರು.



‘ನೀರಿನ ಮಾದರಿ ವಿಶ್ಲೇಷಣೆ’

‘ಫೆಬ್ರುವರಿಯಲ್ಲಿ ವಿಶೇಷ ಅಭಿಯಾನದಡಿ ಬಾಟಲಿಯಲ್ಲಿ ತುಂಬಿ ಮಾರಾಟ ಮಾಡುವ ನೀರಿನ 288 ಮಾದರಿಗಳನ್ನು ವಿಶ್ಲೇಷಣೆಗೆ ಸಂಗ್ರಹಿಸಲಾಗಿದೆ. ಅವುಗಳ ವಿಶ್ಲೇಷಣಾ ಪ್ರಕ್ರಿಯೆ ಪ್ರಗತಿಯಲ್ಲಿದೆ. ಅಲ್ಲದೆ, ಕರಿದ ಹಸಿರು ಬಟಾಣಿಗಳಲ್ಲಿ ಕೃತಕ ಬಣ್ಣಗಳ ಬಳಕೆ ಬಗ್ಗೆ ಖಚಿತಪಡಿಸಿಕೊಳ್ಳಲು, 106 ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಸಲ್ಲಿಸಲಾಗಿದೆ. ಅವುಗಳಲ್ಲಿ 31 ಮಾದರಿಗಳ ವಿಶ್ಲೇಷಣಾ ಕಾರ್ಯ ಪೂರ್ಣಗೊಂಡಿದ್ದು, 26 ಮಾದರಿಗಳು ಅಸುರಕ್ಷಿತವೆಂದು ವರದಿ ಬಂದಿದೆ. ಐದು ಮಾದರಿಗಳು ಮಾತ್ರ ಸುರಕ್ಷಿತವಾಗಿವೆ. ಉಳಿದ ಮಾದರಿಗಳ ವಿಶ್ಲೇಷಣಾ ಕಾರ್ಯ ಪ್ರಗತಿಯಲ್ಲಿದೆ’ ಎಂದು ದಿನೇಶ್ ಗುಂಡೂರಾವ್ ವಿವರಿಸಿದರು.

ದೇವನಾಗರಿ ಲಿಪಿಯಲ್ಲಿ ಬಂಜಾರ ಸಾಹಿತ್ಯ ರಚನೆಗೆ ನಿರ್ಣಯ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಬಂಜಾರ ಸಮುದಾಯದ ಭಾಷೆಗೆ ಅಧಿಕೃತ ಲಿಪಿ ಇಲ್ಲ. ಆದ್ದರಿಂದ, ದೇವನಾಗರಿ ಲಿಪಿ ಬಳಸಿಕೊಂಡು ಸಾಹಿತ್ಯ ರಚಿಸುವ ನಿರ್ಣಯ ಕೈಗೊಳ್ಳಲಾಗಿದೆ’ ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ ಹೇಳಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಕುವೆಂಪು ವಿಶ್ವವಿದ್ಯಾಲಯದ ವತಿಯಿಂದ ಇಲ್ಲಿನ ಸಹ್ಯಾದ್ರಿ ಕಲಾ ಕಾಲೇಜು ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಸಾಹಿತ್ಯ ಸಂಸ್ಕೃತಿ ಅನುಸಂಧಾನ’ ಕುರಿತ ರಾಜ್ಯ ಮಟ್ಟದ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ಬಂಜಾರ ಸಮುದಾಯದ ಭಾಷೆಗೆ ಲಿಪಿ ಕಂಡುಕೊಂಡು ಸಾಹಿತ್ಯ ರಚಿಸುವುದು ಕಷ್ಟ. ದೇವನಾಗರಿ ಲಿಪಿ ಬಳಸಿಕೊಂಡು ಸಾಹಿತ್ಯ ರಚಿಸಬಹುದು. ಈ ಬಗ್ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಜೊತೆ ಚರ್ಚಿಸಿ ವಿವಿಧ ರಾಜ್ಯಗಳಲ್ಲಿನ ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯ ರಚನೆಗೆ ಕ್ರಮ ಕೈಗೊಳ್ಳಲಾಗಿದೆ. ಸಮುದಾಯದ ಮೂಲದ ಬಗ್ಗೆ ಸಂಶೋಧನೆ ಆಗಬೇಕಿದೆ. ಬಂಜಾರ ಭಾಷೆಗೂ ಸ್ಥಾನಮಾನ ಸಿಗಬೇಕು. ಭಾಷೆಗೆ ಒತ್ತು ಕೊಡದಿದ್ದರೆ ಸಂಸ್ಕೃತಿ ಹಾಗೂ ಜನಾಂಗವೇ ನಶಿಸುತ್ತದೆ’ ಎಂದರು.

‘ಮೂಲತಃ ಅಲೆಮಾರಿ ಆಗಿರುವ ಬಂಜಾರ ಸಮುದಾಯವನ್ನು ಬ್ರಿಟಿಷರು ಕ್ರಿಮಿನಲ್ (ಅಪರಾಧ ಎಸಗುವ ಬುಡಕಟ್ಟು) ಟ್ರೈಬ್ ರೀತಿ ಕಂಡರು. ಹೀಗಾಗಿ ಸ್ವಾತಂತ್ರ್ಯ ಚಳವಳಿಯಲ್ಲಿನ ಸಕ್ರಿಯತೆ ಹಾಗೂ ಬ್ರಿಟಿಷರಿಗೆ ಸಮುದಾಯ ಒಡ್ಡಿದ ಪ್ರತಿರೋಧದ ಸಂಗತಿಗಳು ದಾಖಲೆಗಳಲ್ಲಿ ಇಲ್ಲ. ಅದನ್ನು ದಾಖಲಿಸಲು ಸಿದ್ಧತೆ ನಡೆಯುತ್ತಿದೆ’ ಎಂದು ಅಕಾಡೆಮಿ ಸದಸ್ಯ ಸಂಚಾಲಕ ಕೆ.ಎಚ್.ಉತ್ತಮ್ ಹೇಳಿದರು.



ವಿಚಾರಸಂಕಿರಣವನ್ನು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ ಉದ್ಘಾಟಿಸಿದರು. ಹಿರಿಯ ಸಾಹಿತಿ ಬಿ.ಟಿ.ಲಲಿತಾ ನಾಯ್ಕ್, ಪ್ರೊ.ಸಣ್ಣರಾಮ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜಿ.ಪ್ರಶಾಂತ್ ನಾಯಕ್, ಸಹ್ಯಾದ್ರಿ ಕಲಾ ಕಾಲೇಜಿನ ಪ್ರಭಾರ ಪ್ರಾಚಾರ್ಯ ಸಿರಾಜ್ ಅಹಮದ್, ಪ್ರಾಧ್ಯಾಪಕರಾದ ಮೋಹನ್ ಚಂದ್ರಗುತ್ತಿ, ಎಂ.ಹಾಲಮ್ಮ ಹಾಗೂ ಇತರರು ಉಪಸ್ಥಿತರಿದ್ದರು

ಪೋಕ್ಸೊ ಪ್ರಕರಣ: ಬಿಎಸ್‌ವೈಗೆ ಸಮನ್ಸ್

ಒಂದನೇ ಪುಟದಿಂದ...

ಆರೋಪಿಗಳಿಗೆ ಮಾರ್ಚ್ 15ರಂದು ಹಾಜರಾಗಲು ನಿರ್ದೇಶಿಸಲಾಗಿದೆ.

ಪ್ರಕರಣವೇನು?: ‘ನನ್ನ ಮಗಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಹಾಯ ಮಾಡಬೇಕು’ ಎಂದು ಬೇಡಿ ಬಂದಿದ್ದ ಸಂತ್ರಸ್ತ ಬಾಲಕಿಯ ತಾಯಿ (ಈಗ ಬದುಕಿಲ್ಲ) ನೀಡಿದ್ದ ದೂರಿನ ಅನುಸಾರ ಸದಾಶಿವನಗರದ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಆರ್‌ಎಂವಿ ಎರಡನೇ ಹಂತದಲ್ಲಿನ ಡಾಲರ್ಸ್ ಕಾಲೊನಿಯಲ್ಲಿರುವ ಯಡಿಯೂರಪ್ಪ ಅವರ ‘ಧವಳಗಿರಿ’ ನಿವಾಸದಲ್ಲಿ 2024ರ ಫೆಬ್ರುವರಿ 2ರಂದು ಬೆಳಗ್ಗೆ 11ರಿಂದ 11.30ರ ನಡುವೆ ‘ಬಾಲಕಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ’ ಎಂಬುದು ಆರೋಪ.

‘ಹೈಕಮಾಂಡ್ ಬೆದರಿಸಲು ತಂತ್ರ’

ಬಾಗಲಕೋಟೆ: ‘ಕಾಂಗ್ರೆಸ್ ಹೈಕಮಾಂಡ್ ಬೆದರಿಸಲು ಡಿಸಿಎಂ ಡಿ.ಕೆ.ಶಿವಕುಮಾರ್ ಈಶಾ ಯೋಗಕೇಂದ್ರದ ಕಾರ್ಯಕ್ರಮದಲ್ಲಿ, ಮಹಾಕುಂಭ ಮೇಳದಲ್ಲಿ ಪಾಲ್ಗೊಂಡಿದ್ದರೇ ಹೊರತು ಬಿಜೆಪಿ ಸೇರುವುದಕ್ಕಲ್ಲ’ ಎಂದು ಬಿಜೆಪಿ ಶಾಸಕ ಸಿದ್ದು ಸವದಿ ತಿಳಿಸಿದರು.

‘ಕರ್ನಾಟಕದ ಶಿಂದೆ ಯಾರೆಂಬುದು ಗೊತ್ತಾಗಲಿದೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜಕಾರಣದಲ್ಲಿ ಯಾವುದೂ ನಿಂತ ನೀರಲ್ಲ. ಕರ್ನಾಟಕದ ಆಡಳಿತ ಪಕ್ಷದಲ್ಲಿ ಏಕನಾಥ ಶಿಂದೆ ಯಾರೆಂಬುದು ಸದ್ಯ ಗೊತ್ತಾಗಲಿದೆ’ ಎಂದು ಬಿಜೆಪಿ ಮುಖಂಡ ಬಿ.ಶ್ರೀರಾಮುಲು ಹೇಳಿದರು.



ಶ್ರೀರಾಮುಲು

ಇಲ್ಲಿನ ಚಾಮುಂಡಿಬೆಟ್ಟದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ವೀರೇಂದ್ರ ಪಾಟೀಲ, ಡಿ.ದೇವರಾಜ ಅರಸು ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದನ್ನು ನೋಡಿದ್ದೇವೆ. ಮಹಾರಾಷ್ಟ್ರದಲ್ಲಿ ಕಂಡ ಕ್ಷಿಪ್ರ ರಾಜಕಾರಣವನ್ನು ರಾಜ್ಯದಲ್ಲೂ ನೋಡಲಿದ್ದೇವೆ’ ಎಂದರು.

‘ಶಿಂದೆ ರೀತಿ ಯಾರೂ ಬಿಜೆಪಿಗೆ ಹೋಗಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಸರ್ಕಾರ ಸುಭದ್ರವಾಗಿದ್ದು, ಐದು ವರ್ಷ ಆಡಳಿತ ನಡೆಸಲಿದೆ. ಮಹಾರಾಷ್ಟ್ರದ ಹಾಗೆ ಇಲ್ಲಿ ಯಾವ ಬೆಳವಣಿಗೆಗಳೂ ನಡೆಯುವುದಿಲ್ಲ. ಏಕನಾಥ ಶಿಂದೆ ರೀತಿ ಶಾಸಕರನ್ನು ಕರೆದುಕೊಂಡು ಯಾರೂ ಬಿಜೆಪಿಗೆ ಹೋಗುವುದಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಸತೀಶ ಜಾರಕಿಹೊಳಿ

‘ಬಿ.ವೈ.ವಿಜಯೇಂದ್ರ ಹೇಳಿದಂತೆ ಕಾಂಗ್ರೆಸ್‌ನಲ್ಲಿ ಯಾವ ಕ್ಷಿಪ್ರ ಕ್ರಾಂತಿಯೂ ನಡೆಯುವುದಿಲ್ಲ. ಬಿಜೆಪಿಯಲ್ಲೇ ಹಲವು ಬಣಗಳ ನಡುವೆ ಒಳಜಗಳವಿದೆ. ಅವರಲ್ಲೇ ಕ್ರಾಂತಿ ಆದರೂ ಆಗಬಹುದು. ಏಕನಾಥ ಶಿಂದೆ ರೀತಿ ಕಾಂಗ್ರೆಸ್ ನಾಯಕರೊಬ್ಬರು ಶಾಸಕರ ಪಡೆಯೊಂದಿಗೆ ಬಿಜೆಪಿ ಸೇರುತ್ತಾರೆ ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿರುವುದು ಹಾಸ್ಯಾಸ್ಪದ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಕಾಂಗ್ರೆಸ್ ಶಾಸಕರಿಗೇ ಅನುದಾನ ಇಲ್ಲ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಕಾಂಗ್ರೆಸ್‌ನಲ್ಲಿ ಇರುವ ಶಾಸಕರಿಗೇ ಅನುದಾನ ನೀಡಲು ಸರ್ಕಾರದ ಬಳಿ ಹಣ ಇಲ್ಲ. ಬೇರೆ ಪಕ್ಷದ ಶಾಸಕರನ್ನು ಕರೆದೊಯ್ದು ಏನು ಮಾಡುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯವಾಡಿದರು.

ಸಚಿವ ಜಮೀರ್ ಅಹಮದ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘138 ಶಾಸಕರಿದ್ದರೂ ಇವರ ಯೋಗ್ಯತೆಗೆ ಅಭಿವೃದ್ಧಿ ಇಲ್ಲವಾಗಿದೆ. ಅನುದಾನ ನೀಡದ ಬಗ್ಗೆ ಆಡಳಿತ ಪಕ್ಷದ ಶಾಸಕರೇ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಕ್ಷೇತ್ರದಲ್ಲಿ ತಲೆ ಎತ್ತಿ ಓಡಾಡದ ಸ್ಥಿತಿ ಇದೆ ಎಂದು ಹೇಳುತ್ತಿದ್ದಾರೆ. ಬೇರೆ ಪಕ್ಷದ ಶಾಸಕರನ್ನು ಕರೆದೊಯ್ದು ಪ್ರಯೋಜನ ಏನಿದೆ’ ಎಂದರು.

ಕನ್ನಡ ಉತ್ಸವಗಳಿಗೆ ಅನುದಾನದ ಕೊರತೆ ಇಲ್ಲ: ತಂಗಡಗಿ

ಹೊಸಪೇಟೆ (ವಿಜಯನಗರ): ‘500 ವರ್ಷಗಳ ಹಿಂದೆಯೇ ಕನ್ನಡದ ಗಟ್ಟಿ ನೆಲವಾಗಿದ್ದ ಹಂಪಿ ಇಂದು ಸಹ ಅದನ್ನು ಉಳಿಸಿಕೊಂಡಿದ್ದು, ಇಂತಹ ಉತ್ಸವಗಳಿಗೆ ಸರ್ಕಾರದ ಅನುದಾನದಲ್ಲಿ ಕೊರತೆ ಆಗುವುದಿಲ್ಲ’ ಎಂದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಇಲ್ಲಿ ಶುಕ್ರವಾರ ಹಂಪಿ ಉತ್ಸವ ಉದ್ಘಾಟಿಸಿ ಮಾತನಾಡಿ, ‘ಎಂ.ಪಿ. ಪ್ರಕಾಶ್ ಅವರು ಉತ್ಸವ ಸಂಸ್ಕೃತಿಗೆ ನಾಂದಿ ಹಾಡಿದರು. ಅವರ ಪ್ರೇರಣೆಯಿಂದ ಹಂಪಿಯ ಜತೆಗೆ ಆನೆಗುಂದಿ, ಕನಕಗಿರಿ ಸಹಿತ ಹಲವು ಉತ್ಸವಗಳನ್ನು ಆಚರಿಸಲಾಗುತ್ತಿದೆ’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ನಟ ರಮೇಶ್ ಅರವಿಂದ್, ನಟಿಯರಾದ ಪ್ರೇಮಾ, ಪೂಜಾ ಗಾಂಧಿ ಮಾತನಾಡಿದರು. ಜಿಲ್ಲೆಯ ಶಾಸಕರು ಹಾಜರಿದ್ದರು. ಫಲಪುಷ್ಪ ಪ್ರದರ್ಶನ ಸಹಿತ ಹಲವು ಪ್ರದರ್ಶನಗಳನ್ನು ಉದ್ಘಾಟಿಸಲಾಯಿತು. ಸಿಎಂ, ಡಿಸಿಎಂ, ಪ್ರವಾಸೋದ್ಯಮ ಸಚಿವರು ಗೈರಾಗಿದ್ದರು.

ತೆಲಂಗಾಣಕ್ಕೆ ನೀರು: ರೈತರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ವಿಜಯಪುರ: ತೆಲಂಗಾಣಕ್ಕೆ ಆಲಮಟ್ಟಿ, ನಾರಾಯಣಪುರ ಜಲಾಶಯದಿಂದ 1.27 ಟಿಎಂಸಿ ಅಡಿ ನೀರನ್ನು ಹರಿಬಿಟ್ಟ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಶುಕ್ರವಾರ ನಗರದಲ್ಲಿ ಅಖಂಡ ಕರ್ನಾಟಕ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರ ಪ್ರತಿಕೃತಿ ದಹಿಸಿದರು. ‘ರೈತರು ಸಂಕಷ್ಟದಲ್ಲಿರುವಾಗ ತೆಲಂಗಾಣಕ್ಕೆ ನೀರು ಬಿಟ್ಟಿರುವುದು ಅಕ್ಷಮ್ಯ, ಇದು ರೈತ ವಿರೋಧಿ’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಕಿಡಿಕಾರಿದರು.

ಉತ್ಪನ್ನಗಳ ಮೇಲೆ ಕನ್ನಡ ಕಡ್ಡಾಯ

ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ತಯಾರಾಗುವ ಉತ್ಪನ್ನಗಳ ಮೇಲೆ ಕನ್ನಡದಲ್ಲಿ ಹೆಸರು ಮುದ್ರಿಸುವುದನ್ನು ಕಡ್ಡಾಯಗೊಳಿಸಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಎಲ್ಲ ಕೈಗಾರಿಕಾ ಮತ್ತು ಗ್ರಾಹಕ ಉತ್ಪನ್ನಗಳ ಮೇಲೆ ಹೆಸರು ಮತ್ತು ಅವುಗಳ ಬಳಕೆಯ ವಿವರಗಳನ್ನು ಇತರೆ ಭಾಷೆಗಳ ಜತೆಗೆ ಕನ್ನಡದಲ್ಲೂ ಮುದ್ರಿಸಬೇಕು. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಯ ಪ್ರಕಾರ ಹೊರಡಿಸಲಾದ ಆದೇಶದ ಅನುಷ್ಠಾನ ಕುರಿತು ಜಾರಿ ಪ್ರಾಧಿಕಾರಗಳು ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚಿಸಲಾಗಿದೆ.

ಭಾಷೆಯು ನೆಲದ ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಒಂದು ಭಾಷೆ ಬೆಳೆಯಬೇಕಾದರೆ ಆ ನೆಲದಲ್ಲಿನ ಉತ್ಪಾದನೆ, ಮಾರುಕಟ್ಟೆ, ವ್ಯವಹಾರಗಳು ಸ್ಥಳೀಯ ಭಾಷೆಯಲ್ಲಿ ಇರಬೇಕು ಎಂಬ ಕಾರಣಕ್ಕಾಗಿ ಇಂತಹ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಇಲಾಖೆ ಹೇಳಿದೆ.



ನಿವೃತ್ತಿ ಉಪಧನ, ಪಿಂಚಣಿ ಮತ್ತು ಗಳಿಕೆ ರಜೆಯ ನಗದೀಕರಣದ ಸೌಲಭ್ಯಕ್ಕೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಕೇಂದ್ರ ಸಮಿತಿ ಸದಸ್ಯರು ಪ್ರತಿಭಟನ ನಡೆಸಿದರು — ಪ್ರಜಾವಾಣಿ ಚಿತ್ರ

ಪುನರಾರಂಭಿಸುವ ಕುರಿತು ನಾಗರಿಕ ವಿಮಾನಯಾನ ಸಚಿವರ ನೇತೃತ್ವದಲ್ಲಿ ದೆಹಲಿಯಲ್ಲಿ ಚರ್ಚೆ

‘ಎಚ್‌ಎಎಲ್ ವಿಮಾನ ನಿಲ್ದಾಣ: ಶೀಘ್ರ ಸಭೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವಿಮಾನ ನಿಲ್ದಾಣವನ್ನು ಪುನರಾರಂಭಿಸುವ ಕುರಿತು ಚರ್ಚಿಸಲು ಮುಂದಿನ ವಾರ ಸಭೆ ಕರೆಯಲಾಗುವುದು ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

‘ಮಾರ್ಚ್ ಎರಡನೇ ವಾರದಲ್ಲಿ ದೆಹಲಿಯಲ್ಲಿ ನಾಗರಿಕ ವಿಮಾನಯಾನ ಸಚಿವರ ನೇತೃತ್ವದಲ್ಲಿ ಸಭೆ ನಡೆಯಲಿದೆ. ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ, ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ), ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಬಿಐಎಎಲ್) ಮತ್ತು ಎಚ್‌ಎಎಲ್‌ನ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

> **‘ಮುಚ್ಚುವುದು ವಿವೇಕದ ನಿರ್ಧಾರವಲ್ಲ’**
>
> ‘ಎಚ್‌ಎಎಲ್ ವಿಮಾನ ನಿಲ್ದಾಣವನ್ನು ಮುಚ್ಚುವುದು ವಿವೇಕಯುತ ಆಲೋಚನೆಯಲ್ಲ. ಹಳೆಯ ವಿಮಾನ ನಿಲ್ದಾಣವನ್ನು ಮುಚ್ಚಬಾರದು ಎಂದು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದವರಲ್ಲಿ ನಾನೂ ಒಬ್ಬ. ಆದರೆ, ನ್ಯಾಯಾಲಯವು ತಡೆಯಾಜ್ಞೆ ನೀಡಿರಲಿಲ್ಲ’ ಎಂದು ಕ್ಯಾಪ್ಟನ್ ಜಿ. ಆರ್. ಗೋಪಿನಾಥ್ ಪ್ರತಿಕ್ರಿಯಿಸಿದರು.

ಹಳೆಯ ವಿಮಾನ ನಿಲ್ದಾಣವನ್ನು ಪುನರಾರಂಭಿಸುವುದರಿಂದ ಬೆಂಗಳೂರಿಗೆ ಹಲವು ರೀತಿಯಲ್ಲಿ ಸಹಾಯವಾಗಲಿದೆ. ನಗರದ ಹೃದಯ ಭಾಗದಲ್ಲಿ ವಾಣಿಜ್ಯ ವಿಮಾನ ನಿಲ್ದಾಣದ ಸೌಲಭ್ಯವನ್ನು ಕಲ್ಪಿಸಲಿದೆ. ಬಿಐಎಎಲ್‌ನ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಎಚ್‌ಎಎಲ್‌ಗೆ ಆದಾಯ ಹರಿದು ಬರಲಿದೆ. ಜೊತೆಗೆ ಬಿಐಎಎಲ್‌ಗೂ ಹೆಚ್ಚುವರಿ ಆದಾಯ ಸೃಷ್ಟಿಯಾಗಲಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬಿಐಎಎಲ್ ಮೂಲಕ 2008ರಲ್ಲಿ ಆರಂಭಿಸಲಾಗಿತ್ತು. ವಿಧಾನಸೌಧದಿಂದ ಸುಮಾರು 13 ಕಿ.ಮೀ ದೂರದಲ್ಲಿರುವ ಎಚ್‌ಎಎಲ್ ವಿಮಾನ ನಿಲ್ದಾಣವು ಅಲ್ಲಿ ಯವರೆಗೆ ಕಾರ್ಯನಿರ್ವಹಿಸಿತ್ತು. ಮತ್ತೆ ಆರಂಭಿಸಲು ಎಚ್‌ಎಎಲ್, ಬಿಐಎಎಲ್ ಮಾತ್ರವಲ್ಲ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಕೂಡ ಉತ್ಸುಕರಾಗಿದ್ದಾರೆ ಎಂದಿದ್ದಾರೆ.

ಎಚ್‌ಎಎಲ್ ವಿಮಾನ ನಿಲ್ದಾಣವು ದೇಶೀಯ ವಿಮಾನ ನಿಲ್ದಾಣ ವಾಗಿ ಕಾರ್ಯನಿರ್ವಹಿಸಬಹುದು. ಆಂಧ್ರ ಪ್ರದೇಶ, ತಮಿಳುನಾಡು ಮುಂತಾದ ರಾಜ್ಯಗಳನ್ನು ಒಳಗೊಂಡ ಪ್ರಾದೇಶಿಕ ಪ್ರಯಾಣವನ್ನು ಉತ್ತೇಜಿಸಬಹುದು. ವ್ಯಾಪಾರಕ್ಕಾಗಿ ಬೆಂಗಳೂರಿಗೆ ಭೇಟಿ ನೀಡುವ ಜನರು ವೈಟ್‌ಫೀಲ್ಡ್ ಅಥವಾ ಸುತ್ತಲಿನ ಪ್ರದೇಶಗಳಲ್ಲಿ ತಮ್ಮ ಕೆಲಸವನ್ನು ಮುಗಿಸಿ ತಕ್ಷಣ ಹೊರಡಬಹುದು ಎಂದು ವಿವರಿಸಿದ್ದಾರೆ.

2033ರ ಒಳಗೆ ಸಿದ್ಧಗೊಳಿಸಬಹುದು: ‘ದೇವನ ಹಳ್ಳಿಯಲ್ಲಿ ವಿಮಾನ ನಿಲ್ದಾಣ ನಿರ್ಮಿಸುವಾಗ ಮುಂದಿನ 25 ವರ್ಷ ಈ ವಿಮಾನ ನಿಲ್ದಾಣದಿಂದ 150 ಕಿ.ಮೀ. ವ್ಯಾಪ್ತಿಯಲ್ಲಿ ಬೇರೆ ವಿಮಾನ ನಿಲ್ದಾಣ ಇರಬಾರದು ಎಂಬ ಒಪ್ಪಂದ ಆಗಿತ್ತು. 2033ಕ್ಕೆ 25 ವರ್ಷದ ಗಡುವು ಮುಗಿಯಲಿದೆ. ಅದರೊಳಗೆ ಎಚ್‌ಎಎಲ್ ಅನ್ನು ತಯಾರು ಮಾಡಬಹುದು’ ಎಂದು ನಗರ ಯೋಜನಾ ತಜ್ಞರಾದ ವಿ. ರವಿಚಂದರ್ ತಿಳಿಸಿದ್ದಾರೆ.

ಎಚ್‌ಎಎಲ್‌ನಲ್ಲಿ ವಿಮಾನ ನಿಲ್ದಾಣಕ್ಕೆ ಬೇಕಾದ ಎಲ್ಲ ಸೌಕರ್ಯಗಳು ಈಗಾಗಲೇ ಇರುವುದರಿಂದ ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಅಲ್ಪಾವಧಿಯ ಪ್ರಯಾಣವನ್ನು ಏರ್ಪಡಿಸಬಹುದು. ಪಾಯಿಂಟ್-ಟು-ಪಾಯಿಂಟ್ ಪ್ರಯಾಣದಿಂದ ಸಮಯದ ಉಳಿಯವಾಗಲಿದೆ. ಹೆಬ್ಬಾಳ ಮೇಲ್ಸೇತುವೆ ಕಡೆಗೆ ಇರುವ ವಾಹನ ದಟ್ಟಣೆ, ಜನದಟ್ಟಣೆಯೂ ಕಡಿಮೆಯಾಗಬಹುದು ಎಂದು ಪ್ರತಿಕ್ರಿಯಿಸಿದ್ದಾರೆ.

ಎಚ್‌ಎಎಲ್ ವಿಮಾನ ನಿಲ್ದಾಣ ಆರಂಭಗೊಂಡರೆ ಮೈಸೂರು-ಬೆಂಗಳೂರು ನಡುವೆ ಸಂಚಾರಕ್ಕೂ ಉಪಯೋಗವಾಗಬಹುದು. ಮಹದೇವಪುರ, ಎಚ್‌ಎಸ್‌ಆರ್ ಲೇಔಟ್ ಮತ್ತು ಬೊಮ್ಮನಹಳ್ಳಿಯಂತಹ ಪ್ರದೇಶಗಳ ಜನರಿಗೆ ಸಹಾಯವಾಗಬಹುದು ಎಂದು ಸ್ಥಳೀಯ ನಿವಾಸಿ ಅಶ್ವಿನ್ ಮಹೇಶ್ ತಿಳಿಸಿದರು.

ದರ್ಶನ್ ಜಾಮೀನು ಷರತ್ತು ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರಿಗೆ ದೇಶದಾದ್ಯಂತ ಮುಕ್ತ ಸಂಚಾರಕ್ಕೆ ಅನುಮತಿ ನೀಡಿರುವ ಹೈಕೋರ್ಟ್, ‘ಪ್ರವಾಸ ಕೈಗೊಳ್ಳುವುದಕ್ಕೂ ಮೊದಲು ಸಕ್ಷಮ ನ್ಯಾಯಾಲಯದ ಅನುಮತಿ ಪಡೆಯುವುದು ಕಡ್ಡಾಯ’ ಎಂದು ಆದೇಶಿಸಿದೆ.

‘ವಿಚಾರಣಾ ನ್ಯಾಯಾಲಯದ ಅನುಮತಿ ಇಲ್ಲದೇ ವ್ಯಾಪ್ತಿ ಪ್ರದೇಶವನ್ನು ದಾಟಿ ಹೊರಗೆ ಹೋಗುವಂತಿಲ್ಲ ಎಂದು ಜಾಮೀನು ಮಂಜೂರು ಮಾಡುವಾಗ ವಿಧಿಸಲಾಗಿರುವ ಐದನೇ ಷರತ್ತಿನಲ್ಲಿ ಸಡಿಲಿಕೆ ಮಾಡಬೇಕು’ ಎಂದು ಕೋರಿ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ ಪೀಠ) ಭಾಗಶಃ ಪುರಸ್ಕರಿಸಿದೆ.

ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ‘ವೃತ್ತಿ ದೃಷ್ಟಿಯಿಂದ ಅವರು ರಾಜ್ಯವಲ್ಲದೇ ವಿದೇಶಕ್ಕೂ ಪ್ರಯಾಣಿಸುವ ಅಗತ್ಯವಿದೆ’ ಎಂದು ಪೀಠದ ಗಮನಕ್ಕೆ ತಂದಿದ್ದರು.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, ‘ವಿದೇಶ ಪ್ರವಾಸ ಕೈಗೊಳ್ಳುವಾಗ ದರ್ಶನ್ ಸಕ್ಷಮ ನ್ಯಾಯಾಲಯದ ಅನುಮತಿ ಕೋರಬೇಕು ಎಂಬಷ್ಟರ ಮಟ್ಟಿಗೆ ಷರತ್ತಿನಲ್ಲಿ ಮಾರ್ಪಾಡು ಮಾಡಬಹುದು’ ಎಂದು ತಿಳಿಸಿದ್ದರು.

ಅಪಘಾತ: ನಿವೃತ್ತ ವೈದ್ಯ, ಚಾಲಕ ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ



ವಿಷ್ಣು ಭಾಪಟ್

ಬೆಂಗಳೂರು: ಬನಶಂಕರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಬೆಳಿಗ್ಗೆ ಎರಡು ಬಿಎಂಟಿಸಿ ಬಸ್‌ಗಳ ಮಧ್ಯೆ ಆಟೊ ಸಿಲುಕಿ ಆಟೊ ಚಾಲಕ, ನಿವೃತ್ತ ವೈದ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಿವೃತ್ತ ಆಯುರ್ವೇದ ವೈದ್ಯ, ಹನುಮಂತನಗರದ ನಿವಾಸಿ ವಿಷ್ಣು ಭಾಪಟ್ (80) ಹಾಗೂ ಆಟೊ ಚಾಲಕ ಕೆ.ಪಿ. ಅಗ್ರಹಾರದ ನಿವಾಸಿ ಅನಿಲ್ ಕುಮಾರ್ (50) ಮೃತಪಟ್ಟವರು. ಬೆಳಿಗ್ಗೆ 11.30ರ ಸುಮಾರಿಗೆ ಹೊಸಕೆರೆಹಳ್ಳಿ ಕ್ರಾಸ್ ಬಳಿಯ 80 ಅಡಿ ರಸ್ತೆಯಲ್ಲಿ ಘಟನೆ ಸಂಭವಿಸಿದೆ.

ಆಟೊ ಚಾಲಕ ಅನಿಲ್ ಕುಮಾರ್, ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಕೆ.ಪಿ.ಅಗ್ರಹಾರದಲ್ಲಿ ನೆಲಸಿದ್ದರು. ವಿಷ್ಣು ಅವರು ಹನುಮಂತನಗರದಲ್ಲಿ ವಾಸಿಸುತ್ತಿದ್ದರು. ಕೆಲಸದ ನಿಮಿತ್ತ ವಿಷ್ಣು ಅವರು ಆಟೊದಲ್ಲಿ ತೆರಳುತ್ತಿದ್ದರು. ಆಗ ಅಪಘಾತ ಸಂಭವಿಸಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

‘ಹೊಸಕೆರೆಹಳ್ಳಿ ಕ್ರಾಸ್ ನ 80 ಅಡಿ ರಸ್ತೆ ಕಡೆಯಿಂದ ಸೀತಾ ವೃತ್ತದ ಕಡೆಗೆ ಬರುತ್ತಿದ್ದ ಆಟೊಗೆ ಹಿಂಬದಿಯಿಂದ ಬಂದ ಬಿಎಂಟಿಸಿ ಬಸ್‌ವೊಂದು ಗುದ್ದಿದೆ. ಗುದ್ದಿದ ರಭಸಕ್ಕೆ ಮುಂದೆ ಚಲಿಸುತ್ತಿದ್ದ ಮತ್ತೊಂದು ಬಿಎಂಟಿಸಿ ಬಸ್‌ನ ಹಿಂಭಾಗಕ್ಕೆ ಆಟೊ ಡಿಕ್ಕಿ ಹೊಡೆದಿದೆ. ಎರಡೂ ಬಸ್‌ಗಳ ಮಧ್ಯೆ ಸಿಲುಕಿ ಆಟೊ ನಜ್ಜುಗುಜ್ಜಾಗಿದೆ. ಆಟೊದಲ್ಲಿದ್ದ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಮುಂದೆ ಚಲಿಸುತ್ತಿದ್ದ ಬಿಎಂಟಿಸಿ ಬಸ್ ಚಾಲಕನ ಲೋಪ ಕಂಡು ಬಂದಿಲ್ಲ. ಆಟೊದ ಹಿಂದಿನಿಂದ ಬರುತ್ತಿದ್ದ ಬಿಎಂಟಿಸಿ ಬಸ್ ಆಟೊಗೆ ಗುದ್ದಿದ ಪರಿಣಾಮ ಮುಂದಿನ ಬಿಎಂಟಿಸಿ ಬಸ್‌ಗೆ ಡಿಕ್ಕಿ ಹೊಡೆದು ಘಟನೆ ಸಂಭವಿಸಿದೆ. ಆಟೊ ಹಿಂದೆ ಬರುತ್ತಿದ್ದ ಬಿಎಂಟಿಸಿ ಬಸ್‌ನ ಚಾಲಕ ನಂದೀಶ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಣ್ಣನ ಕೊಲೆ: ತಮ್ಮನ ಬಂಧನ

ಬೆಂಗಳೂರು: ಆಸ್ತಿ ವಿಚಾರಕ್ಕೆ ಸಹೋದರರ ಮಧ್ಯೆ ನಡೆದ ಗಲಾಟೆಯಲ್ಲಿ ಅಣ್ಣನನ್ನು ತಮ್ಮ ಕೊಲೆ ಮಾಡಿದ ಘಟನೆ ಬೊಮ್ಮನಹಳ್ಳಿಯಲ್ಲಿ ನಡೆದಿದೆ.

ನಾಡಮ್ಮ ಲೇಔಟ್ ನಿವಾಸಿ ಶ್ರೀಕಂತ (36) ಕೊಲೆಯಾದ ವ್ಯಕ್ತಿ. ಇವರ ತಮ್ಮ, ಕೊಲೆ ಆರೋಪಿ ನಾಗೇಂದ್ರನನ್ನು (30) ಬೊಮ್ಮನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ವೃತ್ತಿಯಲ್ಲಿ ಇಬ್ಬರೂ ವಕೀಲರಾಗಿದ್ದರು. ಆಸ್ತಿ ವಿಚಾರಕ್ಕೆ ಇಬ್ಬರ ಮಧ್ಯೆ ಜಗಳ ನಡೆಯುತ್ತಿತ್ತು. ಶುಕ್ರವಾರ ಬೆಳಿಗ್ಗೆಯೂ ಜಗಳ ನಡೆದಿತ್ತು. ಕಬ್ಬಿಣದ ಸರಳಿನಿಂದ ಶ್ರೀಕಂತನ ಮೇಲೆ ನಾಗೇಂದ್ರ ಹಲ್ಲೆ ನಡೆಸಿ, ನಂತರ ಚಾಕುವಿನಿಂದ ಇರಿದಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದ್ವಿಚಕ್ರ ವಾಹನ ಕಳ್ಳನ ಬಂಧನ



ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುವುದರಲ್ಲಿ ಶತಕ ಬಾರಿಸಿದ್ದ ಅಂತರ ರಾಜ್ಯ ಕಳ್ಳನನ್ನು ಬಂಧಿಸುವಲ್ಲಿ ಕೆ.ಆರ್. ಪುರ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಗೋವರ್ಧನಗಿರಿಯ ಡಿ.ಪ್ರಸಾದ್ ಬಾಬು ಅಲಿಯಾಸ್ ಪ್ರಸಾದ್ (32) ಬಂಧಿತ. ಆರೋಪಿಯಿಂದ 100 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹1.45 ಕೋಟಿ ಎಂದು ಅಂದಾಜಿಸಲಾಗಿದೆ.

ಕೊನೆಗೂ ಜೈಲು ಸೇರಿದ ರೌಡಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವರಿಬ್ಬರು ಕುಖ್ಯಾತ ಸರಗಳ್ಳರು. ಜತೆಗೆ, ರೌಡಿ ಚಟುವಟಿಕೆಯಲ್ಲೂ ಸಕ್ರಿಯವಾಗಿದ್ದರು. ಪದೇ ಪದೇ ತಮ್ಮ ವಾಸ ಸ್ಥಳ ಬದಲಿಸಿ ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಿದ್ದರು. ಕೊನೆಗೂ ಅವರಿಬ್ಬರನ್ನು ಬಂಧಿಸುವಲ್ಲಿ ಜಯನಗರ ಠಾಣೆ ಪೊಲೀಸರು ಯಶಸ್ವಿ ಆಗಿದ್ದಾರೆ.

ಬನ್ನೇರುಘಟ್ಟ ರಸ್ತೆಯ ಲಕ್ಷ್ಮೀಲೇಔಟ್ ಒಂದನೇ ಕ್ರಾಸ್ ನಿವಾಸಿ ಮೊಹಮ್ಮದ್ ಜಬೀವುದ್ದೀನ್ ಅಲಿಯಾಸ್ ತಬ್ರೇಜ್(39) ಹಾಗೂ ಜಯನಗರ ನಾಲ್ಕನೇ ಬ್ಲಾಕ್‌ನ ನಿವಾಸಿ ಮೊಹಮ್ಮದ್ ಮೆಹತಾಬ್ ಬಂಧಿತರು.

ನಗರದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮೊಹಮ್ಮದ್ ಜಬೀವುದ್ದೀನ್ ವಿರುದ್ಧ ಒಟ್ಟು 73 ಪ್ರಕರಣಗಳು ದಾಖಲಾಗಿದ್ದರೆ; ಮೊಹಮ್ಮದ್ ಮೆಹತಾಬ್ ವಿರುದ್ಧ 31 ಪ್ರಕರಣಗಳು ದಾಖಲಾಗಿದ್ದವು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

> **ಜಯನಗರ ಪೊಲೀಸರ ಕಾರ್ಯಾಚರಣೆಗೆ ₹25 ಸಾವಿರ ಬಹುಮಾನ ಘೋಷಿಸಲಾಗಿದೆ**
> **ಬಿ.ದಯಾನಂದ,** ಪೊಲೀಸ್ ಕಮಿಷನರ್

‘ಅವರು ಈ ಹಿಂದೆ ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದರು. ಜಯನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರಾಗದೇ ತಲೆ ಮರೆಸಿಕೊಂಡಿದ್ದರು. ತಮ್ಮ ಮನೆಗಳಿಗೂ ಬರುತ್ತಿರಲಿಲ್ಲ. ಹೋಟೆಲ್‌ಗಳಲ್ಲೇ ಉಳಿದು ಕೊಳ್ಳುತ್ತಿದ್ದರು. ಫ್ರೇಜರ್‌ಟೌನ್‌ನ ಅವೆನ್ಯೂ ಇನ್‌ನಲ್ಲಿ ವಾಸ್ತವ್ಯ ಮಾಡಿದ್ದ ಮಾಹಿತಿ ತಿಳಿದು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಹೇಳಿದರು.

‘ಜಬೀವುದ್ದೀನ್ ವಿರುದ್ದ 36 ಪ್ರಕರಣಗಳಲ್ಲಿ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿತ್ತು. ಮೆಹತಾಬ್ ವಿರುದ್ಧ 11 ಪ್ರಕರಣಗಳಲ್ಲಿ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿತ್ತು’ ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು


ರಾಘವೇಂದ್ರ ಗುರುಸಾರ್ವಭೌಮರ ಪಟ್ಟಾಭಿಷೇಕ ಮತ್ತು ವರ್ಧಂತಿ ಮಹೋತ್ಸವ: ರಾಘವೇಂದ್ರ ಸ್ವಾಮಿಗಳ ಅಷ್ಟೋತ್ತರ ಪಾರಾಯಣ, ಲಕ್ಷ ಪುಷ್ಪಾರ್ಚಣೆ, ಪಾದುಕಾ ಪಟ್ಟಾಭಿಷೇಕ, ಉದ್ಘಾಟನೆ: ಶ್ರೀಶಾನಂದ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ಕೋಣನಕುಂಟೆ ರಾಯರಮಠ, ಗುರುರಾಜ ಬಡಾವಣೆಯ ರಾಘವೇಂದ್ರ ಸ್ವಾಮಿಗಳ ಮೂಲಮೃತ್ತಿಕಾ ಬೃಂದಾವನ, ಬೆಳಿಗ್ಗೆ 7ರಿಂದ

ರಾಘವೇಂದ್ರತೀರ್ಥ ಗುರುಸಾರ್ವಭೌಮರ 404ನೇ ಪಟ್ಟಾಭಿಷೇಕ ಮತ್ತು 430ನೇ ಜನ್ಮದಿನೋತ್ಸವ: ಅಕ್ಷೋಭ್ಯ ರಾಮಪ್ರಿಯತೀರ್ಥ ಸ್ವಾಮೀಜಿ ಅವರಿಗೆ ಸಹಸ್ರ ಕಳಶ ಕ್ಷೀರಾಭಿಷೇಕ, ಹೃದ್ಯಾ ಅಕಾಡೆಮಿ ವಿದ್ಯಾರ್ಥಿಗಳಿಂದ ಭರತನಾಟ್ಯ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಬೆಳಿಗ್ಗೆ 8ರಿಂದ

6ನೇ ವರ್ಷದ ಗಿರಿಜಾ ಕಲ್ಯಾಣೋತ್ಸವ: ಆಯೋಜನೆ ಮತ್ತು ಸ್ಥಳ: ನಂದೀಶ್ವರ ಸ್ವಾಮಿ ದೇವಾಲಯ, ಮರಿಯಪ್ಪನ ಪಾಳ್ಯ, ಜ್ಞಾನಭಾರತಿ, ಬೆಳಿಗ್ಗೆ 9

ಬಂಜಾರ ವೈದ್ಯರ ಸಮಾವೇಶ: ಉದ್ಘಾಟನೆ: ಸೋಮಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಡಾ. ಉಮೇಶ್ ಡಿ., ಅತಿಥಿಗಳು: ಡಾ. ಬಿ.ಎಲ್. ಸುಜಾತಾ ರಾಥೋಡ್, ಡಾ. ಟಿ.ಸಿ. ರಾಥೋಡ್, ಡಾ. ಚಂದ್ರು ಲಮಾಣಿ, ಡಾ. ಎಚ್. ವಾಸದೇವ ನಾಯಕ್, ಡಾ. ಚರಣ್ ಜಾಧವ್, ಆಯೋಜನೆ: ನ್ಯಾಷನಲ್ ಸೇವಾ ಡಾಕ್ಟರ್ಸ್ ಅಸೋಸಿಯೇಶನ್, ಸ್ಥಳ: ಅಂಕಿತ್ ವಿಸ್ಟಾ ಗ್ರೀನ್ ವಿಲೇಜ್ ರೆಸಾರ್ಟ್, ಮಹದೇವಪುರ, ಬೆಳಿಗ್ಗೆ 9

ಸಮರ್ಥನಂ ಸಂಭ್ರಮ: 28ನೇ ವಾರ್ಷಿಕ ಸಮಾರಂಭ, ಸಂಗೀತ, ನೃತ್ಯ, ಹಾಸ್ಯ, ಜಾದೂ, ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು: ಎಂ.ಸತೀಶ್ ರೆಡ್ಡಿ, ಗೋಪಿನಾಥ್ ರೆಡ್ಡಿ, ಕೆ.ಎಸ್. ಲತಾ ಕುಮಾರಿ, ನಟರಾಜ್, ಪವನ್ ಒಡೆಯರ್, ಎಂ. ಶಿವರಾಮ ಪ್ರಸಾದ್, ಆಯೋಜನೆ: ಸಮರ್ಥನಂ ಅಂಗವಿಕಲರ ಸಂಸ್ಥೆ, ಸ್ಥಳ: ಫ್ರೀಡಂ ಇಂಟರ್‌ನ್ಯಾಷನಲ್ ಸ್ಕೂಲ್ ಮೈದಾನ, ಎಚ್.ಎಸ್.ಆರ್. ಬಡಾವಣೆ, ಬೆಳಿಗ್ಗೆ 9.30



ಪೂರ್ಣಚಂದ್ರ ತೇಜಸ್ವಿ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ‘ಅಣ್ಣನ ನೆನಪು’ ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ತಂಡ: ಪ್ರವರ ಥಿಯೇಟರ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಮುತ್ತು ಬಂದಿದೆ ಕೇರಿಗೆ’ ರಸಗ್ರಹಣ ಶಿಬಿರ: ಉದ್ಘಾಟನೆ: ಕಾ.ತ. ಚಿಕ್ಕಣ್ಣ, ಅಧ್ಯಕ್ಷತೆ: ಆಲ್ಫೋನ್ಸ್ ಫರ್ನಾಂಡಿಸ್, ಗಮಕ ವಾಚನ: ಕಬ್ಬಿನಾಲೆ ವಸಂತ ಭಾರದ್ವಾಜ, ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಸ್ಥಳ: ಲೊಯೋಲ ಪದವಿ ಕಾಲೇಜು, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9.30

ಪುಸ್ತಕ ಮೇಳ: ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ, ಸಂವಾದ ಗೋಷ್ಠಿಗಳು: ‘ಪರಿಸರದ ಅಳಿವು-ಉಳಿವು’ ಗೋಷ್ಠಿ: ಅ.ನ.ಯಲ್ಲಪ್ಪ ರೆಡ್ಡಿ, ಸುರೇಶ್ ಹೆಬ್ಳೀಕರ್, ಶಿವಾನಂದ ಕಳವೆ, ‘ಸಂವಿಧಾನದ ಹಿರಿಮೆ ಗರಿಮೆ ಹಾಗೂ ಅರಿವು’ ಗೋಷ್ಠಿ: ನ್ಯಾ. ಎಚ್.ಎನ್. ನಾಗಮೋಹನದಾಸ್, ಶಶಿಕಲಾ ಗುರುಪುರ್, ಕೆ.ಪಿ. ಬಾಲಸುಬ್ರಮಣ್ಯ, ‘ಕ್ರೀಡೆ ಮತ್ತು ಸಾಹಿತ್ಯ’ ಗೋಷ್ಠಿ: ಜೋಸೆಫ್ ಹೂವರ್, ಪೊನ್ನಪ್ಪ, ಮಾಲತಿ ಹೊಳ್ಳ, ಚಂದ್ರಮೌಳಿ ಕಣವಿ, ‘ಕೃತಕ ಬುದ್ಧಿಮತ್ತೆ/ ಸೈಬರ್ ಭದ್ರತೆ’ ಗೋಷ್ಠಿ: ಪ್ರಣಬ್ ಮೊಹಾಂತಿ, ರಮೇಶ್ ನಿಂಬೆಮರದಹಳ್ಳಿ, ಅನಂತಪ್ರಭು, ಆಯೋಜನೆ: ವಿಧಾನಸಭೆ ಸಚಿವಾಲಯ, ಸ್ಥಳ: ವಿಧಾನಸೌಧ ಆವರಣ, ಬೆಳಿಗ್ಗೆ 10ರಿಂದ

ಸಾಧಕ ಹಳೇ ವಿದ್ಯಾರ್ಥಿಗಳಿಗೆ ಸನ್ಮಾನ: ಸನ್ಮಾನಿತರು: ಸುಧಾಮೂರ್ತಿ, ಫ್ರಾನ್ಸಿಸ್ ಜಾರ್ಜ್, ಕೃಷ್ಣ ಬೈರೇಗೌಡ, ಮಲ್ಲೇಶ್ ಬಾಬು, ಶಿಲ್ಪೊ ನೇಹಾ ಟರ್ಕೆ, ಓಮನ್ ಚಾಂಡಿ, ದರ್ಶನ್ ಧ್ರುವನಾರಾಯಣ, ಸಾಗರ್ ಈಶ್ವರ್ ಖಂಡ್ರೆ, ಅಧ್ಯಕ್ಷತೆ: ಧರ್ಮಗುರು ಜೋಸ್ ಸಿ.ಸಿ., ಅತಿಥಿ: ಜುಗ್ನು ಉಬೇರಿಯೊ, ಆಯೋಜನೆ: ಕ್ರೈಸ್ಟ್ ವಿಶ್ವವಿದ್ಯಾಲಯ, ಸ್ಥಳ: ವಿಶ್ವವಿದ್ಯಾಲಯದ ಮುಖ್ಯ ಸಭಾಂಗಣ, ಬೆಳಿಗ್ಗೆ 10.30

ತ್ಯಾಜ್ಯಯೋಧೆ- ಅಲ್ಮಿತ್ರಾ ಪಟೇಲ್ ಕೃತಿ ಬಿಡುಗಡೆ: ಅನುವಾದಕ: ಎಚ್.ಎಸ್.ಎಂ. ಪ್ರಕಾಶ್, ಕೃತಿಕಾರ್ತಿ: ಶಾರದಾ ಪಾಂಡುರಂಗ ಕಾಳೆ, ಅತಿಥಿಗಳು: ಹೇಮಾವತಿ ನಾಗರಾಜ್, ವಿ.ಶ್ರೀನಿವಾಸರಾಜು, ಮರಿಯಮ್ ಶಂಕರ್, ಆಯೋಜನೆ: ಕೃಷ್ಣದೇವರಾಯ ಎಜುಕೇಶನಲ್ ಟ್ರಸ್ಟ್, ಇಕೊಗ್ರಾಂ ಪ್ರಾಜೆಕ್ಟ್, ಸ್ಥಳ: ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೃಷ್ಣದೇವರಾಯ ನಗರ, ಹುಣಸಮಾರನಹಳ್ಳಿ, ಬೆಳಿಗ್ಗೆ 11.30

53ನೇ ವಾರ್ಷಿಕೋತ್ಸವ: ಅತಿಥಿಗಳು: ಕೃಷ್ಣಮೂರ್ತಿ ಕೆ., ವೈದೇಹಿ ಅಯ್ಯಂಗಾರ್, ಅಧ್ಯಕ್ಷತೆ: ಗೀತಾ ವಿ. ರಾವ್, ಆಯೋಜನೆ ಮತ್ತು ಸ್ಥಳ: ಬಾಲ ಮನೋವಿಕಾಸ ಕೇಂದ್ರ, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 4

ಕುಸುಮಾ ಅಬ್ಬೂರು ಅವರ ‘ದೂರ ತೀರ ಯಾನ’ ಕಾದಂಬರಿ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಕಾದಂಬರಿ ಬಗ್ಗೆ: ಚ.ಹ. ರಘುನಾಥ್, ಮುಖ್ಯ ಅತಿಥಿಗಳು: ಹಿ.ಚಿ. ಬೋರಲಿಂಗಯ್ಯ, ಎಚ್.ಎಲ್. ಪುಷ್ಪ, ಆಯೋಜನೆ: ಕಿ.ರಂ. ಪ್ರಕಾಶನ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಡಿ.ಕೆ. ಶಿವಕುಮಾರ್, ಶಿವರಾಜ್ ಕುಮಾರ್, ಕಿಶೋರ್ ಜಿ., ಪ್ರಿಯಾಂಕಾ ಮೋಹನ್, ಉಪಸ್ಥಿತಿ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಚಲನಚಿತ್ರ ಅಕಾಡೆಮಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ವಿಧಾನಸೌಧದ ಮುಂಭಾಗ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಸಮೃದ್ಧಿ ಪುಲಕೇಶಿ, ಉಪಸ್ಥಿತಿ: ಲಲಿತಾ ಶ್ರೀನಿವಾಸನ್, ಪದ್ಮಜಾ ಬಿ., ಎಂ.ಆರ್. ಕಮಲಾ, ಗೌರವ ಅತಿಥಿ: ವಿಜಯ್ ಶಂಕರ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 5.30

ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮತ್ತು ವರ್ಧಂತಿ ಮಹೋತ್ಸವ: ಭಜನೆ: ಗಿರಿನಗರದ ಶೃತಿ ಸಂಗೀತ ವಿದ್ಯಾಲಯ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ

ಮ್ಯೂಸಿಯಂ ಉಪನ್ಯಾಸ ಸರಣಿ–2: ರಾಜಾ ರವಿ ವರ್ಮಾ ಮತ್ತು ಅವರ ಮ್ಯೂಸಿಯಂ ಪರಂಪರೆ ಬಗ್ಗೆ ಉಪನ್ಯಾಸ: ಗಣೇಶ್ ಶಿವಸ್ವಾಮಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಸಂಜೆ 5

ಯಕ್ಷ ಸಪ್ತಕ- ಯಕ್ಷಗಾನ ಆಖ್ಯಾನ: ಹುಳಿಮಾವು ಘಟಕದ ಮಕ್ಕಳಿಂದ ‘ಶ್ರೀಕೃಷ್ಣ ಲೀಲೆ–ಕಂಸ ವಧೆ’ (ಮಧ್ಯಾಹ್ನ 3.30), ಹೆಬ್ಬಾಳ ಘಟಕದ ಕಲಾವಿದರಿಂದ ‘ಶರಸೇತು ಬಂಧನ’ (ಸಂಜೆ 6) ಯಕ್ಷಗಾನ, ಆಯೋಜನೆ: ಯಕ್ಷ ಸಂಭ್ರಮ, ಹುಳಿಮಾವು, ಸ್ಥಳ: ಶ್ರೀಕ್ಷೇತ್ರ ಭಗವತೀ ದೇವಸ್ಥಾನ, ಹುಳಿಮಾವು

ಊಂಜಲ್ ಸಂಗೀತೋತ್ಸವ: ವಾಣಿಶ್ರೀ ರಾಮಕೃಷ್ಣ, ವಾದ್ಯ ಸಹಕಾರ: ಎಂ.ಎಸ್. ಗೋವಿಂದಸ್ವಾಮಿ, ಆರ್. ಗಣೇಶ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ಜನಪದ ಕಲಾಮೇಳ: ವಿವಿಧ ಕಲಾ ಪ್ರದರ್ಶನ, ಆಯೋಜನೆ: ಶಿವಪ್ರಕಾಶ್ ಸಿ.ಎನ್. ಮತ್ತು ಸ್ನೇಹಬಳಗ, ಸ್ಥಳ: ಗಾಯತ್ರಿ ವಿಹಾರ (ಗೇಟ್ ಸಂಖ್ಯೆ 4), ಅರಮನೆ ಮೈದಾನ, ಸಂಜೆ 6

ಪಿ. ಲಂಕೇಶ್ ಅವರ ‘ಕ್ರಾಂತಿ ಬಂತು ಕ್ರಾಂತಿ’ ನಾಟಕ ಪ್ರದರ್ಶನ: ನಿರ್ದೇಶನ: ಅಭಿಷೇಕ ಚಕ್ರಣ್ಣವರ, ತಂಡ: ಕಲಾವಿಲಾಸಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

ಹರಿನಾಮ ಸಂಕೀರ್ತನೆ: ರಂಜಿತಾ ಪ್ರಸಾದ್, ವಾದ್ಯ ಸಹಕಾರ: ಅಮಿತ್ ಶರ್ಮಾ, ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

PROPERTY CORNER ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BDA SITE for SALE/ Joint Venture
@ BSK 6th Stage 4th Block, 'B' Block FE. 50x80 South Facing. Brokers Excuse.
-:Contact: - 9483696801

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH Stage,3000 Sqft, Semi - Commercial N/E Corner 60' Road/9th Block 40x60,10th Block 30x40 :9663393533

BANASHANKARI 6TH Stage 9th Block 50x80 Commercial Site Sale, North, 100 Feet Road, 9972720488/ 9880448478.

Outskirts

FOR SALE Nandi hills Road 2.05 acre in Nandi hills Road, 200 meter from 60 Ft. Road, Contact: 9964485388

Basavanagudi

30X48 CORNER, Residential/ Semi-commercial property for sale at N.R.Colony Basavanagudi, Bangalore. Call:9980747256

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jayanagar

JAYANAGAR 1ST Blk Facing Madhavan Park 4596sqft`Site Excellent Location BDA Property Clear Titles Call For Price 8897683059 9845302589.

Kanakapura Road

"SITES FOR-SALE 60x40, Premium plots ₹12500/-P.sft slightly negotiable @ Vakil Garden. Call: 7022022065"

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Kempegowda Layout

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

SITE FOR SALE KEMPEGOWDA LAYOUT 7th Block'L' Sector attached(BDA NOC) 30x40,6000/- slightly negotiable. Contact:9008800029

Vishweshwariah Layout

40X60 NORTH_FACE HIG,KHB LAYOUT Satellite Club Circle Vishweshwaraiah Layout 1st`Block 100`Feet Kengeri Main`Road, Behind Semi`Commercial Site Sale Reasonable Price Call:9945191143 9945694783.

"30X40 BDA RESIDENTIAL TOP_LOCATION BDA_SITES_SALE 1ST_BLOCK VISHWESHWARAIH LAYOUT IMMEDIATE_SALE. 9845143579"

DIRECT OWNER 20x30, 30x40, 40x60 Site or House Visweshwaraiah Layout Near Metro Station: 8971851966/ 9880781399

BDA 60X40 Site for sale. South facing Rs. 3.5Cr. Immediate Sale. Brokers Excuse. Contact:- 9448455164.

Udupi

KHB SITE 1725 SQFT HEBRI TOWN AMIDST NATURE WESTERN GHATS 26 LAKHS OWNER 9606866368

Anjananagar

BDA SITE for Sale @ Anjanapura 3rd Block, South Facing 30x40 Very good Location Immediate Construction & Available Kaveri water, Contact: 9620947387

HBR Layout

FOR SALE HBR BDA SITE CLASS 1, LOCATION NORTH FACING 50,X80, GENUINE BUYERS CONTACT:- 9972999925

Anjanapura

SITE FOR Sale 20X30 North Facing 30 Feet Road at Anjanapura 2nd Block Contact:98450 73796

SITE FOR Sale 30X40 at Anjanapura 11th Block North Facing 40 Feet Road Contact:98450 73796

Nagarabhavi

PLATS FOR-SALE Near Nagharbhavi Circle 2 & 3 BHK @ Prime-Location Ready to`Move in`Just`1.km from Metro-Station 9538828808 9845066608

Mysore Road

AVAILABLE LEASE/ RENT/ SALE SPACIOUS 3BHK APARTMENT FLAT EIGHTH FLOOR BASEMENT CARPARK MYSORE ROAD: 8105273951

Flat

J P Nagar

SALE 1BHK flats 2units internally connected, JPNagar 4thphase Near vegamall and upcoming metro. MGK 9901051948.

House

J P Nagar

JP-NAGAR 2ND Phase 30x80 6Bedroom, 7Bathroom G+2, 3 CarParking Borewell Cauvery Water Built-up Area 5400 Sqft: 9448045601

JPNAGAR 3rd_Phase 2unites House_North Facing 45x61 BDA Property Excellent Location Price:8.2cr Call Classic_Estates Harsha 9845302589.

J.P.NAGAR 3RD Phase 45x61, North facing Excellent Residential old house, Agents Excuse, Suraj Realtors: 9845232711

Sadashiva Nagar

LOWER PALACE Orchid South West Corner, 3420sqft with old house for sale at Sadashivanagar, Behind shell petrol pump Call 9844039482

Basavanagudi

NR COLONY Duplex House 3900 Sft G+3 Floors, WF Site 17x60 Sale 3.75Cr: 9036991234


Malleshwaram

MALLESWARAM CIRCLE Commercial 60x62 North Old Demolish Building for Sale. Contact: 9448045601

Kanakapura Road

INDEPENDENT HOUSE SALE KANAKAPURA ROAD, KAGGLIPURA 630SFT NF, South West Road @40 Lack: 9449217443

ಷೇರುಪೇಟೆ ವಹಿವಾಟು 1414



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,545
ಇಂದಿನ ಅಂತ್ಯ	22,124
▼	420
ದಿನದ ಗರಿಷ್ಠ	22,126

ಎನ್‌.ಆರ್‌.ಪುರ ರಬ್ಬರ್



ಆರ್‌ಎಸ್‌ಎಸ್‌-4 ₹188.50
ಆರ್‌ಎಸ್‌ಎಸ್‌-5 ₹183.50
ಗುಡ್ ಲಾಟ್ ₹177.50
(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹475
12 ಕ್ಕೆ ₹65
ಮೈಸೂರು
100ಕ್ಕೆ ₹470

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹508-680
ದ್ವಿತಳಿ (ಬಿ.ವಿ) ₹222-853

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)
ಅರಸೀಕೆರೆ ₹13800-14640
ತುರುವೇಕೆರೆ ₹14000-14500

ಇಪಿಎಫ್ ಠೇವಣಿಗೆ ಶೇ 8.25ರಷ್ಟು ಬಡ್ಡಿ ನಿಗದಿ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) 2024-25ನೇ ಸಾಲಿಗೆ ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳಿಗೆ ಶೇ8.25ರಷ್ಟು ಬಡ್ಡಿದರ ನಿಗದಿಪಡಿಸಿದೆ.

ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಟ್ರಸ್ಟಿಗಳ ಕೇಂದ್ರೀಯ ಮಂಡಳಿಯು (ಸಿಬಿಟಿ) ಈ ಬಡ್ಡಿದರ ನಿಗದಿಪಡಿಸಿದೆ. ಪ್ರಸ್ತುತ ಇಪಿಎಫ್‌ಒದಲ್ಲಿ 7 ಕೋಟಿಗೂ ಹೆಚ್ಚು ಚಂದಾದಾರರು ಇದ್ದಾರೆ.

2022-23ನೇ ಸಾಲಿನಡಿ ಶೇ 8.15ರಷ್ಟು ಬಡ್ಡಿದರ ನಿಗದಿಪಡಿಸಿದ್ದ ಸಂಘಟನೆಯು, 2023-24ನೇ ಸಾಲಿಗೆ ಶೇ 8.25ಕ್ಕೆ ಹೆಚ್ಚಿಸಿತ್ತು. ಸದ್ಯ ಇದನ್ನು ಪ್ರಸಕ್ತ ಆರ್ಥಿಕ ಸಾಲಿಗೂ ಮುಂದುವರಿಸಲು ಮಂಡಳಿಯು ಒಪ್ಪಿಗೆ ನೀಡಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಈ ಬಡ್ಡಿದರಕ್ಕೆ ಕೇಂದ್ರ ಹಣಕಾಸು ಸಚಿವಾಲಯವು ಅನುಮೋದನೆ ನೀಡಬೇಕಿದೆ. ಆ ನಂತರ ಸರ್ಕಾರವು ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟಿಸಲಿದೆ. ಬಳಿಕ ಚಂದಾದಾರರ ಖಾತೆಗಳಿಗೆ ಬಡ್ಡಿದರಕ್ಕೆ ಅನುಗುಣವಾಗಿ ಮೊತ್ತ ಜಮೆಯಾಗಲಿದೆ ಎಂದು ಹೇಳಿದೆ.


ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಹೊಸಚಾಲಿ	25099-34899	ಕೆಂಪುಗೋಟು	14099-26969
ಚಾಲಿ	32899-36599	ಕೆಂಪುಗೋಟು	18399-21119	ರಾಶಿ	40099-59479
ಚಿಪ್ಪು	17569-25269	ರಾಶಿ	42099-49499	ತಟ್ಟಿಬೆಟ್ಟೆ	27620-39299
ಕೋಕ	6509-14999	ತಟ್ಟಿಬೆಟ್ಟೆ	27999-48799	**ಚಿತ್ರದುರ್ಗ**	
ಫ್ಯಾಕ್ಟರಿ	3069-22690	**ಶಿರಸಿ**		ಅಪಿ	49800-50200
ಹೊಸಚಾಲಿ	29099-34769	ಬೆಟ್ಟೆ	26899-38061	ಬೆಟ್ಟೆ	23600-24000
ಶಿವಮೊಗ್ಗ		ಬಿಳಿಗೋಟು	16899-28599	ಕೆಂಪುಗೋಟು	19600-2000
ಬೆಟ್ಟೆ	46120-57439	ಚಾಲಿ	32018-36559	ರಾಶಿ	49300-49700
ಗೊರಬಲು	15681-27190	ಕೆಂಪುಗೋಟು	12999-23731	**ಕಾರ್ಕಳ**	
ರಾಶಿ	32669-52099	ರಾಶಿ	40008-46991	ಹೊಸತು	25000-37000
ಸರಕು	52000-93916	**ಯಲ್ಲಾಪುರ**		ಹಳತು	30000-45500
ಸಿದ್ದಾಪುರ		ಅಪಿ	61479-75799	**ಸುಳ್ಯ**	
ಬಿಳಿಗೋಟು	20119-25119	ಬಿಳಿಗೋಟು	12899-24299	ಕೋಕ	20500-27500
ಚಾಲಿ	32819-36609	ಚಾಲಿ	27675-38799	ಹೊಸತು	28000-37000
ಕೋಕ	13989-18699	ಕೋಕ	4499-16212		

ಸುಂಕಕ್ಕೆ ನಲುಗಿದ ಷೇರುಪೇಟೆ

ಸೆನ್ಸೆಕ್ಸ್ 1,414, ನಿಫ್ಟಿ 420 ಅಂಶ ಇಳಿಕೆ: ಹೂಡಿಕೆದಾರರಿಗೆ ₹9 ಲಕ್ಷ ಕೋಟಿ ನಷ್ಟ

ಮುಂಬೈ (ಪಿಟಿಐ): ಚೀನಾದ ಸರಕುಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಚ್ಚುವರಿಯಾಗಿ ಶೇ 10ರಷ್ಟು ಸುಂಕ ವಿಧಿಸುವುದಾಗಿ ಘೋಷಿಸಿರುವ ಬೆನ್ನಲ್ಲೇ, ದೇಶದ ಷೇರುಪೇಟೆಯಲ್ಲಿ ಶುಕ್ರವಾರ ಕರಡಿ ಕುಣಿತ ಜೋರಾಯಿತು. ಷೇರು ಸೂಚ್ಯಂಕಗಳು ಶೇ 2ರಷ್ಟು ಕುಸಿತ ಕಂಡಿವೆ.



ಹೂಡಿಕೆದಾರರ ಸಂಪತ್ತು ₹9 ಲಕ್ಷ ಕೋಟಿ ಕರಗಿದೆ. ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳವು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,414 ಅಂಶ ಇಳಿಕೆ ಕಂಡು, 73,198 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,471 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 420 ಅಂಶ ಇಳಿಕೆ ಕಂಡಿದ್ದು, ₹22,124 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ಸತತ ಎಂಟು ವಹಿವಾಟುಗಳಲ್ಲಿ ನಿಫ್ಟಿ ಇಳಿಕೆ ದಾಖಲಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್ 27ರಂದು 85,978 ಅಂಶಗಳಿಗೆ ತಲುಪಿ ಗರಿಷ್ಠ ಮಟ್ಟ ದಾಖಲಿಸಿದ್ದ ಸೆನ್ಸೆಕ್ಸ್, ಇಲ್ಲಿಯವರೆಗೆ 12,780 ಅಂಶ ಇಳಿಕೆ ಕಂಡಿದೆ. ಇದೇ ಅವಧಿಯಲ್ಲಿ ನಿಫ್ಟಿ 4,152 ಅಂಶ ಕುಸಿದಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಟೆಕ್ ಮಹೀಂದ್ರ ಷೇರಿನ ಮೌಲ್ಯ ಶೇ 6ರಷ್ಟು ಮತ್ತು ಇಂಡಸ್ ಇಂಡ್ ಬ್ಯಾಂಕ್ ಷೇರಿನ ಮೌಲ್ಯವು ಶೇ 5ರಷ್ಟು ಇಳಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಇನ್ಫೊಸಿಸ್, ಟಾಟಾ ಮೋಟರ್ಸ್, ಟೈಟನ್, ಟಿಸಿಎಸ್, ನೆಸ್ಲೆ ಮತ್ತು ಮಾರುತಿ ಸುಜುಕಿ ಷೇರಿನ ಮೌಲ್ಯ ಇಳಿಕೆಯಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಷೇರಿನ ಮೌಲ್ಯ ಏರಿಕೆಯಾಗಿದೆ. ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳು ಇಳಿಕೆ ಕಂಡಿವೆ.

'ಕೆನಡಾ ಮತ್ತು ಮೆಕ್ಸಿಕೊದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ವಿಧಿಸಿರುವ ಶೇ 25ರಷ್ಟು ಸುಂಕವು ಮಾರ್ಚ್ 4ರಿಂದ ಜಾರಿಗೆ ಬರಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಅಲ್ಲದೆ, ಚೀನಾ ಸರಕುಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸುವ ಬಗ್ಗೆ ಪ್ರಕಟಿಸಿದ್ದಾರೆ. ಇದು ದೇಶೀಯ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಅವರು ಹೇಳಿದ್ದಾರೆ.

ರೂಪಾಯಿ ಮೌಲ್ಯ 19 ಪೈಸೆ ಇಳಿಕೆ



ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 19 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹87.37 ಆಗಿದೆ.

ದೇಶೀಯ ಷೇರುಪೇಟೆಯು ಇಳಿಕೆ ಕಂಡಿದೆ. ಮತ್ತೊಂದೆಡೆ ಡಾಲರ್ ಮೌಲ್ಯ ಬಲಗೊಂಡಿದ್ದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆರಂಭಿಕ ವಹಿವಾಟಿನಲ್ಲಿ ₹87.32 ಇದ್ದ ರೂಪಾಯಿ ಮೌಲ್ಯವು, ವಹಿವಾಟಿನ ಅಂತ್ಯಕ್ಕೆ ಇಳಿಕೆಯಾಯಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಪೇಟೆಯಿಂದ ಬಂಡವಾಳ ಹಿಂಪಡೆಯುತ್ತಿದ್ದಾರೆ. ಅಲ್ಲದೆ, ತಿಂಗಳ ಅಂತ್ಯವಾಗಿರುವುದರಿಂದ ಪಾವತಿಗಾಗಿ ಆಮದುದಾರರು ಡಾಲರ್ ಖರೀದಿಸುತ್ತಿದ್ದಾರೆ. ಅಮೆರಿಕದ ಸುಂಕ ನೀತಿ ಜಾರಿಯು ಅನಿಶ್ಚಿತತೆಯಿಂದ ಕೂಡಿದೆ. ಇದರಿಂದ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಬಲಗೊಳ್ಳುತ್ತಿದೆ ಎಂದು ಹೇಳಿದ್ದಾರೆ.

ಇಡಿಎಲ್‌ಐ ಸೌಲಭ್ಯ: ಹಲವು ಮಾರ್ಪಾಡಿಗೆ ಸಿಬಿಟಿ ಅನುಮೋದನೆ

ಇಪಿಎಫ್ ಖಾತೆದಾರರಿಗೆ ನೀಡುವ ಉದ್ಯೋಗಿಯ ಠೇವಣಿ ಆಧರಿತ ವಿಮಾ (ಇಡಿಎಲ್‌ಐ) ಸೌಲಭ್ಯಕ್ಕೆ ಸಂಬಂಧಿಸಿದಂತೆ ಕೆಲವು ಮಾರ್ಪಾಡಿಗೆ ಮಂಡಳಿಯು ಒಪ್ಪಿಗೆ ನೀಡಿದೆ. ಉದ್ಯೋಗಿಯು ಮರಣ ಹೊಂದಿದರೆ ಆತನ ಕುಟುಂಬಕ್ಕೆ ಇಡಿಎಲ್‌ಐ ಅಡಿ ಆರ್ಥಿಕ ನೆರವು ದೊರೆಯಲಿದೆ.

ಇನ್ನು ಮುಂದೆ ಒಂದು ವರ್ಷ ಸೇವೆ ಸಲ್ಲಿಸಿ ಮೃತಪಟ್ಟ ಉದ್ಯೋಗಿಗಳ ಕುಟುಂಬಕ್ಕೂ ಆರ್ಥಿಕ ನೆರವು ಕಲ್ಪಿಸಲು ಮಂಡಳಿಯು ಅನುಮೋದನೆ ನೀಡಿದೆ.

ಅಂತಹ ಉದ್ಯೋಗಿಗಳ ಕುಟುಂಬಕ್ಕೆ ₹50 ಸಾವಿರ ವಿಮೆ ನೀಡಲಾಗುತ್ತದೆ. ಇದರಿಂದ ಪ್ರತಿವರ್ಷ 5 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ನೆರವಾಗಲಿದೆ ಎಂದು ಕಾರ್ಮಿಕ ಸಚಿವಾಲಯ ತಿಳಿಸಿದೆ. ಇಡಿಎಲ್‌ಐ ಅಡಿ ಸೌಲಭ್ಯ ಪಡೆಯಲು ಉದ್ಯೋಗಿಯು ಕಾರ್ಮಿಕರ ಭವಿಷ್ಯ ನಿಧಿಗೆ (ಇಪಿಎಫ್) ತನ್ನ ಪಾಲಿನ ಕೊಡುಗೆ ಪಾವತಿಸಿರಬೇಕಿದೆ. ಇನ್ನು ಮುಂದೆ ಇದಕ್ಕೆ ಕೊಡುಗೆ ನೀಡದಿದ್ದರೂ ವಿಮಾ ಸೌಲಭ್ಯ ನೀಡಲು ಮಂಡಳಿಯು ಅನುಮೋದನೆ ನೀಡಿದೆ.

ವೀಳ್ಯದೆಲೆಗೆ ಉತ್ತಮ ಬೆಲೆ

ಪ್ರಜಾವಾಣಿ ವಾರ್ತೆ

ತೋವಿನಕೆರೆ (ತುಮಕೂರು ಜಿಲ್ಲೆ): ಇಲ್ಲಿ ಶುಕ್ರವಾರ ನಡೆದ ಸಂತೆಯಲ್ಲಿ ನೂರು ವೀಳ್ಯದೆಲೆ ಇರುವ ಒಂದು ಕಟ್ಟು ₹160ಕ್ಕೆ ಮಾರಾಟವಾಗಿದೆ.

ನಿರಂತರವಾಗಿ ನಡೆಯುತ್ತಿರುವ ಜಾತ್ರೆ, ಪೂಜೆ, ಪ್ರಮುಖ ಹಬ್ಬಗಳು ಮತ್ತು ಮದುವೆ ಸಮಾರಂಭದಿಂದ ವೀಳ್ಯದೆಲೆಗೆ ಬೇಡಿಕೆ ಕುದುರಿದೆ.

ಚಳಿಗಾಲದಲ್ಲಿ ರೈತರು ಬಳ್ಳಿಯನ್ನು ಭೂಮಿಗೆ ಹದಿಯುವ ಕೆಲಸ ಮಾಡುತ್ತಾರೆ. ಇದರಿಂದ ಹೊಸ ಚಿಗುರು ಬರುವುದು ತಡವಾಗುತ್ತದೆ. ಪ್ರತಿವರ್ಷ ಚಳಿಗಾಲದಲ್ಲಿ ಬೇಡಿಕೆ ಇರುವಷ್ಟು ವೀಳ್ಯದೆಲೆ ಸಿಗುವುದಿಲ್ಲ. ಸ್ಥಳೀಯ ರೈತರು ಬೆಳೆಯುವ ವೀಳ್ಯದೆಲೆಗಳಲ್ಲಿ ಖಾರ ಕಡಿಮೆಯಿದ್ದು, ಮೃದುವಾಗಿರುತ್ತದೆ.

ಮಧುಗಿರಿ ತಾಲ್ಲೂಕಿನ ಸಿಡದರಗಲ್ಲು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ವೀಳ್ಯದೆಲೆಗೆ ಉತ್ತಮ ಬೇಡಿಕೆ ಇದೆ.

ನಮ್ಮ ಪ್ರದೇಶದಲ್ಲಿ ಬೆಳೆದ ವೀಳ್ಯದೆಲೆ ಗುಣಮಟ್ಟದಿಂದ ಕೂಡಿದ್ದು, ಬೆಳೆಗಾರರಿಗೆ ಉತ್ತಮ ಬೆಲೆ ಸಿಗುತ್ತದೆ ಎನ್ನುತ್ತಾರೆ ರೈತರು.

ಬಳ್ಳಿ ಹದಿಯುವುದು

ಪ್ರತಿ ವರ್ಷ ಜನವರಿ ಫೆಬ್ರುವರಿ ತಿಂಗಳಿನಲ್ಲಿ ಬಳ್ಳಿ ಕೆಳಕ್ಕೆ ಇಳಿಸಿ ಸುಳಿ ಭಾಗವನ್ನು ಮರಕ್ಕೆ ಮತ್ತೆ ಕಟ್ಟಿ, ಮಧ್ಯಭಾಗದ ಬಳ್ಳಿಯನ್ನು ಕಲಾತ್ಮಕವಾಗಿ ಸುತ್ತಿ ನೆಲಕ್ಕೆ ಹದಿಯುತ್ತಾರೆ. ಈ ಸಂಪೂರ್ಣ ಕೆಲಸವನ್ನು ನುರಿತವರು ಮಾಡಬೇಕು. ಮುಂದೆ ವರ್ಷ ಪೂರ್ತಿ ಗುಣಮಟ್ಟದ ಎಲೆಗಳನ್ನು ನಿರೀಕ್ಷೆ ಮಾಡ ಬಹುದು ಎನ್ನುತ್ತಾರೆ ಕಳೆದ 25 ವರ್ಷಗಳ ಅನುಭವ ವಿರುವ ರೈತ ಟಿ.ಸಿ. ಹನುಮಂತ ರಾಯಪ್ಪ.

ಆರ್‌ಎಸ್‌ಎಸ್ ಮುಖ್ಯಸ್ಥರ ಭೇಟಿಯಾದ ಸ್ಥಳೀಯ ಮುಖಂಡರು

ಗುವಾಹಟಿ: ಅರುಣಾಚಲ ಪ್ರದೇಶದ ವಿವಿಧ ಸ್ಥಳೀಯ ಆಚರಣೆ, ಧಾರ್ಮಿಕ ಮುಖಂಡರು ಶುಕ್ರವಾರ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನು ಭೇಟಿಯಾಗಿ ಚರ್ಚಿಸಿದರು. ಬಲವಂತದ ಮತಾಂತರ ತಡೆಗೆ 'ಅರುಣಾಚಲ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ (ಎಪಿಎಫ್‌ಆರ್‌ಎ) 1978' ಜಾರಿಗೆ ಬಿಜೆಪಿ ಸರ್ಕಾರ ಮುಂದಾಗಿರುವುದರಿಂದ ಈ ಭೇಟಿ ಮಹತ್ವದ್ದಾಗಿದೆ.

ಆರ್ಥಿಕ ಬೆಳವಣಿಗೆ ಇನ್ನೂ ಕುಂಠಿತ

ಒಂದನೇ ಪುಟದಿಂದ...

ಮುಂದಿನ ಆರ್ಥಿಕ ವರ್ಷವನ್ನು ಅದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಲು ಮಾರುಕಟ್ಟೆ ಬೆಲೆಗಳಲ್ಲಿ ಜಿಡಿಪಿಯನ್ನು ಲೆಕ್ಕ ಹಾಕುವುದಕ್ಕೆ ಸಾಂಕೇತಿಕ (ನಾಮಿನಲ್) ಜಿಡಿಪಿ ಎಂದು ಕರೆಯಲಾಗುತ್ತದೆ.

2023-24ರಲ್ಲಿ ಸಾಂಕೇತಿಕ ಜಿಡಿಪಿ ಗಾತ್ರ ₹301.23 ಲಕ್ಷ ಕೋಟಿ (ಶೇ 9.9ರಷ್ಟು) ಇತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದರ ಗಾತ್ರ ₹331.03 ಲಕ್ಷ ಕೋಟಿ ಆಗಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ 6.1ರಷ್ಟು ದಾಖಲಾಗಿದೆ. ಇದರ ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 9.5ರಷ್ಟು ದಾಖಲಾಗಿತ್ತು.



ವಿಜ್ಞಾನ ದಿನ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಶುಕ್ರವಾರ ಹೈದರಾಬಾದ್‌ನಲ್ಲಿ ಡಿಆರ್‌ಡಿಒದಿಂದ ಆಯೋಜಿಸಿದ್ದ ವಸ್ತು ಪ್ರದರ್ಶನಕ್ಕೆ ಶಾಲಾ ಮಕ್ಕಳು ಭೇಟಿ ನೀಡಿದ್ದರು –ಪಿಟಿಐ ಚಿತ್ರ

ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಹೇಳಿಕೆ

ಮಾರ್ಚ್ 15ರಿಂದ 'ಸ್ಪೇಡೆಕ್ಸ್' ಪ್ರತ್ಯೇಕಿಸುವ ಪ್ರಯೋಗಕ್ಕೆ ಚಾಲನೆ

ನವದೆಹಲಿ (ಪಿಟಿಐ): ಬಾಹ್ಯಾಕಾಶದಲ್ಲಿ ಎರಡು ಉಪಗ್ರಹಗಳನ್ನು ಪ್ರತ್ಯೇಕಿಸುವ 'ಸ್ಪೇಸ್ ಡಾಕಿಂಗ್ ಎಕ್ಸ್‌ಪೆರಿಮೆಂಟ್' (ಸ್ಪೇಡೆಕ್ಸ್) ಅನ್ನು ಮಾರ್ಚ್ ಮಧ್ಯಭಾಗದಲ್ಲಿ ಮತ್ತೆ ಆರಂಭಿಸಲಾಗುವುದು ಎಂದು ಇಸ್ರೊ ತಿಳಿಸಿದೆ.



ನಾರಾಯಣನ್

2024ರ ಡಿಸೆಂಬರ್ 30ರಂದು ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಪಿಎಸ್‌ಎಲ್‌ವಿ ರಾಕೆಟ್ ಮೂಲಕ 'ಚೇಸರ್' ಮತ್ತು 'ಟಾರ್ಗೆಟ್' ಎಂಬ ಹೆಸರಿನ ಎರಡು ಪುಟ್ಟ (ಒಂದು ರೆಫ್ರಿಜರೇಟರ್‌ನಷ್ಟು ದೊಡ್ಡದಾದ) ಉಪಗ್ರಹಗಳನ್ನು ಉಡ್ಡಯನ ಮಾಡಲಾಗಿತ್ತು. ಈ ಎರಡು ಉಪಗ್ರಹಗಳನ್ನು ಜೋಡಿಸುವ ಕಾರ್ಯಾಚರಣೆಯು ಜ.16ರಂದು ಯಶಸ್ವಿಯಾಗಿತ್ತು. ಉಪಗ್ರಹಗಳನ್ನು ಜೋಡಣೆ ಮಾಡುವುದೊಂದೇ ಈ ಯೋಜನೆಯ ಉದ್ದೇಶವಲ್ಲ. ಈ ಉಪಗ್ರಹಗಳನ್ನು ಬೇರ್ಪಡಿಸುವುದೂ ಯೋಜನೆಯ ಭಾಗವೇ ಆಗಿದೆ.

ಬಾಹ್ಯಾಕಾಶಕ್ಕೆ ಮನುಷ್ಯನನ್ನು ಕಳುಹಿಸುವ 'ಗಗನಯಾನ' ಯೋಜನೆ, ಚಂದ್ರಯಾನ 4, ಚಂದ್ರನ ಮೇಲ್ಮೈನಲ್ಲಿನ ಮಣ್ಣಿನ ಮಾದರಿಗಳನ್ನು ತರುವುದು, ಭಾರತೀಯ ಅಂತರಿಕ್ಷ ಕೇಂದ್ರ (ಬಿಎಎಸ್) ಸ್ಥಾಪನೆ ಸೇರಿದಂತೆ ಭಾರತದ ಭವಿಷ್ಯದ ಮಹತ್ವದ ಬಾಹ್ಯಾಕಾಶ ಯೋಜನೆಗಳಿಗೆ ಇಸ್ರೊದ ಈ ಪ್ರಯೋಗ ನಾಂದಿಯಾಗಲಿದೆ.

'ಏಕೀಕೃತ ಉಪಗ್ರಹವು ದೀರ್ಘವೃತ್ತದ ಕಕ್ಷೆಯಲ್ಲಿದೆ. ವಿವಿಧ ಪ್ರಯೋಗಗಳನ್ನು ನಡೆಸಲು ಎರಡು ತಿಂಗಳಿಗೊಮ್ಮೆ ಅವಕಾಶ ಪಡೆಯುತ್ತೇವೆ' ಎಂದು ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ತಿಳಿಸಿದರು.

'ಮಾರ್ಚ್ 15ರಿಂದ ಸ್ಪೇಡೆಕ್ಸ್ ಉಪಗ್ರಹಗಳ ಪ್ರತ್ಯೇಕಿಸುವ ಪ್ರಯೋಗ ನಡೆಸಲು ಅವಕಾಶ ಲಭ್ಯವಾಗಲಿದೆ' ಎಂದರು.

ಬಾಂಗ್ಲಾದೇಶ: ರಾಜಕೀಯ ಪಕ್ಷ ಕಟ್ಟಿದ ವಿದ್ಯಾರ್ಥಿ ಸಂಘಟನೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರ ಆಡಳಿತವನ್ನು ಉರುಳಿಸಿದ ವಿದ್ಯಾರ್ಥಿಗಳ ವೇದಿಕೆ ಶುಕ್ರವಾರ ನೂತನ ರಾಜಕೀಯ ಪಕ್ಷವನ್ನು ರಚಿಸಿದೆ. 'ದೇಶದಲ್ಲಿ ಈಗ ಭಾರತ ಪರ ಮತ್ತು ಪಾಕಿಸ್ತಾನ ಪರ ರಾಜಕಾರಣಕ್ಕೆ ಅವಕಾಶವಿರುವುದಿಲ್ಲ' ಎಂದು ಅದು ಘೋಷಿಸಿದೆ.

ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿ ಅಥವಾ ತಾರತಮ್ಯದ ವಿರುದ್ಧದ ವಿದ್ಯಾರ್ಥಿಗಳ (ಎಸ್‌ಎಡಿ) ಗುಂಪು ಈಗ 'ಜಾತೀಯ ನಾಗೋರಿಕ್ ಪಕ್ಷ' ಅಥವಾ ರಾಷ್ಟ್ರೀಯ ನಾಗರಿಕ ಪಕ್ಷ (ಎನ್‌ಸಿಪಿ)ವಾಗಿ ಮಾರ್ಪಟ್ಟಿದೆ.

ಕೇಂದ್ರ ಢಾಕಾದ ಮಾಣಿಕ್ ಮಿಯಾ ಅವೆನ್ಯೂದಲ್ಲಿ ಕಳೆದ ಜುಲೈ-ಆಗಸ್ಟ್‌ನಲ್ಲಿ ಹಸೀನಾ ಆಡಳಿತದ ವಿರುದ್ಧ ನಡೆದ ದಂಗೆಯ ನೇತೃತ್ವದ ವಹಿಸಿದ್ದ ಪ್ರಮುಖ ನಾಯಕರಲ್ಲಿ ಒಬ್ಬರಾದ ನಹಿದ್ ಇಸ್ಲಾಂ ಅವರನ್ನು ನೂತನ ಪಕ್ಷದ ಸಂಚಾಲಕರನ್ನಾಗಿ ನೇಮಿಸಲಾಗಿದೆ.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ನಾಯಕರು ನೂತನ ರಾಜಕೀಯ ಪಕ್ಷವನ್ನು ಅಧಿಕೃತವಾಗಿ ಘೋಷಣೆ ಮಾಡಿದರು. ಕೆಲವು ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ವ್ಯಾಟಿಕನ್ ಮತ್ತು ಪಾಕಿಸ್ತಾನದ ರಾಯಭಾರಿಗಳು ಭಾಗವಹಿಸಿದ್ದರು.

ಟ್ರಂಪ್ ಸುಂಕ: 4ರಿಂದ ಜಾರಿ

ವಾಷಿಂಗ್ಟನ್ (ಎಪಿ): ಕೆನಡಾ ಮತ್ತು ಮೆಕ್ಸಿಕೊದ ವಸ್ತುಗಳ ಮೇಲೆ ಮಂಗಳವಾರದಿಂದ ಸುಂಕ ವಿಧಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧರಿಸಿದ್ದಾರೆ. ಇದರೊಂದಿಗೆ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲಿನ ಶೇಕಡಾ 10ರಷ್ಟು ಸುಂಕವನ್ನು ದ್ವಿಗುಣಗೊಳಿಸಲಿರುವುದಾಗಿ ಅವರು ಹೇಳಿದ್ದಾರೆ.

ಫೆಂಟಾನಿಲ್‌ನಂತಹ ಡ್ರಗ್ಸ್‌ಗಳನ್ನು ಅಮೆರಿಕಕ್ಕೆ ಅತಿಯಾಗಿ ಕಳ್ಳಸಾಗಣೆ ಮಾಡಲಾಗುತ್ತಿದೆ. ಆಮದು ಸುಂಕಗಳಿಂದಾಗಿ ಇತರ ದೇಶಗಳು ಕಳ್ಳಸಾಗಣೆಯನ್ನು ತಡೆಯುವ ಒತ್ತಡಕ್ಕೆ ಸಿಲುಕುತ್ತವೆ ಎಂದು ಟ್ರಂಪ್, ಸಾಮಾಜಿಕ ಜಾಲತಾಣ 'ಟ್ರುತ್ ಸೋಷಿಯಲ್' ಮೂಲಕ ತಿಳಿಸಿದ್ದಾರೆ.

'ಅಮೆರಿಕಕ್ಕೆ ನಷ್ಟವುಂಟಾಗುವುದನ್ನು ಮುಂದುವರಿಸಲು ಅವಕಾಶ ನೀಡುವುದಿಲ್ಲ. ಪ್ರಸ್ತಾವಿತ ಸುಂಕಗಳು ಮಾರ್ಚ್ 4ರಿಂದ ಜಾರಿಗೆ ಬರಲಿವೆ. ಅದೇ ದಿನದಿಂದ ಚೀನಾಕ್ಕೂ ಹೆಚ್ಚುವರಿ ಶೇ 10ರಷ್ಟು ಸುಂಕ ವಿಧಿಸಲಾಗುವುದು' ಎಂದು ಟ್ರಂಪ್ ತಿಳಿಸಿದ್ದಾರೆ.

'ಅಮೆರಿಕವು ಸುಂಕವನ್ನು ರದ್ದುಗೊಳಿಸದಿದ್ದರೆ ನಾವೂ ಅದರ ಉತ್ಪನ್ನಗಳಿಗೆ ಸುಂಕ ವಿಧಿಸಬಹುದು. ಆದರೆ. ನಾವು ಆ ಮಟ್ಟಕ್ಕೆ ಇಳಿಯುವುದಿಲ್ಲ' ಎಂದು ಕೆನಡಾ ಹೇಳಿದೆ.

'ಮಾರ್ಚ್ 4ರಂದು ನಾವು ಹೊಸ ನಿರ್ಧಾರವನ್ನು ಘೋಷಿಸಬಹುದು' ಎಂದು ಮೆಕ್ಸಿಕೊ ಅಧ್ಯಕ್ಷ ಕ್ಲೌಡಿಯಾ ಶೀನ್‌ಬಾಮ್ ಅವರು ಹೇಳಿದ್ದಾರೆ.

ಮೋದಿ, ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ನಿರ್ಧಾರ

ಭಾರತ–ಇಯು: ವರ್ಷಾಂತ್ಯಕ್ಕೆ ಮುಕ್ತ ವ್ಯಾಪಾರ ಒಪ್ಪಂದ

ನವದೆಹಲಿ(ಪಿಟಿಐ): ರಕ್ಷಣೆ, ಭದ್ರತೆ ಮತ್ತು ನಿರ್ಣಾಯಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತ-ಐರೋಪ್ಯ ಒಕ್ಕೂಟವು (ಇಯು) ವ್ಯೂಹಾತ್ಮಕ ಪಾಲುದಾರಿಕೆ ವಿಸ್ತರಿಸಲು ಸಂಕಲ್ಪ ಮಾಡಿದ್ದು, ಮಹತ್ವಾಕಾಂಕ್ಷೆಯ ಮುಕ್ತ ವ್ಯಾಪಾರ ಒಪ್ಪಂದವನ್ನು ಈ ವರ್ಷದ ಅಂತ್ಯದೊಳಗೆ ಅಂತಿಮಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಶುಕ್ರವಾರ ನಿರ್ದೇಶನ ನೀಡಿದ್ದಾರೆ.

ವ್ಯಾಪಾರ ಮತ್ತು ಸುಂಕದ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ನೀತಿಯ ಬಗ್ಗೆ ಜಾಗತಿಕ ಕಳವಳ ಹೆಚ್ಚುತ್ತಿರುವುದರ ನಡುವೆ ಉಭಯ ನಾಯಕರು ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.

'ಎರಡೂ ಕಡೆಯವರು ಹೂಡಿಕೆ ಸಂರಕ್ಷಣಾ ಒಪ್ಪಂದ ಮತ್ತು ಜಿಐ (ಭೌಗೋಳಿಕ ಸೂಚ್ಯಂಕ) ಕುರಿತಾದ ಒಪ್ಪಂದಕ್ಕಾಗಿ ಮಾತುಕತೆಗಳು ಮುಂದುವರಿಯುವುದನ್ನು ಎದುರು ನೋಡುತ್ತಿದ್ದಾರೆ. ಸಂಪರ್ಕ ಬೆಸೆಯುವ ಭಾರತ-ಪಶ್ಚಿಮ ಏಷ್ಯಾ-ಯುರೋಪ್ ಆರ್ಥಿಕ ಕಾರಿಡಾರ್ (ಐಎಂಇಇಸಿ) ಅನುಷ್ಠಾನಕ್ಕೂ ದೃಢವಾದ ಹೆಜ್ಜೆ ಇರಿಸುತ್ತೇವೆ. ಈ ಕಾರಿಡಾರ್ ಜಾಗತಿಕ ವಾಣಿಜ್ಯ, ಸುಸ್ಥಿರ ಬೆಳವಣಿಗೆ ಮತ್ತು ಸಮೃದ್ಧಿಗೆ ಚಾಲನೆ ನೀಡುವ ಎಂಜಿನ್ ಆಗುವ ವಿಶ್ವಾಸವಿದೆ' ಎಂದು ಮೋದಿ ತಿಳಿಸಿದ್ದಾರೆ.

ಯುಇ ಕಮಿಷನರ್‌ಗಳ ಜತೆ ಮಾತುಕತೆ

ಕೇಂದ್ರ ಪರಿಸರ ಸಚಿವ ಭೂಪಿಂದರ್ ಯಾದವ್ ಅವರು ಐರೋಪ್ಯ ಒಕ್ಕೂಟದ ಕಮಿಷನರ್‌ಗಳಾದ ಜೆಸ್ಸಿಕಾ ರೋಸ್ವಾಲ್ ಮತ್ತು ವೊಪ್ಕೆ ಹೋಯಿಕ್‌ಸ್ಟ್ರಾ ಅವರನ್ನು ಶುಕ್ರವಾರ ಭೇಟಿಯಾಗಿ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಕ್ಷೇತ್ರದಲ್ಲಿ ಪರಸ್ಪರ ಸಹಭಾಗಿತ್ವ ಮತ್ತು ಹಿತಾಸಕ್ತಿ ಕಾಯ್ದುಕೊಳ್ಳುವ ಬಗ್ಗೆ ಶುಕ್ರವಾರ ಚರ್ಚಿಸಿದರು. ಭಾರತವು ತನ್ನ ನವೀಕೃತ ಹವಾಮಾನ ಕ್ರಿಯಾ ಯೋಜನೆಗಳ ಗುರಿ ಸಾಧಿಸುವ ಹಾದಿಯಲ್ಲಿದೆ ಎಂದು ಯಾದವ್, ರೋಸ್ವಾಲ್ ಮತ್ತು ಹೋಯಿಕ್‌ಸ್ಟ್ರಾ ಅವರಿಗೆ ತಿಳಿಸಿದರು.

'ಎಂಎಸ್‌ಪಿಗೆ ಕಾನೂನು ಭರವಸೆ ನೀಡಿ'

ನವದೆಹಲಿ (ಪಿಟಿಐ): ಬಿಜೆಪಿಯು ದೇಶದ ರೈತರ ವಿರುದ್ಧ ಸೇಡು ತೀರಿಸಿಕೊಳ್ಳುವ ಕೆಲಸ ಮಾಡುತ್ತಿದೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದೆ.

ಈ ಕುರಿತು ಮಾತನಾಡಿದ ಕಾಂಗ್ರೆಸ್ ನಾಯಕ ಅಭಯ್ ದುಬೆ 'ಸರ್ಕಾರವು ರೈತ ವಿರೋಧಿಯಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ರೈತರಿಗೆ ನೀಡಲಾಗುತ್ತಿದ್ದ ಬೋನಸ್ ಅನ್ನು ಸ್ಥಗಿತಗೊಳಿಸಲಾಯಿತು. ಭೂಮಿಯ ಮೇಲಿನ ರೈತರ ಹಕ್ಕನ್ನು ಕಸಿದುಕೊಳ್ಳುವ ಪ್ರಕ್ರಿಯೆ ಆರಂಭಿಸಲಾಯಿತು ಹಾಗೂ ವೆಚ್ಚದ ಶೇ50ಕ್ಕಿಂತ ಅಧಿಕ ಕನಿಷ್ಠ ಬೆಂಬಲ ಬೆಲೆಯನ್ನು ನೀಡಲು ನಿರಾಕರಿಸಲಾಯಿತು. ಕರಾಳ ಕೃಷಿ ಕಾನೂನು ಜಾರಿಗೆ ಮಾಡಲಾಯಿತು (ಇದೀಗ ಹಿಂಪಡೆಯಲಾಗಿದೆ)' ಎಂದು ಆರೋಪಿಸಿದರು. ಅಲ್ಲದೇ 'ಕೇಂದ್ರ ಸರ್ಕಾರವು ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಎಮ್‌ಎಸ್‌ಪಿ ನಿಗದಿ ಮಾಡಬೇಕು. ಕನಿಷ್ಠ ಬೆಂಬಲ ಬೆಲೆಗೆ (ಎಮ್‌ಎಸ್‌ಪಿ) ಕಾನೂನಾತ್ಮಕ ಭರವಸೆ ನೀಡಬೇಕು' ಎಂದು ಒತ್ತಾಯಿಸಿದರು.

ಏರ್‌ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಹೇಳಿಕೆ

'ದೇಶೀಯ ವ್ಯವಸ್ಥೆಗೆ ಹೆಚ್ಚು ಆದ್ಯತೆ'

ನವದೆಹಲಿ (ಪಿಟಿಐ): ರಕ್ಷಣಾ ಕ್ಷೇತ್ರದಲ್ಲಿ ದೇಶೀಯವಾಗಿ ಅಭಿವೃದ್ಧಿಪಡಿಸಿದ ವ್ಯವಸ್ಥೆಯು ಕಡಿಮೆ ಸಾಮರ್ಥ್ಯ ಹೊಂದಿದ್ದರೂ ಭಾರತೀಯ ವಾಯುಪಡೆಯು ಅದಕ್ಕೇ ಹೆಚ್ಚಿನ ಆದ್ಯತೆ ನೀಡಲಿದೆ ಎಂದು ಏರ್‌ಚೀಫ್ ಮಾರ್ಷಲ್ ಎ.ಪಿ ಸಿಂಗ್ ಶುಕ್ರವಾರ ಹೇಳಿದರು.



ಎ.ಪಿ ಸಿಂಗ್

ಕಾರ್ಯಕ್ರಮವೊಂದರಲ್ಲಿ 'ಭಾರತ 2047; ಯುದ್ಧದಲ್ಲಿ ಆತ್ಮನಿರ್ಭರತೆ' ವಿಷಯದ ಬಗ್ಗೆ ಮಾತನಾಡಿದ ಅವರು, 'ಪ್ರತಿ ವರ್ಷ ಭಾರತದಲ್ಲಿ ಕನಿಷ್ಠ 35-40 ಯುದ್ಧ ವಿಮಾನಗಳು ತಯಾರಾಗಬೇಕಾದ ಅಗತ್ಯವಿದೆ. ಈ ಗುರಿಯು ಅಸಾಧ್ಯವಾದುದೇನಲ್ಲ' ಎಂದು ಹೇಳಿದರು.

'ದೇಶೀಯವಾಗಿ ಅಭಿವೃದ್ಧಿಪಡಿಸಿದ ವ್ಯವಸ್ಥೆಯು ಕಡಿಮೆ ಸಾಮರ್ಥ್ಯ ಹೊಂದಿದ್ದರೂ, ಜಾಗತಿಕ ಮಾರುಕಟ್ಟೆಯಲ್ಲಿ ಲಭ್ಯವಿರುವ ಸಾಧನಗಳಿಗಿಂತ ಶೇ 90ರಷ್ಟು ಅಥವಾ 85ರಷ್ಟು ಸಾಮರ್ಥ್ಯ ಹೊಂದಿದ್ದರೂ ದೇಶೀಯವಾಗಿ ಅಭಿವೃದ್ಧಿಪಡಿಸಿರುವುದಕ್ಕೇ ಆದ್ಯತೆ ನೀಡುತ್ತೇನೆ' ಎಂದು ತಿಳಿಸಿದರು.

ರಾತ್ರೋ ರಾತ್ರಿ ಸ್ವಾವಲಂಬನೆ ಸಾಧ್ಯವಿಲ್ಲ. ಅದಕ್ಕೆ ಸಮಯ ಮತ್ತು ಬೆಂಬಲ ಬೇಕಾಗುತ್ತದೆ. ಹೀಗಾಗಿ ಯಾವುದೇ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗೆ ಭಾರತೀಯ ವಾಯುಪಡೆಯು ಬದ್ಧವಾಗಿದೆ ಎಂದರು.

ಯಾರು ಎಲ್ಲಿಗೆ ಹೋಗುತ್ತಾರೆ ಎಂದು ಭಾರತಕ್ಕೆ ಗೊತ್ತು: ದಿನೇಶ್ ಕೆ. ತ್ರಿಪಾಠಿ

ನವದೆಹಲಿ (ಪಿಟಿಐ): ಚೀನಾ ದೇಶವು ಕೆಲವು ದಶಕಗಳಿಂದ ಅರಬ್ಬೀ ಸಮುದ್ರದಲ್ಲಿ ತನ್ನ ಉಪಸ್ಥಿತಿಯನ್ನು ಹೆಚ್ಚು ಮಾಡಿದೆ. ಪೀಪಲ್ಸ್ ಲಿಬರೇಷನ್ ಆರ್ಮಿಯ 6-8 ನೌಕೆಗಳು ಯಾವುದೇ ಸಮಯದಲ್ಲಿಯೂ ಅಲ್ಲಿ ಇರುತ್ತವೆ. ಆದರೆ ಯಾರು ಎಲ್ಲಿಗೆ ಹೋಗುತ್ತಾರೆ, ಏನು ಮಾಡುತ್ತಾರೆ ಎಂಬ ಮಾಹಿತಿ ಭಾರತಕ್ಕೆ ತಿಳಿದಿರುತ್ತದೆ ಎಂದು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಅವರು ಶುಕ್ರವಾರ ತಿಳಿಸಿದರು.

ಯಾರು, ಎಲ್ಲಿ, ಏನು ಮಾಡುತ್ತಿದ್ದಾರೆ ಎಂಬ ಸಂಪೂರ್ಣ ಮಾಹಿತಿ ಭಾರತದ ನೌಕಾಪಡೆಗೆ ಇರುತ್ತದೆ. ಬಾಹ್ಯಾಕಾಶ ಆಧಾರಿತ ಕಣ್ಗಾವಲು ಜತೆಗೆ ಮಾನವಸಹಿತ, ಮಾನವರಹಿತ ತಂತ್ರಜ್ಞಾನದ ಮೂಲಕ ಹದ್ದಿನ ಕಣ್ಣಿಡಲಾಗುತ್ತದೆ. ಅಂತರರಾಷ್ಟ್ರೀಯ ಸಂಸ್ಥೆಗಳ ಮೂಲಕವೂ ಮಾಹಿತಿ ಲಭಿಸುತ್ತದೆ ಎಂದು ಅವರು ತಿಳಿಸಿದರು.





ಅಫ್ಗನ್ ಹೋರಾಟ: ಸೆಮಿಗೆ ಆಸ್ಟ್ರೇಲಿಯಾ

ಅಟಲ್, ಒಮರ್‌ಝೈ ದಿಟ್ಟ ಬ್ಯಾಟಿಂಗ್ • ಟ್ರಾವಿಸ್ ಹೆಡ್ ಅರ್ಧಶತಕ • ಪಂದ್ಯಕ್ಕೆ ಮಳೆ ಅಡ್ಡಿ

ಲಾಹೋರ್ (ಪಿಟಿಐ): ಅಫ್ಗಾನಿಸ್ತಾನ ತಂಡದ ಕೆಚ್ಚೆದೆಯ ಹೋರಾಟಕ್ಕೆ ಮಳೆ ಅಡ್ಡಿಯಾಯಿತು. ಆಸ್ಟ್ರೇಲಿಯಾ ತಂಡವು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ರಾತ್ರಿ ಸಾದಿಕುಲ್ಲಾ ಅಟಲ್ (85; 95ಎ, 4X6, 6X3) ಮತ್ತು ಅಜ್ಮತ್‌ಉಲ್ಲಾ ಒಮರ್‌ಝೈ (67; 63ಎ, 4X1, 6X5) ಅವರ ಆಕರ್ಷಕ ಅರ್ಧಶತಕಗಳ ಬಲದಿಂದ ಅಫ್ಗಾನಿಸ್ತಾನ ತಂಡವು ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ 50 ಓವರ್‌ಗಳಲ್ಲಿ 273 ರನ್ ಗಳಿಸಿತ್ತು.

ಈ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು 12.5 ಓವರ್‌ಗಳಲ್ಲಿ 1 ವಿಕೆಟ್‌ಗೆ 109 ರನ್ ಗಳಿಸಿತು. ಟ್ರಾವಿಸ್ ಹೆಡ್ (ಔಟಾಗದೇ 59; 40ಎಸೆತ, 4X9, 6X1) ಮತ್ತು ಸ್ಟೀವ್ ಸ್ಮಿತ್ (ಔಟಾಗದೇ 19; 22ಎ) ಅವರು ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು. ಈ ಹಂತದಲ್ಲಿ ಆರಂಭವಾದ ಮಳೆ ರಭಸವಾಗಿ ಸುರಿಯಿತು. ಮೈದಾನದಲ್ಲಿ ನೀರು ತುಂಬಿತು.

ಮಳೆ ನಿಂತು ಹೋದ ಮೇಲೆ ಪಿಚ್ ಮತ್ತು ಹೊರಾಂಗಣವನ್ನು ಪರೀಕ್ಷಿಸಿದ ಅಂಪೈರ್‌ಗಳು ಪಂದ್ಯವನ್ನು ಸ್ಥಗಿತ-ಗೊಳಿಸಿದರು. ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಿದರು. ಒಟ್ಟು 4 ಅಂಕ ಗಳಿಸಿದ ಆಸ್ಟ್ರೇಲಿಯಾ ನಾಲ್ಕರ ಘಟ್ಟ ಪ್ರವೇಶಿಸಿತು. 3 ಅಂಕದೊಂದಿಗೆ ಅಫ್ಗನ್ ಪಡೆ ಅಭಿಯಾನ ಮುಗಿಸಿತು.



ಅಫ್ಗಾನಿಸ್ತಾನದ ಸಾಧಿಕುಲ್ಲಾ ಅಟಲ್ ಅರ್ಧಶತಕದ ಸಂಭ್ರಮ –ಎಪಿ/ಪಿಟಿಐ ಚಿತ್ರ

ಆದರೆ ಅಟಲ್ ಮತ್ತು ಒಮರ್‌ಝೈ ಆಟ ನೆನಪಿನಲ್ಲಿ ಉಳಿಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಅಫ್ಗನ್ ತಂಡವು ಆರಂಭದಲ್ಲಿಯೇ ಆಘಾತ ಅನುಭವಿಸಿತು. ಆಸ್ಟ್ರೇಲಿಯಾದ ವೇಗಿ ಸ್ಪೆನ್ಸರ್ ಜಾನ್ಸನ್ (49ಕ್ಕೆ2), ಬೆನ್ ದ್ವಾರಶೈಸ್ (47ಕ್ಕೆ3) ಮತ್ತು ಸ್ಪಿನ್ನರ್ ಆ್ಯಡಂ ಜಂಪಾ (48ಕ್ಕೆ2) ವಿಕೆಟ್ ಗಳಿಸಿದರು.

ಆದರೆ ಅಫ್ಗನ್ ಪಡೆಯು ಅನುಭವಿ ಆಸ್ಟ್ರೇಲಿಯಾ ಎದುರು ತೋರಿದ ದಿಟ್ಟ ಬ್ಯಾಟಿಂಗ್ ಗಮನ ಸೆಳೆಯಿತು. ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಸ್ಪೆನ್ಸರ್ ಜಾನ್ಸನ್ ಎಸೆತದಲ್ಲಿ ರೆಹಮಾನುಲ್ಲಾ ಗುರ್ಬಾಜ್ ವಿಕೆಟ್ ಉರುಳಿತು. ಕ್ರೀಸ್‌ಗೆ ಬಂದ ಅಟಲ್, ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಇಬ್ರಾಹಿಂ ಜದ್ರಾನ್ (22; 28ಎ) ಮತ್ತು ಅಟಲ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 67 ರನ್ ಸೇರಿಸಿದರು.

ಅಟಲ್ ಮತ್ತು ನಾಯಕ ಶಹೀದಿ (20 ರನ್) ಅವರು 4ನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಸೇರಿಸಿದರು. ಗ್ಲೆನ್ ಮ್ಯಾಕ್ಸ್‌ವೆಲ್ ಎಸೆತವನ್ನು ಸಿಕ್ಸರ್‌ಗೆತ್ತಿ ಅರ್ಧಶತಕ ಪೂರೈಸಿದರು. ಆ್ಯಡಂ ಜಂಪಾ ಓವರ್‌ನಲ್ಲಿಯೂ ಎರಡು ಸಿಕ್ಸರ್ ಸಿಡಿಸಿದರು. ಶತಕಕ್ಕೆ 15 ರನ್‌ಗಳ ಅಗತ್ಯವಿದ್ದ ಸಂದರ್ಭದಲ್ಲಿ ಅಟಲ್ ಅವರಿಗೆ ಸ್ಪೆನ್ಸರ್ ಜಾನ್ಸನ್ ಪೆವಿಲಿಯನ್ ದಾರಿ ತೋರಿಸಿದರು. ಸ್ವಲ್ಪ ಹೊತ್ತಿನಲ್ಲಿ ಶಹೀದಿ ಕೂಡ ನಿರ್ಗಮಿಸಿದರು.

ಆಗ ಕ್ರೀಸ್‌ಗೆ ಬಂದ ಒಮರ್‌ಝೈ ಬೀಸಾಟ ಆರಂಭಿಸಿದರು. ಆದರೆ ಇನ್ನೊಂದು ಬದಿಯಲ್ಲಿ ಬ್ಯಾಟರ್‌ಗಳು ಹೆಚ್ಚು ಹೊತ್ತು ನಿಲ್ಲಲಿಲ್ಲ. ಇದನ್ನು ಲೆಕ್ಕಿಸದ ಒಮರ್‌ಝೈ ಮಾತ್ರ ಮೈದಾನದಲ್ಲಿ ಸಿಕ್ಸರ್‌ಗಳ ಚಿತ್ತಾರ ಬಿಡಿಸಿದರು. ರಶೀದ್ ಖಾನ್ ಕೂಡ 17 ಎಸೆತಗಳಲ್ಲಿ 19 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 50 ಓವರ್‌ಗಳಲ್ಲಿ 273 (ಇಬ್ರಾಹಿಂ ಜದ್ರಾನ್ 22, ಸಾಧಿಕುಲ್ಲಾ ಅಟಲ್ 85, ಹಷ್ಮತ್‌ಉಲ್ಲಾ ಶಹೀದಿ 20, ಅಜ್ಮತ್ ಉಲ್ಲಾ ಒಮರ್‌ಝೈ 67, ರಶೀದ್ ಖಾನ್ 19, ಸ್ಪೆನ್ಸರ್ ಜಾನ್ಸನ್ 49ಕ್ಕೆ2, ಬೆನ್ ದ್ವಾರಶೈಸ್ 47ಕ್ಕೆ3, ಆ್ಯಡಂ ಜಂಪಾ 48ಕ್ಕೆ2) ಆಸ್ಟ್ರೇಲಿಯಾ: 12.5 ಓವರ್‌ಗಳಲ್ಲಿ 1 ವಿಕೆಟ್‌ಗೆ 109 (ಮ್ಯಾಥ್ಯೂ ಶಾರ್ಟ್ 20, ಟ್ರಾವಿಸ್ ಹೆಡ್ ಔಟಾಗದೇ 59, ಸ್ಟೀವ್ ಸ್ಮಿತ್ ಔಟಾಗದೇ 19, ಅಜ್ಮತ್‌ಉಲ್ಲಾ ಒಮರ್‌ಝೈ 13ಕ್ಕೆ1) ಮಳೆಯಿಂದಾಗಿ ಪಂದ್ಯ ಸ್ಥಗಿತ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಗುಂಪು ಎ						
ನ್ಯೂಜಿಲೆಂಡ್	2	2	0	0	4	0.863
ಭಾರತ	2	2	0	0	4	0.647
ಬಾಂಗ್ಲಾದೇಶ	3	0	2	1	1	-0.443
ಪಾಕಿಸ್ತಾನ	3	0	2	1	1	-1.087
ಗುಂಪು ಬಿ						
ಆಸ್ಟ್ರೇಲಿಯಾ	3	1	0	2	4	0.475
ದಕ್ಷಿಣ ಆಫ್ರಿಕಾ	2	1	0	1	3	2.140
ಅಫ್ಗಾನಿಸ್ತಾನ	3	1	1	1	3	-0.990
ಇಂಗ್ಲೆಂಡ್	2	0	2	0	0	-0.305

ಬಟ್ಲರ್ ಪಡೆಗೆ ಸಮಾಧಾನಕರ ಗೆಲುವಿನ ವಿಶ್ವಾಸ

ದಕ್ಷಿಣ ಆಫ್ರಿಕಾಕ್ಕೆ ಇಂಗ್ಲೆಂಡ್ ಸವಾಲು

ಕರಾಚಿ (ಪಿಟಿಐ): ಸೆಮಿಫೈನಲ್ ಸ್ಥಾನವನ್ನು ಬಹುತೇಕ ಖಚಿತಪಡಿಸಿ-ಕೊಂಡಿರುವ ದಕ್ಷಿಣ ಆಫ್ರಿಕಾ ತಂಡ, ಶನಿವಾರ ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.



ತೆಂಬ ಬವುಮಾ

ಒಂದು ಕಡೆ ನಾಕೌಟ್ ಹಂತ ಆಡುವ ಮೊದಲು ವಿಶ್ವಾಸ ಹೆಚ್ಚಿಸಿಕೊಳ್ಳಲು ಈ ಪಂದ್ಯ ಹರಿಣಗಳ ಪಾಲಿಗೆ ನಿರ್ಣಾಯಕ. ಇನ್ನೊಂದು ಕಡೆ, ತವರಿಗೆ ಮರಳುವ ಮೊದಲು ಸಮಾಧಾನಕರ ಜಯಸಾಧಿಸುವ ತವಕದಲ್ಲಿ ಇಂಗ್ಲೆಂಡ್ ತಂಡ ಇದೆ.

'ಎ' ಗುಂಪಿನಿಂದ ಭಾರತ ಮತ್ತು ನ್ಯೂಜಿಲೆಂಡ್ ಈ ಮೊದಲೇ ನಾಕೌಟ್‌ಗೇರಿವೆ. ಬಿ ಗುಂಪಿನಿಂದ ಆಸ್ಟ್ರೇಲಿಯಾ ಈಗ ಮೊದಲ ಸ್ಥಾನಕ್ಕೇರಿದ್ದು ಸೆಮಿಫೈನಲ್ ಪ್ರವೇಶಿಸಿದೆ. ದಕ್ಷಿಣ ಆಫ್ರಿಕಾ ಗೆದ್ದರೆ ಅದು ಗುಂಪಿನಲ್ಲಿ ಮೊದಲ ಸ್ಥಾನಕ್ಕೇರಲಿದೆ. ಅಲ್ಪ ಅಂತರದಿಂದ ಸೋತರೂ, ರನ್‌ರೇಟ್ ಉತ್ತಮವಾಗಿರುವ ಕಾರಣ ಅದರ ನಾಕೌಟ್ ಮುನ್ನಡೆ ಅಬಾಧಿತ. ಅಫ್ಗನ್ ಬಹುತೇಕ ಹೊರಬಿದ್ದಿದೆ.

ದಕ್ಷಿಣ ಆಫ್ರಿಕಾ ಮೊದಲ ಪಂದ್ಯದಲ್ಲಿ ಗಳಿಸಿದ ಸುಲಭ ಗೆಲುವಿನಿಂದ ಹೆಚ್ಚು ಉತ್ಸಾಹದಲ್ಲಿದೆ. ಅದರ ಎರಡನೇ ಪಂದ್ಯ (ಆಸ್ಟ್ರೇಲಿಯ ವಿರುದ್ಧ) ಮಳೆಗೆ ಕೊಚ್ಚಿಹೋಗಿತ್ತು.

ಅಫ್ಗಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ರಯಾನ್ ರಿಕೆಲ್ಟನ್ ಶತಕ ಬಾರಿಸಿದ್ದರು. ನಾಯಕ ತೆಂಬ ಬವುಮಾ, ರಸಿ ವಾನ್ ಡೆರ್ ಡಸೆ ಮತ್ತು ಏಡನ್ ಮರ್ಕರಂ ಅರ್ಧ ಶತಕಗಳನ್ನು ಹೊಡೆದಿದ್ದರು. ಇದರಿಂದ ದಕ್ಷಿಣ ಆಫ್ರಿಕಾ 6 ವಿಕೆಟ್‌ಗೆ 315 ರನ್‌ಗಳ ದೊಡ್ಡ ಮೊತ್ತ ಗಳಿಸಿತ್ತು. ಆ ದೊಡ್ಡ ಮೊತ್ತದೆದುರು ಅಫ್ಗಾನಿಸ್ತಾನ ತಂಡ ಹೆಚ್ಚಿನ ಹೋರಾಟ ತೋರಿರಲಿಲ್ಲ.

ಕಾಗದದ ಮೇಲೆ ದಕ್ಷಿಣ ಆಫ್ರಿಕಾ ಪ್ರಬಲ ತಂಡವಾಗಿ ಕಾಣಿಸುತ್ತಿದೆ. ಆದರೆ ಜನವರಿ 2024ರಿಂದ ಇಲ್ಲಿಯವರೆಗೆ ಆಡಿರುವ 12 ಏಕದಿನ ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಎಂಟರಲ್ಲಿ ಸೋತಿದೆ. ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ತ್ರಿಕೋನ (ಪಾಕ್, ನ್ಯೂಜಿಲೆಂಡ್ ಒಳಗೊಂಡ) ಸರಣಿಯಲ್ಲೂ ಹರಿಣಗಳ ಪಡೆ ಫೈನಲ್ ತಲುಪಲು ವಿಫಲವಾಗಿತ್ತು.

ಹೀಗಾಗಿ ವಿಶ್ವಾಸದೊಡನೆ ಲೀಗ್ ಮುಗಿಸಬೇಕಾದರೆ ಬವುಮಾ ಪಡೆ ಹೆಚ್ಚಿನಿಂದ ಜವಾಬ್ದಾರಿಯುತವಾಗಿ ಇಂಗ್ಲೆಂಡ್ ಎದುರು ಸ್ಥಿರ ಪ್ರದರ್ಶನ ನೀಡಬೇಕಾಗಿದೆ. ಜೋ ರೂಟ್ ಅವರನ್ನು ಬಿಟ್ಟರೆ ಇಂಗ್ಲೆಂಡ್‌ನ ಹೆಚ್ಚಿನ ಆಟಗಾರರು ಲಯದಲ್ಲಿಲ್ಲ. ಭಾರತ ಎದುರು 0–3ರಲ್ಲಿ ಸರಣಿ ಸೋತ ಬಳಿಕ ಇಂಗ್ಲೆಂಡ್‌ನ ಸೋಲಿನ ಸರಪಣಿ ಮುಂದುವರಿದಿದೆ. ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಶತಕ ಬಾರಿಸಿದ ರೂಟ್ ಒಳ್ಳೆಯ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 2.30; ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಹಾಟ್‌ಸ್ಟಾರ್

ನಾಯಕತ್ವ ತ್ಯಜಿಸಿದ ಬಟ್ಲರ್



ಕರಾಚಿ (ಎಎಫ್‌ಪಿ): ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಇಂಗ್ಲೆಂಡ್ ತಂಡವು ಸೆಮಿಫೈನಲ್ ಪ್ರವೇಶಿಸಲು ವಿಫಲವಾದ ಬೆನ್ನಲ್ಲೇ ಸೀಮಿತ ಓವರ್‌ಗಳ ತಂಡದ ನಾಯಕತ್ವವನ್ನು ಜೋಸ್ ಬಟ್ಲರ್ ತ್ಯಜಿಸಿದ್ದಾರೆ.

ಇಂಗ್ಲೆಂಡ್ ತಂಡವು ಕೊನೆಯ 21 ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 15ರಲ್ಲಿ ಸೋತಿದೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲಿ ಪರಾಭವಗೊಂಡು, ತಂಡವು ಗುಂಪು ಹಂತದಲ್ಲೇ ಹೊರಬಿದ್ದಿದೆ.

'ನಾನು ತೆಗೆದುಕೊಂಡಿರುವ ನಿರ್ಧಾರ ತಂಡದ ಪಾಲಿಗೆ ಸರಿ ಇದೆ. ಕೋಚ್ ಬ್ರೆಂಡನ್ ಮೆಕಲಮ್ ಅವರೊಂದಿಗೆ ಕೈಜೋಡಿಸಿ, ಯಾರಾದರೂ ಸಮರ್ಥರು ತಂಡವನ್ನು ಮುಂದೆ ಕೊಂಡೊಯ್ಯುವ ವಿಶ್ವಾಸವಿದೆ' ಎಂದು 34 ವರ್ಷ ವಯಸ್ಸಿನ ಬಟ್ಲರ್ ಹೇಳಿದ್ದಾರೆ.

ಬಟ್ಲರ್ ನಾಯಕತ್ವದಲ್ಲಿ ಇಂಗ್ಲೆಂಡ್ ತಂಡವು 44 ಏಕದಿನ ಪಂದ್ಯ ಆಡಿದೆ. ಅದರಲ್ಲಿ 18 ಗೆಲುವು, 25 ಸೋಲನ್ನು ಕಂಡಿದೆ. 51 ಟಿ20 ಪಂದ್ಯಗಳಲ್ಲಿ 26ರಲ್ಲಿ ಗೆಲುವು ಸಾಧಿಸಿದೆ.

ರಣಜಿ ಫೈನಲ್: ಒಂದೇ ಋತುವಿನಲ್ಲಿ ಗರಿಷ್ಠ ವಿಕೆಟ್ ಪಡೆದು ದುಬೆ ದಾಖಲೆ

ಮಹತ್ವದ ಮುನ್ನಡೆ ಪಡೆದ ವಿದರ್ಭ

ನಾಗ್ಪುರ (ಪಿಟಿಐ): ವಿದರ್ಭ ತಂಡ ರಣಜಿ ಟ್ರೋಫಿ ಕ್ರಿಕೆಟ್ ಫೈನಲ್ ಪಂದ್ಯದ ಮೂರನೇ ದಿನವಾದ ಶುಕ್ರವಾರ ಕೇರಳ ವಿರುದ್ಧ 37 ರನ್‌ಗಳ ಮಹತ್ವದ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಿತು. ಉದಯೋನ್ಮುಖ ಎಡಗೈ ಸ್ಪಿನ್ನರ್ ಹರ್ಷ ದುಬೆ (88ಕ್ಕೆ3) ಅವರು ಒಂದೇ ಋತುವಿನಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಪಡೆದ ದಾಖಲೆಗೆ ಭಾಜನರಾದರು.

22 ವರ್ಷ ವಯಸ್ಸಿನ ದುಬೆ ಈ ಋತುವಿನಲ್ಲಿ 69 ವಿಕೆಟ್‌ಗಳನ್ನು ಪಡೆದಿದ್ದು, ಬಿಹಾರದ ಎಡಗೈ ಸ್ಪಿನ್ನರ್ ಅಶುತೋಷ್ ಅಮನ್ 2018–19ರಲ್ಲಿ ಸ್ಥಾಪಿಸಿದ್ದ 68 ವಿಕೆಟ್‌ಗಳ ದಾಖಲೆ ಮುರಿದರು.

ಇದೇ ಮೊದಲ ಬಾರಿ ಫೈನಲ್‌ನಲ್ಲಿ ಆಡುತ್ತಿರುವ ಕೇರಳ ಮೂರನೇ ದಿನವೂ ಪ್ರತಿರೋಧ ತೋರಿಸಿತು. ಆಲ್‌ರೌಂಡರ್ ಆದಿತ್ಯ ಸರವಟೆ (79, 185 ಎಸೆತ) ಹೋರಾಟದ ನಂತರ ನಾಯಕ ಸಚಿನ್ ಬೇಬಿ ವೀರೋಚಿತ ಇನಿಂಗ್ಸ್ ಆಡಿ 98 ರನ್ (235 ಎಸೆತ, 4x10) ಬಾರಿಸಿದರು. ಆದರೆ ಕೇರಳ ಅಂತಿಮವಾಗಿ ದಿನದ ಕೊನೆಯ ಓವರಿನಲ್ಲಿ 342 ರನ್‌ಗಳಿಗೆ ಮೊದಲ ಇನಿಂಗ್ಸ್ ಮುಗಿಸಿತು. ವಿದರ್ಭ ಮೊದಲ ಇನಿಂಗ್ಸ್‌ನಲ್ಲಿ 379 ರನ್ ಗಳಿಸಿತ್ತು.

ವಿದರ್ಭ ಬೌಲರ್‌ಗಳಾದ ಹರ್ಷ ದುಬೆ, ದರ್ಶನ್ ನಲ್ಕಂಡೆ (52ಕ್ಕೆ3) ಮತ್ತು ಪಾರ್ಥ ರೇಖಡೆ (65ಕ್ಕೆ3) ಅವರು ತಲಾ ಮೂರು ವಿಕೆಟ್‌ಗಳನ್ನು ಪಡೆದರು.

3 ವಿಕೆಟ್‌ಗೆ 131 ರನ್‌ಗಳೊಡನೆ ದಿನದಾಟ ಮುಂದುವರಿಸಿದ ಕೇರಳ ಮೊದಲು ಸರವಟೆ ಅವರನ್ನು ಕಳೆದು ಕೊಂಡಿತು. ದುಬೆ ಈ ಮಹತ್ವದ ವಿಕೆಟ್ ಪಡೆದರು. ನಾಗ್ಪುರದವರಾದ ಸರವಟೆ, ನಿರೀಕ್ಷೆ ಮೀರಿ ಪುಟಿದ ಚೆಂಡನ್ನು ಆಡಲು ಹೋಗಿ ಸಿಲಿ ಪಾಯಿಂಟ್‌ನಲ್ಲಿದ್ದ ಬದಲಿ ಫೀಲ್ಡರ್ ಅಮನ್ ಮೋಖಡೆಗೆ ಕ್ಯಾಚಿತ್ತರು. ಇದರಿಂದ ಸಚಿನ್ ಜೊತೆ 63 ರನ್‌ಗಳ ನಾಲ್ಕನೇ ವಿಕೆಟ್ ಜೊತೆಯಾಟ ಮುರಿಯಿತು.



ಕೇರಳದ ಆದಿತ್ಯ ಸರವಟೆ ಅವರ ವಿಕೆಟ್ ಪಡೆದ ವಿದರ್ಭದ ಎಡಗೈ ಸ್ಪಿನ್ನರ್ ಹರ್ಷ ದುಬೆ ಅವರನ್ನು ಸಹ ಆಟಗಾರರು ಅಭಿನಂದಿಸಿದರು. ಪಿಟಿಐ ಚಿತ್ರ

ಸಚಿನ್ ಬೇಬಿ ಅವರನ್ನು ಒಳಗೊಂಡು ಕೊನೆಯ 4 ವಿಕೆಟ್‌ಗಳು 18 ರನ್ನಿಗೆ ಉರುಳಿದವು. ನೆಲಕಚ್ಚಿ ಆಡುತ್ತಿದ್ದ ಸಚಿನ್, ಎಡಗೈ ಸ್ಪಿನ್ನರ್ ಪಾರ್ಥ ರೇಖಡೆ ಬೌಲಿಂಗ್‌ನಲ್ಲಿ ಆಫ್ ಸ್ಟಂಪ್ ಆಚೆಯಿದ್ದ ಚೆಂಡನ್ನು ಸ್ಲಾಗ್ ಸ್ವೀಪ್ ಮಾಡಿದರು. ಆದರೆ ಅದು ಡೀಪ್ ಮಿಡ್‌ವಿಕೆ-ಟ್‌ನಲ್ಲಿದ್ದ ಕರುಣ್ ನಾಯರ್ ಕೈಸೇರಿದಾಗ ಕೇರಳದ ಮುನ್ನಡೆ ಆಸೆ ಕರಗಿತು.

ಸಚಿನ್ ಮೂರು ಉಪಯುಕ್ತ ಜೊತೆಯಾಟಗಳಲ್ಲಿ ಭಾಗಿಯಾಗಿದ್ದರು. ಸಲ್ಮಾನ್ ನಿಸಾರ್ (21, 42ಎ) ಜೊತೆ ಐದನೇ ವಿಕೆಟ್‌ಗೆ 49 ರನ್, ವಿಕೆಟ್ ಕೀಪರ್ ಮೊಹಮ್ಮದ್ ಅಜರುದ್ದೀನ್ (34, 59ಎ) ಜೊತೆ ಆರನೇ ವಿಕೆಟ್‌ಗೆ 59 ರನ್ ಮತ್ತು ಜಲಜ್ ಸಕ್ಸೇನ (28) ಜೊತೆ ಏಳನೇ ವಿಕೆಟ್‌ಗೆ 46 ರನ್ ಪೇರಿಸಿ ಏಳನೆಯವರಾಗಿ (324) ನಿರ್ಗಮಿಸಿದ್ದರು. 13 ರನ್ ನಂತರ ಜಲಜ್ ಅವರು ರೇಖಡೆ ಬೌಲಿಂಗ್‌ನಲ್ಲಿ ಪ್ಯಾಡಲ್ ಸ್ವೀಪ್‌ಗೆ ಹೋಗಿ ಬೌಲ್ಡ್ ಆದರು.

ಆದರೆ ದುಬೆ ತಮ್ಮ ಮೂರನೇ ವಿಕೆಟ್‌ಗೆ ಹೆಚ್ಚು ಶ್ರಮ ಹಾಕಿದರು. ಅಂತಿಮವಾಗಿ ಎಂ.ಡಿ.ನಿಧೀಶ್ ಅವರನ್ನು ಎಲ್‌ಬಿ ಬಲೆಗೆ ಕೆಡವಿ ಋತುವಿನ 69ನೇ ವಿಕೆಟ್ ಪಡೆದು ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 123.1 ಓವರುಗಳಲ್ಲಿ 379; ಕೇರಳ: ಮೊದಲ ಇನಿಂಗ್ಸ್: 125 ಓವರುಗಳಲ್ಲಿ 342 (ಆದಿತ್ಯ ಸರವಟೆ 79, ಸಚಿನ್ ಬೇಬಿ 98; ದರ್ಶನ್ ನಲ್ಕಂಡೆ 52ಕ್ಕೆ3, ಹರ್ಷ ದುಬೆ 88ಕ್ಕೆ3, ಪಾರ್ಥ ರೇಖಡೆ 65ಕ್ಕೆ3).

'ಪ್ರತಿಭೆ ಹಣದ ಅಡಿಯಾಳಲ್ಲ'

ನವದೆಹಲಿ (ಪಿಟಿಐ): ಪ್ರತಿಭೆಯು ಹಣದ ಸೆರೆಯಾಳು ಅಲ್ಲ. ಕೆಳ ಮಧ್ಯಮ ಅಥವಾ ಮಧ್ಯಮ ವರ್ಗದ ಕುಟುಂಬಗಳ ಕ್ರೀಡಾಪಟುಗಳೂ ಉನ್ನತ ಸಾಧನೆ ಮಾಡುವ ಅವಕಾಶಗಳು ಇವೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಕ್ರೀಡೆ ಸಹಕಾರಿ ಎನ್ನುವುದನ್ನು ಮರೆಯ ಬಾರದು ಎಂದು ಅಂತರರಾಷ್ಟ್ರೀಯ ಮಾಜಿ ವಾಲಿಬಾಲ್ ಆಟಗಾರ ಮತ್ತು ಒಲಿಂಪಿಯನ್ ಬ್ಯಾಡ್ಮಿಂಟನ್ ಆಟಗಾರ್ತಿ ಸಿಂಧು ಅವರ ತಂದೆ ಪಿ.ವಿ. ರಮಣ ಅಭಿಪ್ರಾಯಪಟ್ಟರು.

'ನಾನು 3 ವರ್ಷದವನಿದ್ದಾಗ ಅಪ್ಪ ನಿಧನರಾದರು. 10 ಮಂದಿ ಮಕ್ಕಳಲ್ಲಿ ನಾನೇ ಚಿಕ್ಕವನಾಗಿದ್ದೆ. ಅಣ್ಣಂದಿರು ಮತ್ತು ಅಕ್ಕಂದಿರು ಬಹಳ ಪ್ರೀತಿಯಿಂದ ನನ್ನ ವಾಲಿಬಾಲ್ ಪ್ರೀತಿಗೆ ಪ್ರೋತ್ಸಾಹ ನೀಡಿದರು. ರಾಷ್ಟ್ರಮಟ್ಟದಲ್ಲಿ ಆಡುವ ಮಟ್ಟಕ್ಕೆ ನನ್ನನ್ನು ಬೆಳೆಸಿದರು. ಅದರಿಂದಾಗಿ ನನಗೆ ರೈಲ್ವೆ ಇಲಾಖೆಯಲ್ಲಿ ಉದ್ಯೋಗ ಲಭಿಸಿತು. ಇದೆಲ್ಲವೂ ಆಗಿದ್ದು ವಾಲಿಬಾಲ್‌ನಿಂದ' ಎಂದು ರಮಣ ಅವರು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಕೆಳಮಧ್ಯಮ ಕುಟುಂಬದಲ್ಲಿ ಜನಿಸಿದ್ದ ರಮಣ 1986ರಲ್ಲಿ ಏಷ್ಯಾ ವಾಲಿಬಾಲ್‌ನಲ್ಲಿ ಪದಕ ಗೆದ್ದ ಭಾರತ ತಂಡವನ್ನು ಪ್ರತಿನಿಧಿಸಿದರು. ಅಷ್ಟೇ ಅಲ್ಲ. ಮಗಳು ಸಿಂಧು ಅವರನ್ನು ಬ್ಯಾಡ್ಮಿಂಟನ್ ಆಟಗಾರ್ತಿಯನ್ನಾಗಿ ಬೆಳೆಸಿದರು.



ಪಿ.ವಿ. ರಮಣ

ಸಿಂಧು ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದರು. ವಿಶ್ವ ಚಾಂಪಿಯನ್ ಕೂಡ ಆಗಿದ್ದರು.

'ಭಾರತದಲ್ಲಿ ಶ್ರೀಮಂತ ಕುಟುಂಬಗಳ ಮಕ್ಕಳಿಗೆ ಮಾತ್ರ ಕ್ರೀಡಾಪಟುಗಳಾಗಲು ಸಾಧ್ಯ. ಮಧ್ಯಮವರ್ಗದವರು ಮಕ್ಕಳನ್ನು ಕ್ರೀಡೆಗೆ ಕಳಿಸುವ ಮುನ್ನ ಯೋಚಿಸಬೇಕು' ಎಂದು ಈಚೆಗೆ ಹಿರಿಯ ಬ್ಯಾಡ್ಮಿಂಟನ್ ಕೋಚ್ ಪುಲ್ಲೇಲ ಗೋಪಿಚಂದ್ ಸಂದರ್ಶನವೊಂದರಲ್ಲಿ ಹೇಳಿದ್ದರು. ಇದು ಕ್ರೀಡಾವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. 61 ವರ್ಷದ ರಮಣ ಅವರು ಗೋಪಿ ಮಾತುಗಳನ್ನು ಅಲ್ಲಗಳೆಯುವಂತಹ ಹೇಳಿಕೆ ನೀಡಿದರು.

'ಪಾಲಕರು ತಮ್ಮ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಬೇಕು. ಸಮ ತೋಲನ ಕಾಯ್ದುಕೊಳ್ಳಬೇಕು. ನನ್ನ ದೊಡ್ಡ ಮಗಳು ವಿದ್ಯಾಭ್ಯಾಸದಲ್ಲಿ ಉತ್ತಮವಾಗಿದ್ದಳು. ಆದ್ದರಿಂದ ಓದಿನಲ್ಲಿಯೇ ಉನ್ನತ ಸಾಧನೆ ಮಾಡುವಂತೆ ಪ್ರೋತ್ಸಾಹಿಸಿದೆ. ಸಿಂಧು ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ತೋರುತ್ತಿದ್ದ ಚುರುಕುತನ ಗಮನ ಸೆಳೆಯಿತು. ಬೇರೆಲ್ಲ ಮಕ್ಕಳಿಗಿಂತ ಚೆನ್ನಾಗಿ ಆಡುವುದನ್ನು ನೋಡಿದೆ. ಪ್ರೋತ್ಸಾಹ ನೀಡಿದೆವು' ಎಂದು ಹೇಳಿದರು.

ಸೋಲಿನಿಂದ ಪಾಠ: ರಾಹುಲ್

ದುಬೈ (ಪಿಟಿಐ): 'ಐಸಿಸಿ ಟೂರ್ನಿಗಳಲ್ಲಿ ಹಿಂದೆ ಅನುಭವಿಸಿದ್ದ ಸೋಲಿನಿಂದ ನಾವು ಪಾಠ ಕಲಿತಿದ್ದೇವೆ. ಹೀಗಾಗಿ, ಇತ್ತೀಚಿನ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಿದೆ' ಎಂದು ಭಾರತ ತಂಡದ ಬ್ಯಾಟರ್ ಮತ್ತು ವಿಕೆಟ್ ಕೀಪರ್ ಕೆ.ಎಲ್.ರಾಹುಲ್ ತಿಳಿಸಿದ್ದಾರೆ.

'2021ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಪ್ರದರ್ಶನ ಉತ್ತಮವಾಗಿರಲಿಲ್ಲ. ಸೆಮಿಫೈನಲ್ ಪ್ರವೇಶಿಸಲು ತಂಡ ವಿಫಲವಾಗಿತ್ತು. ಆದರೆ, ನಂತರದ ದಿನಗಳಲ್ಲಿ ತಪ್ಪುಗಳನ್ನು ತಿದ್ದಿಕೊಂಡಿದ್ದೇವೆ. ಕಳೆದ 2– 3 ಐಸಿಸಿ ಟೂರ್ನಿಗಳಲ್ಲಿ ತಂಡದ ಸಾಧನೆ ನಿಜವಾಗಿಯೂ ಉತ್ತಮವಾಗಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ರಾಹುಲ್ ಅಭಿಪ್ರಾಯಪಟ್ಟರು.

ಸೆಪಕ್ ಟಕ್ರಾ ವಿಶ್ವಕಪ್: ಲೋಗೊ ಬಿಡುಗಡೆ

ಪಟ್ನಾ (ಪಿಟಿಐ): ಸೆಪಕ್ ಟಕ್ರಾ ವಿಶ್ವಕಪ್ ಆಯೋಜಿಸಲು ಬಿಹಾರದಲ್ಲಿ ವೇದಿಕೆ ಸಿದ್ಧವಾಗಿದೆ. ಪಟ್ನಾದ ಪಾಟಲೀಪುತ್ರ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಮಾರ್ಚ್ 20 ರಿಂದ 25ರವರೆಗೆ ವಿಶ್ವಕಪ್ ಟೂರ್ನಿ ನಡೆಯಲಿದೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬುಧವಾರ ನಡೆದ ಕಾರ್ಯಕ್ರಮದಲ್ಲಿ ಟೂರ್ನಿಯ ಲೋಗೊ ಹಾಗೂ ಮ್ಯಾಸ್ಕಾಟ್ ಬಿಡುಗಡೆ ಮಾಡಿದರು. 25 ದೇಶಗಳ ಪುರುಷ ಮತ್ತು ಮಹಿಳಾ ತಂಡಗಳು ಟೂರ್ನಿಯಲ್ಲಿ ಸ್ಪರ್ಧಿಸಲಿವೆ.



ಬದರೀನಾಥ ಸಮೀಪ ಮಾಣಾ ಗ್ರಾಮದಲ್ಲಿ ಶುಕ್ರವಾರ ಸಂಭವಿಸಿದ ಹಿಮಪಾತದಲ್ಲಿ ಸಿಲುಕಿದ ಕೆಲವರನ್ನು ಭಾರತೀಯ ಯೋಧರು ರಕ್ಷಿಸಿ ಹೊರತಂದರು –ಪಿಟಿಐ ಚಿತ್ರ

ಹಿಮಪಾತದಲ್ಲಿ ಸಿಲುಕಿದ 25 ಬಿಆರ್‌ಒ ಕಾರ್ಮಿಕರು

ಒಂದನೇ ಪುಟದಿಂದ...

'ಕಾರ್ಮಿಕರನ್ನು ರಕ್ಷಿಸಲು ಎನ್‌ಡಿಆರ್‌ಎಫ್‌ನ 4 ತಂಡಗಳನ್ನು ಕಳುಹಿಸಲಾಗಿದೆ. ಹೆಚ್ಚುವರಿ 4 ತಂಡಗಳು ಸನ್ನದ್ಧ ಸ್ಥಿತಿಯಲ್ಲಿವೆ' ಎಂದು ಎನ್‌ಡಿಆರ್‌ಎಫ್‌ನ ನಿರ್ದೇಶಕ ಪೀಯೂಷ್ ಆನಂದ್ ತಿಳಿಸಿದ್ದಾರೆ.

'ಸ್ಥಳದಲ್ಲಿ ಪ್ರತಿಕೂಲ ಹವಾಮಾನ ಇರಲಿದೆ ಎಂಬುದಾಗಿ ಮುಂಚಿತವಾಗಿಯೇ ಎಚ್ಚರಿಸಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುನ್ಸೂಚನೆ ನಿರ್ಲಕ್ಷ್ಯ: ಉತ್ತರಾಖಂಡದ ಚಮೋಲಿ, ಉತ್ತರಾಕಾಶಿ, ರುದ್ರ ಪ್ರಯಾಗ್, ಪಿಥೋರಗಢ ಹಾಗೂ ಬಾಗೇಶ್ವರ ಜಿಲ್ಲೆಗಳ 2,400 ಮೀಟರ್ ಎತ್ತರದ ಪ್ರದೇಶದಲ್ಲಿ ಗುರುವಾರ ಸಂಜೆ 5ರಿಂದ ಶುಕ್ರವಾರ ಸಂಜೆ 5ರ ಒಳಗಾಗಿ ಹಿಮಪಾತ ಸಂಭವಿಸಲಿದೆ ಎಂದು ಚಂಡೀಗಢದಲ್ಲಿರುವ ರಕ್ಷಣಾ ಭೂ ಮಾಹಿತಿವಿಜ್ಞಾನ ಸಂಶೋಧನಾ ಸಂಸ್ಥೆ (ಡಿಜಿಆರ್‌ಇ) ಮುನ್ಸೂಚನೆ ನೀಡಿತ್ತು.

'ಈ ಜಿಲ್ಲೆಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೇ ಭಾರಿ ಮಳೆ ಹಾಗೂ ಹಿಮಪಾತವಾಗಲಿದೆ' ಎಂದು ಡೆಹ್ರಾಡೂನ್‌ನಲ್ಲಿರುವ ಹವಾಮಾನ ಇಲಾಖೆ ಕಚೇರಿಯೂ ಪ್ರತ್ಯೇಕವಾಗಿ ಎಚ್ಚರಿಕೆ ನೀಡಿತ್ತು. ಇದರ ಬೆನ್ನಲ್ಲೇ, ರಾಜ್ಯ ತುರ್ತು ಕಾರ್ಯಾಚರಣಾ ಕೇಂದ್ರವೂ ಸಂಬಂಧಪಟ್ಟ ಜಿಲ್ಲೆಗಳಿಗೆ ಎಚ್ಚರಿಕೆ ಮಾಹಿತಿ ನೀಡಿತ್ತು.

ಬೆಂಗಳೂರು ಓಪನ್ ಟೆನಿಸ್: ಡಬಲ್ಸ್‌ನಲ್ಲಿ ಭಾರತದ ಜೋಡಿಗಳಿಗೆ ನಿರಾಸೆ

ಸ್ಕೂಲ್ಕೇಟ್‌ಗೆ ಹ್ಯಾರಿಸ್ ಆಘಾತ

ಪ್ರಜಾವಾಣಿ ವಾರ್ತೆ


ಬ್ರಿಟನ್‌ನ ಬಿಲಿ ಹ್ಯಾರಿಸ್ ಆಟದ ವೈಖರಿ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಬೆಂಗಳೂರು: ಶ್ರೇಯಾಂಕರಹಿತ ಆಟಗಾರ ಬಿಲಿ ಹ್ಯಾರಿಸ್ ಅವರು ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ 125 ಟೆನಿಸ್ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕದ ಟ್ರಿಸ್ಟನ್ ಸ್ಕೂಲ್ಕೇಟ್ ಅವರಿಗೆ ಆಘಾತ ನೀಡಿ ಸೆಮಿಫೈನಲ್‌ಗೆ ಮುನ್ನಡೆದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಕೋರ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಐದನೇ ದಿನವಾದ ಶುಕ್ರವಾರ ನಡೆದ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಬ್ರಿಟನ್‌ನ ಹ್ಯಾರಿಸ್ 6-2, 1-6, 7-5ರ ಮೂರು ಸೆಟ್‌ಗಳ ಸೆಣಸಾಟದಲ್ಲಿ ಆಸ್ಟ್ರೇಲಿಯಾದ ಸ್ಕೂಲ್ಕೇಟ್ ಅವರನ್ನು ಹಿಮ್ಮೆಟ್ಟಿಸಿದರು.

ಕೊನೆಗಳಿಗೆಯಲ್ಲಿ ಟೂರ್ನಿಯ ಕ್ವಾಲಿಫೈಯಿಂಗ್ ವಿಭಾಗದಲ್ಲಿ ಸ್ಪರ್ಧಿಸುವ ಅವಕಾಶ ಪಡೆದಿದ್ದ 30 ವರ್ಷ ವಯಸ್ಸಿನ ಹ್ಯಾರಿಸ್ ಎರಡನೇ ಸುತ್ತಿನಲ್ಲಿ ಮುಗ್ಗರಿಸಿದ್ದರು. ಆದರೆ, ಪ್ರಧಾನ ಸುತ್ತಿನಲ್ಲಿ ಆಡಬೇಕಾಗಿದ್ದ ಕೆನಡಾದ ಅಲೆಕ್ಸಿಸ್ ಗಲರ್ನೆ ಹಿಂದೆ ಸರಿದ ಕಾರಣ 'ಲಕ್ಕಿ ಲೂಸರ್' ಆಗಿ ಮುಖ್ಯಸುತ್ತಿಗೆ ಅವಕಾಶ ಪಡೆದಿದ್ದರು.

ಮೊದಲ ಸೆಟ್‌ನಲ್ಲಿ ಹ್ಯಾರಿಸ್ ಪಾರಮ್ಯ ಮೆರೆದರೆ, ಎರಡನೇ ಸೆಟ್‌ನಲ್ಲಿ 26 ವರ್ಷ ವಯಸ್ಸಿನ ಸ್ಕೂಲ್ಕೇಟ್ ಹಿಡಿತ ಸಾಧಿಸಿದರು. ರೋಚಕತೆ ಪಡೆದ ನಿರ್ಣಾಯಕ ಸೆಟ್‌ನಲ್ಲಿ ಮತ್ತೆ ಹ್ಯಾರಿಸ್ ಮೇಲುಗೈ ಸಾಧಿಸಿ ಮುನ್ನಡೆದರು. ಅವರು ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಮೂರನೇ ಶ್ರೇಯಾಂಕದ ಬ್ರಾಂಡನ್ ಹಾಲ್ಟ್ ಅವರನ್ನು ಎದುರಿಸಲಿದ್ದಾರೆ.

ಅಮೆರಿಕದ 26 ವರ್ಷ ವಯಸ್ಸಿನ ಹಾಲ್ಟ್ 6-4, 6-4ರಿಂದ ರಷ್ಯಾದ ಪೀಟರ್ ಬಾರ್ ಬಿರ್ಯುಕೋವ್ ಅವರನ್ನು ಸೋಲಿಸಿದರು. ಮೊದಲೆರಡು ಶ್ರೇಯಾಂಕದ ಆಟಗಾರರು ಟೂರ್ನಿಯಿಂದ ಹೊರಬಿದ್ದಿರುವುದರಿಂದ ಹಾಲ್ಟ್ ಕಣದಲ್ಲಿ ಉಳಿದಿರುವ ಉನ್ನತ ಶ್ರೇಯಾಂಕದ ಆಟಗಾರನಾಗಿದ್ದಾರೆ.

ಝೆಕ್ ಗಣರಾಜ್ಯದ ಕ್ವಾಲಿಫೈಯರ್ ಆಟಗಾರ ಹೈನೆಲ್ ಬಾರ್ಟನ್ ಅವರ ಕನಸಿನ ಓಟಕ್ಕೆ ವಿರಾಮ ಬಿತ್ತು. ಏಳನೇ ಶ್ರೇಯಾಂಕದ ಶಿಂಟಾರೊ ಮೊಚಿಜುಕಿ 7-6(5), 6-3ರಿಂದ 20 ವರ್ಷ ವಯಸ್ಸಿನ ಬಾರ್ಟನ್ ಅವರನ್ನು ಮಣಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು. ಜಪಾನ್‌ನ ಶಿಂಟಾರೊ ಮುಂದಿನ ಸುತ್ತಿನಲ್ಲಿ ಆಸ್ಟ್ರೇಲಿಯಾದ ಜೇಮ್ಸ್ ಮೆಕ್‌ಕ್ಯಾಬ್ ಅವರ ಸವಾಲನ್ನು ಎದುರಿಸುವರು. ಜೇಮ್ಸ್ 4-6, 6-4, 6-3ರಿಂದ ಕೊಲಂಬಿಯಾದ ನಿಕೋಲಸ್ ಮೆಜಿಯಾ ಅವರನ್ನು ಮಣಿಸಿದರು.

ಭಾರತದ ಜೋಡಿಗಳಿಗೆ ನಿರಾಸೆ: ಹಾಲಿ ಚಾಂಪಿಯನ್ ಭಾರತದ ಸಾಕೇತ್ ಮೈನೇನಿ– ರಾಮಕುಮಾರ್ ರಾಮನಾಥನ್ ಜೋಡಿ ಡಬಲ್ಸ್‌ನ ಸೆಮಿಫೈನಲ್‌ನಲ್ಲಿ ಹೊರಬಿತ್ತು. ಸಿದ್ಧಾಂತ್ ಬಂಥಿಯಾ – ಪರೀಕ್ಷಿತ್ ಸೊಮಾನಿ ಅವರಿಗೂ ನಿರಾಸೆಯಾಯಿತು.

ಅಗ್ರ ಶ್ರೇಯಾಂಕದ ಅನಿರುದ್ಧ ಚಂದ್ರಶೇಖರ್ (ಭಾರತ)– ರೇ ಹೊ (ತೈವಾನ್) ಮತ್ತು ಎರಡನೇ ಶ್ರೇಯಾಂಕದ ಬ್ಲೇಕ್ ಬೇಲ್ಡನ್– ಮ್ಯಾಥ್ಯೂ ಕ್ರಿಸ್ಟೋಫರ್ ರೋಮಿಯೋಸ್ (ಆಸ್ಟ್ರೇಲಿಯಾ) ಜೋಡಿಗಳು ಶನಿವಾರ ಫೈನಲ್‌ನಲ್ಲಿ ಸೆಣಸಲಿವೆ.

ಚೆಸ್: ಅರವಿಂದ್‌ಗೆ ಮಣಿದ ಕೀಮರ್

ಪ್ರಾಗ್ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಪ್ರಾಗ್ ಮಾಸ್ಟರ್ಸ್ ಟೂರ್ನಿಯಲ್ಲಿ ಸತತ ಎರಡನೇ ಪಂದ್ಯ ಡ್ರಾ ಮಾಡಿಕೊಂಡರು. ಅವರು ಶುಕ್ರವಾರ ಟರ್ಕಿಯ ಎಡಿಲ್ ಗುರೆಝ್ ಜೊತೆ 46 ನಡೆಗಳ ನಂತರ ಪಾಯಿಂಟ್ ಹಂಚಿಕೊಂಡರು. ಭಾರತದ ಇನ್ನೊಬ್ಬ ಆಟಗಾರ ಅರವಿಂದ ಚಿದಂಬರಂ ಅವರು ಜರ್ಮನಿಯ ವಿನ್ಸೆಂಟ್ ಕೀಮರ್ ಅವರ ರಕ್ಷಣಾ ಕೋಟೆ ಛಿದ್ರಗೊಳಿಸಿ ಜಯಗಳಿಸಿದರು.

ಮೊದಲ ಸುತ್ತಿನಲ್ಲಿ ಡ್ರಾ ಮಾಡಿಕೊಂಡಿದ್ದ ಚಿದಂಬರಮ್ (1.5), ಎರಡನೇ ಪಂದ್ಯವನ್ನು ಕಪ್ಪುಕಾಯಿಗಳಲ್ಲಿ ಆಡಿ ಕೀಮರ್ (1) ವಿರುದ್ಧ ಜಯಗಳಿಸಿದರು. ಎರಡನೇ ಸುತ್ತಿನ ಐದು ಪಂದ್ಯಗಳಲ್ಲಿ ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು.

ಎರಡು ಸುತ್ತುಗಳ ಬಳಿಕ ಪ್ರಜ್ಞಾನಂದ ಒಂದು ಪಾಯಿಂಟ್, ಗುರೆಝ್ ಅರ್ಧ ಪಾಯಿಂಟ್ ಗಳಿಸಿದ್ದಾರೆ. ಚೀನಾದ ವೀ ಯಿ (0.5) ಅವರು ಹಾಲೆಂಡ್ ಅನಿಶ್ ಗಿರಿ (1) ಜೊತೆ; ಝೆಕ್ ಗಣರಾಜ್ಯದ ಗುಯೆನ್ ಥಾಯ್ ದೈವಾನ್ (1), ಅಮೆರಿಕದ ಸ್ಯಾಮ್ ಶಂಕ್ಲಾಡ್ (1.5) ಜೊತೆ; ಡೇವಿಡ್ ನವಾರ (1), ವಿಯೆಟ್ನಾಮಿನ ಲಿ ಕ್ವಾಂಗ್ ಲೀಮ್ (1) ಜೊತೆ ಪಾಯಿಂಟ್ ಹಂಚಿಕೊಂಡರು.

ಚಾಲೆಂಜರ್ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ (1), ಝೆಕ್ ರಿಪಬ್ಲಿಕ್‌ನ ರಿಚರ್ಡ್ ಸ್ಟಾಲ್‌ಮಾಕ್ (0.5) ಅವರನ್ನು ಸೋಲಿಸಿದರು.

ಡ್ರೀಮ್ ಯುನೈಟೆಡ್‌ಗೆ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ 2–0ಯಿಂದ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ರೂಟ್ಸ್ ಎಫ್‌ಎಸ್ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡ್ರೀಮ್ ತಂಡದ ಕೆ.ಲಾಲ್‌ರಿನ್ಫೆಲಾ (8ನೇ ನಿ.) ಮತ್ತು ಅಲ್ಸಾನ್ ಫರ್ನಾಂಡಿಸ್ (50ನೇ ನಿ.) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ವಿಜಯ ನಗರ ಎಫ್‌ಸಿ 3–0 ಗೋಲುಗಳಿಂದ ಆರ್‌ಡಬ್ಲ್ಯುಎಫ್ ಎಫ್‌ಸಿ ತಂಡವನ್ನು ಸೋಲಿಸಿತು. ಹೆನ್‌ತಿನಸಿ ಕಿಪ್‌ಗೆನ್ (10ನೇ ನಿ.), ಎಂಡಿ ಒಮರ್ ಫಾರೂಕ್ (53ನೇ ನಿ.) ಮತ್ತು ಎಸ್.ಜಿ. ಆ್ಯಂಥೋನಿ ಕ್ಲಿಂಟನ್ (79ನೇ ನಿ.) ಗೋಲು ಬಾರಿಸಿದರು.

ಯಂಗ್ ಡೈನಮೋಸ್‌ಗೆ ಗೆಲುವು: ಯಂಗ್ ಡೈನಮೋಸ್ ತಂಡ ಸಿ ಡಿವಿಷನ್ ಲೀಗ್ ಪಂದ್ಯದಲ್ಲಿ ಬಾಗಲಗುಂಟೆ ಎಫ್‌ಸಿ ವಿರುದ್ಧ 4–0 ಗೋಲುಗಳಿಂದ ಗೆದ್ದುಕೊಂಡಿತು. ಇನ್ನೊಂದು ಪಂದ್ಯದಲ್ಲಿ ಜೈ ಭಾರತ್ ನಗರ ಎಫ್‌ಸಿ ತಂಡ ಎದುರಾಳಿ ಸಿಟಿ ಕ್ಲಬ್ ಎಫ್‌ಸಿ ವಿರುದ್ಧ 8–0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಬೋರಿಸ್ ಸ್ಪಾಸ್ಕಿ ನಿಧನ



ಮಾಸ್ಕೊ (ಎಪಿ): ಸೋವಿಯತ್ ಕಾಲದ ಚೆಸ್ ವಿಶ್ವ ಚಾಂಪಿಯನ್ ಬೋರಿಸ್ ಸ್ಪಾಸ್ಕಿ (88) ಗುರುವಾರ ಮಾಸ್ಕೊದಲ್ಲಿ ನಿಧನರಾದರು ಎಂದು ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ ಪ್ರಕಟಿಸಿದೆ. ಅವರು ಹತ್ತನೇ ವಿಶ್ವ ಚಾಂಪಿಯನ್ ಆಗಿದ್ದರು.

ಅವರ ನಿಧನಕ್ಕೆ ಕಾರಣ ತಿಳಿಸಲಾಗಿಲ್ಲ. 1969ರಿಂದ 1972ರವರೆಗೆ ವಿಶ್ವ ಚಾಂಪಿಯನ್ ಆಗಿದ್ದ ಸ್ಪಾಸ್ಕಿ, ಶೀತಲ ಸಮರ (ಆಗಿನ ಸೋವಿಯತ್ ರಷ್ಯಾ ಮತ್ತು ಅಮೆರಿಕ ನಡುವೆ) ಉತ್ತುಂಗದಲ್ಲಿದ್ದ ಕಾಲದಲ್ಲಿ ಆಯೋಜನೆಗೊಂಡ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ (1972ರಲ್ಲಿ), ಅಮೆರಿಕದ ಬಾಬಿ ಫಿಷರ್ ಅವರಿಗೆ ಸೋತಿದ್ದರು.

ಐಸ್‌ಲ್ಯಾಂಡಿನ ರೆಕ್ಯವಿಕ್‌ನಲ್ಲಿ ನಡೆದ ಈ ಫೈನಲ್ ಪಂದ್ಯ ಟೆಲಿವಿಷನ್‌ನಲ್ಲಿ ಪ್ರಸಾರಗೊಂಡಿದ್ದು, 'ಶತಮಾನದ ಪಂದ್ಯ' ಎಂದು ಬಣ್ಣಿಸಲಾಗಿತ್ತು. ಫಿಷರ್ ಗೆದ್ದರೂ, ಪಟ್ಟ ಉಳಿಸಿಕೊಳ್ಳಲು 1975ರ ಫೈನಲ್‌ನಲ್ಲಿ ಆಡಲು ನಿರಾಕರಿಸಿದ್ದರು. ಇದರಿಂದ ಅವರು ಆ ಪಟ್ಟವನ್ನು ಎದುರಾಳಿ ಅನತೋಲಿ ಕಾರ್ಪೋವ್‌ಗೆ ಬಿಟ್ಟುಕೊಡಬೇಕಾಯಿತು. 1976ರಲ್ಲಿ ಅವರು ಫ್ರಾನ್ಸ್‌ಗೆ ವಲಸೆ ಹೋಗಿದ್ದರು. ಫಿಷರ್ 2008ರಲ್ಲಿ ನಿಧನರಾಗಿದ್ದರು.

ಟೆನ್‌ಪಿನ್: ಆಕಾಶ್, ಪ್ರೀಮಲ್‌ಗೆ ಪ್ರಶಸ್ತಿ


ಪ್ರಶಸ್ತಿಯೊಂದಿಗೆ ಆಕಾಶ್ ಅಶೋಕ್ ಕುಮಾರ್ ಮತ್ತು ಪ್ರೀಮಲ್ ಜೆ.

ಬೆಂಗಳೂರು: ಆಕಾಶ್ ಅಶೋಕ್ ಕುಮಾರ್ ಮತ್ತು ಪ್ರೀಮಲ್ ಜೆ. ಅವರು ಇಲ್ಲಿನ ಅಮೀಬಾ ಬೌಲಿಂಗ್ ಸೆಂಟರ್‌ನಲ್ಲಿ ನಡೆದ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೆನ್‌ಪಿನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದರು.

ಶುಕ್ರವಾರ ನಡೆದ ಪುರುಷರ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಆಕಾಶ್ 391–351ರಿಂದ ನಾಲ್ಕನೇ ಶ್ರೇಯಾಂಕದ ಪರ್ವೇಜ್ ಅಹಮ್ಮದ್ ಅವರನ್ನು ಮಣಿಸಿದರು. ಮಹಿಳೆಯರ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಪ್ರೀಮಲ್ 346–337ರಿಂದ ಎರಡನೇ ಶ್ರೇಯಾಂಕದ ಹಿತಾಶಾ ಸಿಸೋಡಿಯಾ ಅವರನ್ನು ಸೋಲಿಸಿದರು.

ಡೆಲ್ಲಿ ಕ್ಯಾಪಿಟಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಮಹಿಳಾ ಪ್ರೀಮಿಯರ್ ಲೀಗ್

ಬೆಂಗಳೂರು: ಜೆಸ್ ಜೊನಾಸೆನ್ ಮತ್ತು ಮಿನು ಮಣಿ ಅವರ ಅಮೋಘ ಬೌಲಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮುಂಬೈ ಇಂಡಿಯನ್ಸ್ ವಿರುದ್ಧ ಜಯಿಸಿತು.

ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಡೆಲ್ಲಿ ತಂಡವು ಅಗ್ರಸ್ಥಾನಕ್ಕೇರಿತು. ಮುಂಬೈ ಎರಡನೇ ಸ್ಥಾನಕ್ಕಿಳಿಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 123 ರನ್ ಗಳಿಸಿತು. ಜೆಸ್ (25ಕ್ಕೆ3) ಮತ್ತು ಮಿನು (17ಕ್ಕೆ3) ಅಮೋಘ ಬೌಲಿಂಗ್ ಮಾಡಿದರು. ಗುರಿ ಬೆನ್ನತ್ತಿದ ಡೆಲ್ಲಿ ತಂಡವು 9 ವಿಕೆಟ್‌ಗಳಿಂದ ಜಯಿಸಿತು. ನಾಯಕಿ ಮೆಗ್ ಲ್ಯಾನಿಂಗ್ (ಔಟಾಗದೇ 60; 49ಎ, 4X9) ಅರ್ಧಶತಕ ಮತ್ತು ಶಫಾಲಿ ವರ್ಮಾ (43; 28ಎ) ಅವರ ಬ್ಯಾಟಿಂಗ್ ಬಲದಿಂದ ಡೆಲ್ಲಿ ತಂಡವು 14.3 ಓವರ್‌ಗಳಲ್ಲಿ 1 ವಿಕೆಟ್‌ಗೆ 124 ರನ್ ಗಳಿಸಿತು.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ತಂಡಕ್ಕೆ ಯಷ್ಟಿಕಾ ಭಾಟಿಯಾ (11 ರನ್) ಮತ್ತು ಹೆಲಿ ಮ್ಯಾಥ್ಯೂಸ್ (22 ರನ್) ಉತ್ತಮ ಆರಂಭ ನೀಡಿದರು. ಆದರೆ 6ನೇ ಓವರ್‌ನಲ್ಲಿ ಶಿಖಾ ಪಾಂಡೆ ಬೌಲಿಂಗ್‌ನಲ್ಲಿ ಯಷ್ಟಿಕಾ ಔಟಾದರು. ಇದರ ನಂತರ ಕ್ರೀಸ್‌ಗೆ ಬಂದವರು ದೊಡ್ಡ ಇನಿಂಗ್ಸ್ ಕಟ್ಟುವ ಭರವಸೆ ಮೂಡಿಸಲಿಲ್ಲ. ಹೆಲಿ ಮ್ಯಾಥ್ಯೂಸ್ ಮತ್ತು ಹರ್ಮನ್‌ಪ್ರೀತ್ ಕೌರ್ ತಲಾ 22 ರನ್ ಗಳಿಸಿದ್ದು ತಂಡದ ವೈಯಕ್ತಿಕ ಗರಿಷ್ಠ ಸ್ಕೋರ್‌ಗಳಾಗಿವೆ. ಎಡಗೈ ಸ್ಪಿನ್ನರ್ ಜೆಸ್ ಮತ್ತು ಆಫ್‌ಬ್ರೇಕ್ ಸ್ಪಿನ್ನರ್ ಮಿನು ಮಣಿ ಅವರು ಮುಂಬೈ ತಂಡದ ಬ್ಯಾಟಿಂಗ್ ಪಡೆಯನ್ನು ಕಾಡಿದರು. 6 ಬೌಲರ್‌ಗಳನ್ನು ನಿಯೋಜಿಸಲಾಯಿತು. ಅದರಲ್ಲಿ ತಿತಾಸ್ ಸಾಧು ಮಾತ್ರ 2 ಓವರ್‌ಗಳಲ್ಲಿ 12 ರನ್ ಕೊಟ್ಟು ದುಬಾರಿಯಾದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9ಕ್ಕೆ123 (ಹೆಲಿ ಮ್ಯಾಥ್ಯೂಸ್ 22, ಹರ್ಮನ್‌ಪ್ರೀತ್ ಕೌರ್ 22, ಜೆಸ್ ಜೊನಾಸೆನ್ 25ಕ್ಕೆ3, ಮಿನು ಮಣಿ 17ಕ್ಕೆ3) ಡೆಲ್ಲಿ **ಕ್ಯಾಪಿಟಲ್ಸ್:** 14.3 ಓವರ್‌ಗಳಲ್ಲಿ 1 ವಿಕೆಟ್‌ಗೆ 124 (ಮೆಗ್ ಲ್ಯಾನಿಂಗ್ ಔಟಾಗದೇ 60, ಶಫಾಲಿ ವರ್ಮಾ 43).

ಪಂದ್ಯದ ಆಟಗಾರ್ತಿ: ಜೆಸ್ ಜೊನಾಸೆನ್


ಜೆಸ್ ಜೊನಾಸೆನ್

ಆರ್‌ಸಿಬಿಗೆ ಸೋಲಿನ ಸರಪಳಿ ಕಳಚುವ ತವಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸತತ ಮೂರು ಸೋಲುಗಳಿಂದ ಕಂಗೆಟ್ಟಿದೆ. ತವರಿನ ಅಭಿಮಾನಿಗಳಿಗೆ ನಿರಾಶೆ ಮೂಡಿಸಿದೆ.

ಆತಿಥೇಯ ತಂಡವು ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಬೆಂಗಳೂರಿನಲ್ಲಿ ನಡೆಯಲಿರುವ ಈ ವರ್ಷದ ಕೊನೆಯ ಡಬ್ಲ್ಯುಪಿಎಲ್ ಪಂದ್ಯವೂ ಇದಾಗಿದೆ. ನಂತರ ಲೀಗ್ ಹಂತದ ಪಂದ್ಯಗಳು ಲಖನೌ ಹಾಗೂ ನಾಕೌಟ್ ಪಂದ್ಯಗಳು ಮುಂಬೈನಲ್ಲಿ ನಡೆಯಲಿವೆ.

ಸದ್ಯ ಸ್ಮೃತಿ ಬಳಗವು ಪಾಯಿಂಟ್ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ಇನ್ನುಳಿದ 3 ಪಂದ್ಯಗಳಲ್ಲಿ ಎರಡು ಗೆದ್ದರೂ ನಾಕೌಟ್ ಹಾದಿ ಸುಗಮವಾಗಲಿದೆ. ಆದರೆ ಇಲ್ಲಿಯವರೆಗೂ ಸೋತ ಪಂದ್ಯಗಳಲ್ಲಿ ಮಾಡಿರುವ ಲೋಪಗಳನ್ನು ತಿದ್ದಿಕೊಂಡು ಕಣಕ್ಕಿಳಿಯುವ ಸವಾಲು ಇದೆ. ಚಾಂಪಿಯನ್ ತಂಡಕ್ಕೆ ತಕ್ಕಂತೆ ಆಡಬೇಕಿದೆ.

ಗುರುವಾರ ಗುಜರಾತ್ ಟೈಟನ್ಸ್ ತಂಡದ ಎದುರು ಆಡಿದ ರೀತಿಯು ಕಳಪೆಯಾಗಿತ್ತು. ಸ್ಮೃತಿ ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ವಿಫಲರಾದರು. ರಿಚಾ ಘೋಷ್, ವೈಟ್ ಹಾಜ್ ಅವರ ಅಸ್ಥಿರತೆ ಮುಂದುವರಿಯಿತು. ಸತತ ಎರಡು ಪಂದ್ಯಗಳಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದ ಎಲಿಸ್ ಪೆರಿ ಅವರ ಮೇಲೆಯೇ ತಂಡದ ಬ್ಯಾಟಿಂಗ್ ಅವಲಂಬಿತವಾಗಿದೆ. ಗುಜರಾತ್ ಎದುರು ಪೆರಿ ಸೊನ್ನೆಗೆ ಔಟಾದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಕನಿಕಾ ಅಹುಜಾ ಮತ್ತು ರಾಘವಿ ಬಿಷ್ಠ್ ಅವರಿಬ್ಬರ ಬ್ಯಾಟಿಂಗ್‌ನಿಂದಾಗಿ ತಂಡವು ಸಾಧಾರಣ ಮೊತ್ತ ಗಳಿಸಿತು.

ಆದರೆ ಗುಜರಾತ್ ತಂಡದ ನಾಯಕಿ ಆ್ಯಷ್ಲೆ ಗಾರ್ಡನರ್ ಅವರನ್ನು ನಿಯಂತ್ರಿಸಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ರೇಣುಕಾ ಯಾದವ್ ಮತ್ತು ಜಾರ್ಜಿಯಾ ವೇರ್‌ಹ್ಯಾಮ್ ಅವರಿಬ್ಬರು ಮಾತ್ರ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾದರು. ಉಳಿದವರ ಬೌಲಿಂಗ್ ಪರಿಣಾಮಕಾರಿಯಾಗಿರಲಿಲ್ಲ.

ಡೆಲ್ಲಿ ತಂಡದಲ್ಲಿ ಉತ್ತಮ ಫಾರ್ಮ್‌ನಲ್ಲಿರುವ ಶಫಾಲಿ ವರ್ಮಾ, ಜೆಸ್ ಜೊನಾಸೆನ್, ನಾಯಕಿ ಮೆಗ್ ಲ್ಯಾನಿಂಗ್ ಹಾಗೂ ಕರ್ನಾಟಕದ ನಿಕಿ ಪ್ರಸಾದ್ ಅವರನ್ನು ಕಟ್ಟಿ ಹಾಕಲು ಬೌಲರ್‌ಗಳು ಪರಿಣಾಮಕಾರಿ ಬೌಲಿಂಗ್ ಮಾಡುವ ಒತ್ತಡವಿದೆ. ಡೆಲ್ಲಿ ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30; ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ಸ್


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ (ಮಧ್ಯದಲ್ಲಿ) ಮತ್ತು ಸಹ ಆಟಗಾರ್ತಿಯರ ಅಭ್ಯಾಸ –ಪ್ರಜಾವಾಣಿ ಚಿತ್ರ